ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 7
ಫೆಬ್ರವರಿ 16, 2003 ಬೆಲೆ ರೂ. 3.00




ಕೇಂದ್ರ -ರಾಜ್ಯ ಸರಕಾರಗಳ ವಿದ್ಯುತ್ ನೀತಿ ಕರ್ನಾಟಕದ ಅವನತಿ



ಗಾಂಧೀಜಿ ನಿತ್ಯ ಹತ್ಯೆಯಲ್ಲಿ




ಹಾಸನ ಬಜರಂಗ ದಳದ ಹಾವಳಿ



ಸಿಬರ್ಡ್ ನಿರಾಶ್ರಿತರು


ಕಡಲ ಹಕ್ಕಿಗಳಿಗೆ ಕಾಣದ ನೆಲೆ



ಕ್ರಿಕೆಟ್ : ವಿಶ್ವಕಪ್ ಆರಂಭ

ಜನತೆಯ ಅದುಮಿಟ್ಟ ಸಿಟ್ಟು ಸ್ಫೋಟ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

15



ಕಳೆದ ಸಂಚಿಕೆಯಲ್ಲಿ ಓಹ್ ನೀನೂ, ನಿನ್ನಂಥ ರ್‍ಯಾಸ್ಕಲ್‌ಗಳು ಈ ದೇಶಕ್ಕೆ ಶಾಪ ಎಂದು ಗುಡುಗಿದ ಕ್ಯಾಪ್ಟನ್ ವೈ. ಲಾಹೋರ್‌ನಲ್ಲಿ ಜೈಪಾಲ್‌ರ ಮೇಲೆ ಹದ್ದಿನ ಕಣ್ಣು, ಲಾಹೋರಿನಲ್ಲಿ ಭಾರತೀಯ ರಾಜಕೀಯ ಪಕ್ಷಗಳ ಜೊತೆ ಸಿಂಗ್‌ರ ಸಂಪರ್ಕ, ಕೆಂಪು ಸಾಹಸದ ರುಚಿ ಮತ್ತು ಗೆರಿಲ್ಲಾ ತರಬೇತಿ ಮಾಹಿತಿ ಈ ಬಗ್ಗೆ ಓದಿರುವಿರಿ ಮುಂದೆ.......

ಕನ್ನಡಕ್ಕೆ: ವಿಶ್ವ ಕುಂದಾಪುರ

ಇನ್ನು ಮುಂದೆ ನರ್ತನ ಕೂಟಗಳಲ್ಲಿ ನಾವು ಯಾವತ್ತೂ ಭೇಟಿಯಾಗಬಾರದೆಂದು ನಿರ್ಧರಿಸಿದೆವು.

ಈಗ ನನ್ನ ಬೇಟೆಯ ಹುಡುಕಾಟ 'ಚನ್ನಪ್ಪ ಲಂಚ್ ಹೋಮ್' ನತ್ತ ಆರಂಭವಾಯಿತು. ಸಂಜೆ ಹೊತ್ತು ಆ ಕಡೆ ಸುಳಿಯತೊಡಗಿದೆ. ಪ್ರತಿದಿನ ಸಂಜೆ ಸುಸಜ್ಜಿತ ಭೂಗತ ಸೆಲ್‌ನಲ್ಲಿ ಕುಳಿತು ಕಾಫಿ ಕುಡಿಯುತ್ತಾ 'ಜನತಾ ಸಮರ' (ಪೀಪಲ್ಸ್‌ವಾರ್) ಸಾಹಿತ್ಯ ಓದತೊಡಗಿದೆ. ನಾನು ಅದನ್ನು ಕಮ್ಯುನಿಸ್ಟರಿಂದ ಖರೀದಿಸಿದ್ದೆ. ಸಾಹಿತ್ಯ ಮಾರಾಟ· ಮಾಡಲು ಮೂವರು ಕಮ್ಯುನಿಸ್ಟ್ ಹುಡುಗಿಯರು ನಿಯಮಿತವಾಗಿ ಅಲ್ಲಿಗೆ ಬರುತ್ತಿದ್ದರು. ನಾನು ಆಗಿನ್ನೂ ಕಮ್ಯುನಿಸ್ಟ್ ಆಗಿರಲಿಲ್ಲ. ಮಾರ್ಕ್ಸ್‌ವಾದಿ ಲೆನಿನ್‌ವಾದಿ ಚಿಂತನೆಯ ಪರಿಚಯ ಇನ್ನೂ ಆಗಬೇಕಿತ್ತಷ್ಟೆ.

ಕಮ್ಯುನಿಸ್ಟ್ ಸಾಹಿತ್ಯದ ಮೊದಲ ಪರಿಚಯ

ಪ್ರಾಸಂಗಿಕವಾಗಿ ಹೇಳಬೇಕೆಂದರೆ, ಶ್ರೀಮತಿ ವಿಕ್ಟರ್ ಕೀರ್ನನ್ (ಶಾಂತಾಗಾಂಧಿ) ರಿಂದ ನನ್ನ ಮೊದಲ ಕಮ್ಯುನಿಸ್ಟ್ ಸಾಹಿತ್ಯ ಪಡೆದೆ. ಬಾಬ್‌ಕಟ್ ಕೂದಲಿನ, ಸರಳ ಉಡುಗೆಯ, ನಿರಂತರ ಹೊಗೆಬತ್ತಿ ಸೇದುತ್ತಿದ್ದ ಆಕೆ 20 ರಿಂದ 30 ಪುಸ್ತಿಕೆಗಳನ್ನು ನನಗೆ ಮಾರಿದ್ದರು. ಅವುಗಳಲ್ಲಿ ಜನತಾ ಸಮರ ಕುರಿತ ಜೋಷಿಯವರ ಪ್ರಬಂಧವೂ ಸೇರಿತ್ತು. ಸಾಹಿತ್ಯ ಮಾರುತ್ತಿದ್ದ ಲಿಟ್ಟೊ ಮತ್ತು ಶ್ರೀಮತಿ ಭರೂಚಾ (ಈಗ ಪೆರಿನ್ ರಮೇಶ್ ಚಂದ್ರ)ರನ್ನು ನೋಡಿದ್ದು ಇಲ್ಲಿಯೇ.

ನನ್ನ ಗೆಳೆಯ ಸತ್ವಂತ್ ಸೇರಿದಂತೆ ಇನ್ನು ಅನೇಕ ಯುವ ಕಮ್ಯುನಿಸ್ಟರು ಈ ಜಾಗದಲ್ಲಿ ಸುಳಿದಾಡುತ್ತಿದ್ದರು. ನಾನು ದೂರದಿಂದಲೇ ಅವರನ್ನು ನೋಡುತ್ತಿದ್ದೆ. ಮುಂದೊಂದು ದಿನ ನಾವು ಸಂಗಾತಿಗಳಾಗುತ್ತೇವೆ ಎಂಬುದರ ಕಿಂಚಿತ್ತು ಕಲ್ಪನೆಯೂ ನನಗಾಗ ಇರಲಿಲ್ಲ. ಅವರು ಶ್ರೀಮತಿ ರಮೇಶ ಚಂದ್ರ ಮತ್ತು ಶ್ರೀಮತಿ ಅಜಯ ಘೋಷ್ ಎಂಬುದೂ ಗೊತ್ತಿರಲಿಲ್ಲ.

> **ಅಪ್ಪಟ ಪಾಶ್ಚಿಮಾತ್ಯರಂತೆ ಉಡುಗೆ ತೊಡುಗೆ ತೊಟ್ಟು ಕುಣಿತದಲ್ಲಿಯೂ ಪ್ರವೀಣರಾಗಿದ್ದ 'ಶೇಖ್ ಸೋದರಿಯರು' ಪಿತೂರಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿರುವ ಸುಳಿವನ್ನು ಯಾರಿಗೂ ಎಳ್ಳಷ್ಟೂ ನೀಡಲಿಲ್ಲ. ತುಂಬಾ ಬುದ್ಧಿವಂತಿಕೆಯಿಂದ ಅವರು ಕೆಲಸ ಸಾಗಿಸುತ್ತಿದ್ದರು.**

ಎರಡನೇ ವಿಶ್ವ ಯುದ್ಧದ ಕುರಿತು ಕಮ್ಯುನಿಸ್ಟರ ಧೋರಣೆ ನನಗೆ ಆ ವಿಚಾರದಲ್ಲಿ ಹೊಸ ಕಣ್ಣೋಟ ನೀಡಿತು. 1942ರ ಆಗಸ್ಟ್ ಚಳುವಳಿಯಲ್ಲಿ ಭಾರತೀಯ ಸಶಸ್ತ್ರ ಪಡೆಗಳು ನೇರವಾಗಿ ಪಾಲ್ಗೊಳ್ಳುವುದನ್ನು ನಾನು ವಿರೋಧಿಸಲು ಕಾರಣವಾದ ಅಂಶವನ್ನು ಅದೇ ಮೊದಲ ಬಾರಿಗೆ ಮುಂಗಾಣಲು ನನಗೆ ಸಾಧ್ಯವಾಯಿತು.

ಸಶಸ್ತ್ರ ಪಡೆಗಳ ಹೊರಗೆ ಮತ್ತು ಒಳಗಡೆ ನನ್ನ ಸಹೋದ್ಯೋಗಿಗಳಾಗಿ, ಹಾಗೂ ಸಂಘಟನೆಯ ಸದಸ್ಯರಾಗಿದ್ದು ನನ್ನನ್ನು ಕಮ್ಯುನಿಸ್ಟ್ ಎಂದು ತಪ್ಪಾಗಿ ತಿಳಿದಿದ್ದ ಎಲ್ಲರಿಗೂ ನಾನು ಆಗ ಕಮ್ಯುನಿಸ್ಟ್ ಪಕ್ಷದ ಸದಸ್ಯನಾಗಿರಲಿಲ್ಲ ಎಂಬುದನ್ನು ಈ ಮೂಲಕ ತಿಳಿಸಬಯಸುತ್ತೇನೆ. ಯುದ್ಧ ಮುಗಿದ ಬಹಳ ಕಾಲದ ನಂತರ ನಾನು ಕಮ್ಯುನಿಸ್ಟ್ ಪಕ್ಷದ ಸದಸ್ಯನಾದೆ. ಆಗಸ್ಟ್‌ನಲ್ಲಿ ನಡೆದ ಆ ಐತಿಹಾಸಿಕ ಸಭೆಯಲ್ಲಿ ನಾನು ವ್ಯಕ್ತಪಡಿಸಿದ್ದು ನನ್ನ ವೈಯಕ್ತಿಕ ಅಭಿಪ್ರಾಯಗಳಾಗಿದ್ದವು. ಆದರೆ ಅವು ಚನ್ನಪ್ಪ ಲಂಚ್ ಹೋಂನಲ್ಲಿ ನಾನು ಪಡೆದಿದ್ದ ಕಮ್ಯುನಿಸ್ಟ್ ಸಾಹಿತ್ಯಾದಿಂದ ರೂಪುಗೊಂಡಿದ್ದಾಗಿರ ಬಹುದೇನೋ ಹೌದು.

ಜನತೆಯ ಅದುಮಿಟ್ಟ ಸಿಟ್ಟು ಸ್ಫೋಟ.

ನನ್ನ ಬಗ್ಗೆ ಒಳ್ಳೆಯ ವರದಿ ಸಿಗುವಂತೆ 'ಶೇಖ್ ಸೋದರಿಯರು' ಕಷ್ಟಪಟ್ಟು ಕೆಲಸ ಮಾಡಿದರು. ಪ್ರತಿದಿನ ಸಂಜೆ ಕೆಂಚುಕೂದಲಿನವರು ಅವರ ಜತೆ ವರ್ತಿಸಿದರು ಹಾಗೂ ಹುಚ್ಚಾಪಟ್ಟೆ ಹಣ ಖರ್ಚು ಮಾಡಿದರು. ನಾನು ಆಗಾಗ ಹೋಗಿ ಕೆಲವು ಮಾತುಗಳನ್ನಾಡಿದೆ. ಸುಖವರಸಿ ಬಂದ ಯುವ ಅಧಿಕಾರಿಯಂತೆ ನಾನು ನಟಿಸಿದೆ.

ಶೇಖ್ ಸೋದರಿಯರು ಕ್ಯಾಪ್ಟನ್ ಮೇಲೆ ಪ್ರಭಾವ ಬೀರಲು ಯಾವ ಮಾರ್ಗಗಳನ್ನು ಅನುಸರಿಸಿದರು ಎಂಬುದು ನನಗೆ ಗೊತ್ತಿಲ್ಲ. ಮೇಜರ್ ಕ್ಯಾನಿಂಗ್ ನನ್ನ ಬಗ್ಗೆ ವರದಿ ಸಲ್ಲಿಸಲಿರುವ ಕೆಲವೇ ದಿನಗಳ ಮುಂಚೆ ಕ್ಯಾಪ್ಟನ್ ವೇ. ಕ್ಯಾನಿಂಗ್‌ಗೆ ವರದಿ ಮಾಡಿದ. ಜೈಪಾಲ್‌ಗೂ ರಾಜಕೀಯಕ್ಕೂ ಮೈಲುದ್ದದ ಅಂತರವಿದೆ. ಉತ್ತಮವಾಗಿ ಕೆಲಸ ಮಾಡುವ ಆಸಾಮಿ ಹಾಗೂ ಸಬ್‌ವರಿಯಾ ಅಧಿಕಾರಿಗಳ ಮಿಲಿಟರಿ ಲಾ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದಾನೆ ಎನ್ನುವುದು ಕ್ಯಾಪ್ಟನ್‌ನ ವರದಿಯಾಗಿತ್ತು (ನಾನು ನಿಜವಾಗಿಯೂ ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದೆ)

ಒಬ್ಬ ರಾಜಕೀಯ ಪ್ರತಿಸ್ಪರ್ಧಿಯನ್ನು ಸರಿಯಾದ ರಾಜಕೀಯ ರೀತಿಯಲ್ಲಿ ಎದುರಿಸಲಾಗದೆ, ನನ್ನನ್ನು ಒಬ್ಬ ಕಳ್ಳನನ್ನಾಗಿ ತೋರಿಸಲು ಹರಸುಹಾಸ ಪಟ್ಟ ಈಗಿನ ಭಾರತ ಸರ್ಕಾರಕ್ಕೆ ಅನುಕೂಲವಾಗಲೆಂದು ನಾನು ಈ ವಾಸ್ತವಾಂಶಗಳನ್ನು ಬರೆಯುತ್ತಿದ್ದೇನೆ. ಬೇಕಾದರೆ ರಕ್ಷಣೆ ಖಾತೆ ತನ್ನದೇ ದಾಖಲೆ ಪತ್ರಗಳನ್ನು ಪರಿಶೀಲಿಸಲಿ.

ಮೇಜರ್ ಕ್ಯಾನಿಂಗ್‌ರಿಂದ ನಾನು ಉತ್ತಮ ವರದಿಯನ್ನು ಪಡೆದೆ. ಅನಾರೋಗ್ಯ ಪೀಡಿತರಾಗಿ ಆಸ್ಪತ್ರೆ ಸೇರಿದ ಚಾಂಡಿಮವರ ಕಮಾಂಡ್ ಉಸ್ತುವಾರಿ ವಹಿಸಿಕೊಳ್ಳಲು ತಕ್ಷಣವೇ ನನ್ನು ಅಂಬಾಲಾಗೆ ನೇಮಿಸಲಾಯಿತು.

ಆಗಸ್ಟ್‌ನಲ್ಲಿ ನಾನು ಮರಳಿ ಅಂಬಾಲಾದಲ್ಲಿದ್ದೆ. ಕಮಾಂಡ್‌ಗೆ ಹಾಗೂ ನನ್ನ ಕೆಲಸಕ್ಕೆ ಮರಳಿದ್ದೆ.

ರೈಟ್ ಇಂಡಿಯಾ ಚಳವಳಿಯ ಘೋಷಣೆ

ದೇಶಾದಾದ್ಯಂತ ರೈಟ್ ಇಂಡಿಯಾ ಚಳವಳಿಯು ಘೋಷಣೆ ಅನುಸರಿಸಿತು. ಗಾಂಧೀಜಿ ಮತ್ತು ಕಾಂಗ್ರೆಸ್‌ನ ಇಡೀ ನಾಯಕತ್ವವನ್ನು ಬಂಧಿಸಲಾಯಿತು.

ಬಂಡಾಯವೇಳಲು ಒಂದು ಸೂಚನೆ ಸಿಕ್ಕಿತು. ಅಷ್ಟೇ ಸಾಕು ರೈಲುಗಳು ಸ್ಫೋಟಗೊಳ್ಳಲು, ಅಂಚೆ ಕಚೇರಿಗಳು ಹೊತ್ತಿ ಉರಿಯಲು ಹಾಗೂ ಸಂಪರ್ಕ ವ್ಯವಸ್ಥೆ ಬುಡಮೇಲಾಗಲು ಆರಂಭವಾಯಿತು. ಈ ಎಲ್ಲಾ ಕೃತ್ಯಗಳು ವ್ಯಾಪಕ ಪ್ರಮಾಣದಲ್ಲಿ ನಡೆದವು. ಜನರ ಗುರಿ ಪೋಲೀಸ್ ಠಾಣೆಗಳಿಗೆ ಮುತ್ತಿಗೆ ಹಿಕಿ ಸುಟ್ಟು ಹಾಕಿದವು.

ಬಂಧಿತ ಹುಡುಗರು ಹಾಗೂ ಹುಡಗಿಯರಿಂದ ತುಂಬಿದ್ದ ಸೀಲ್ ಮಾಡಲಾದ ಬೋಗಿಗಳು ಅಂಬಾಲಾದ ಮೂಲಕ ಹಾದು ಹೋದವು.

"ನೀನು ನಮ್ಮ ಸೋದರರು, ಬ್ರಿಟಿಷರ ವಿರುದ್ಧ ಬಂಡಾಯವೇಳಿ" ಎಂದವರು ಸೈನಿಕರಿಗೆ ಮನವಿ ಮಾಡಿದರು.

ಸಂಪರ್ಕ ವ್ಯವಸ್ಥೆಗಳನ್ನು ವ್ಯಾಪಕವಾಗಿ ಹಾಳುಗಡುವಿದ್ದರಿಂದ ವಿಶೇಷ ಪಡೆಗಳನ್ನು ನಿಯೋಜಿಸಲಾಯಿತು. ಕರುಣೆಯಿಲ್ಲದ ಬ್ರಿಟಿಷ್ ಪಡೆಗಳು ಭಾರತೀಯ ಪಡೆಗಳ ನೆರವಿನೊಂದಿಗೆ ಸಂಪರ್ಕ ವ್ಯವಸ್ಥೆಯ ಮಾರ್ಗದುದ್ದಕ್ಕೂ ಕಾವಲು ನಿಂತವು. ಬಂಡಾಯವನ್ನು ಹತ್ತಿಕ್ಕಲು ಗ್ರಾಮಾಂತರ ಪ್ರದೇಶಗಳಿಗೆ ನುಗ್ಗಿದವು.

ಬಂಡಾಯದ ಕರೆಗೆ ಸಿಕ್ಕಿದ ಪ್ರತಿಕ್ರಿಯೆಯಿಂದ ನಾವೇ ಆಶ್ಚರ್ಯ ಚಕಿತರಾದೆವು. 'ಭಾರತ ಬಿಟ್ಟು ತೊಲಗಿ' ಚಳುವಳಿ ಗಾಂಧಿ ಮಾರ್ಗದಲ್ಲಿರುತ್ತದೆಂದು ನಾವು ನಿರೀಕ್ಷಿಸಿದ್ದೆವು. ಭಾರತೀಯ ಜನಸಮುದಾಯ ಕ್ರಾಂತಿ ಪಥವನ್ನು ತುಳಿದರೆ ಖಂಡಿತಕ್ಕೂ ಅವರು ಗಾಂಧಿ ಮಾರ್ಗವಾಗಿ ಬರುತ್ತಿರಲಿಲ್ಲ. ಆದರೆ ನಮ್ಮ ಜನರಲ್ಲಿ ಅದುಮಿಟ್ಟು ಕ್ರಾಂತಿಕಾರಿ ಕ್ರೋಧ ಲಕ್ಷಾಂತರ ತೊರೆಗಳಾಗಿ ಸ್ಫೋಟಗೊಂಡಿತು. ನಾವು ಮುನ್ನಡೆದು ಮುಂದಿನ ಮಾರ್ಗವನ್ನು ನಿರ್ಧರಿಸಬೇಕಾಗಿತ್ತು.

ಆಗಸ್ಟ್ 25 ರಂದು ಹಳಿದೆಹಲಿಯ ರೈಲ್ವೆ ಸ್ಟೇಷನ್ ಬಳಿಯ ಫ್ರಂಟಿಯರ್ ಹಿಂದೂ ಹೋಟೆಲ್‌ನಲ್ಲಿ ನಮ್ಮ ಸಂಘಟನೆಯ ಅಖಿಲ ಭಾರತ ಮಂಡಳಿಯ ಸಭೆ ನಡೆಯಿತು. ಇದನ್ನು ಸಂಘಟಿಸಲು ಒಂದು ವಾರ ಕಾಲ ಬೇಕಾಯಿತು. ಸಭೆಯಲ್ಲಿ ಒಟ್ಟು ಏಳು ಮಂದಿ ಹಾಜರಿದ್ದೆವು. ಸಭೆಯಲ್ಲಿ ಖುದ್ದಾಗಿ ಹಾಜರಿರಲು ಸಾಧ್ಯವಾಗದಿದ್ದವರು ಕೊರಿಯರ್ ಮೂಲಕ ತಮ್ಮ ಅಭಿಪ್ರಾಯಗಳನ್ನು ಕಳಿಸಿದ್ದರು.

ತಕ್ಷಣವೇ ಬಂಡಾಯಕ್ಕೆ ಕರೆ ನೀಡಬೇಕೆಂಬುದು ಸರ್ವಸಮ್ಮತ ಅಭಿಪ್ರಾಯವಾಗಿತ್ತು. ಇದನ್ನು ಯಾರು ಆರಂಭದಲ್ಲೇ ವಿರೋಧಿಸದೆ ಸಭೆಯಲ್ಲಿ ಹಾಜರಿದ್ದ ಪ್ರತಿಯೊಬ್ಬರೂ ತಕ್ಷಣವೇ ನನ್ನ ಅಭಿಪ್ರಾಯ ಸರಿಯೆಂದು ಅಭಿಪ್ರಾಯ ಪಟ್ಟರು.

ನಡೆದ ಚರ್ಚೆಯ ಸವಿವರಗಳನ್ನು ಇಲ್ಲಿ ನೀಡಲು ನನಗೆ ಸಾಧ್ಯವಿಲ್ಲ. ಅದು ಈ ಬರಹದ ವ್ಯಾಪ್ತಿಯನ್ನು ಮೀರಿದ ವಿಚಾರ. ನಾನೀಗ ಬರೆಯುತ್ತಿರುವ ಪುಸ್ತಕಗಳಲ್ಲಿ ಈ ವಿವರಗಳನ್ನು ದಾಖಲಿಸಿದ್ದೇನೆ. ತತ್‌ಕ್ಷಣದ ಬಂಡಾಯವನ್ನು ವಿರೋಧಿಸಲು ಕಾರಣಯೇನೆಂಬುದನ್ನು ನಾನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸುತ್ತೇನೆ.

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಫೆಬ್ರವರಿ 10, 2003,

- ಡಿವೈಎಫ್‌ಐ ನಿಂದ ಭ್ರಷ್ಟಾಚಾರ ವಿರೋಧಿ ಪ್ರತಿಭಟನೆ ಜಿಲ್ಲಾ - ತಾಲ್ಲೂಕು ಕೇಂದ್ರಗಳಲ್ಲಿ

ಫೆಬ್ರವರಿ 14, 2003, ಶುಕ್ರವಾರ

- ತೈಲ ಕಂಪೆನಿಗಳ ಮಾರಾಟದ ವಿರುದ್ಧ ಪ್ರತಿಭಟನೆ ಸಿ.ಪಿ.ಐ(ಎಂ) ಕರೆ

ಫೆಬ್ರವರಿ 16, 2003, ಭಾನುವಾರ

- ಮಂಗಳೂರು.
  ಸ್ವಾತಂತ್ರ ಹೋರಾಟಗಾರರು, ಸಿ.ಪಿ.ಐ. ನಾಯಕರು ಶ್ರೀ ಬಿ.ವಿ. ಕಕ್ಕಿಲಾಯ ಅವರ ಸ್ಮತಿ ಕಥನ ಬಿಡುಗಡೆ ಸಮಾರಂಭ ರವೀಂದ್ರ ಕಲಾಭವನ, ವಿಶ್ವವಿಧ್ಯಾನಿಲಯ ಕಾಲೇಜು, ಹಂಪನಕಟ್ಟೆ, ಮಂಗಳೂರು.

ಫೆಬ್ರವರಿ 24, 2003, ಸೋಮವಾರ

- ಜಿಲ್ಲಾ ಪಂಚಾಯತ್ ಚಲೋ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘ (ಸಿ.ಐ.ಟಿ.ಯು) ಕರೆ.

  ಬೆಂಗಳೂರು ನಗರ ಗ್ರಾಮಾಂತರ ಜಿಲ್ಲಾ ಸಮಿತಿ ವತಿಯಿಂದ ಬೆಳಗ್ಗೆ 11 ಗಂಟೆಗೆ ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ.

(ನಿಮ್ಮ ಪ್ರದೇಶಗಳಲ್ಲಿ ನಡೆಯಲಿರುವ ಪ್ರಮುಖ ಕಾರ್ಯಕ್ರಮ/ ಚಳುವಳಿಗಳ ಬಗ್ಗೆ ಮುಂಚಿತವಾಗಿ ತಿಳಿಸಿರಿ)

ಐಕ್ಯರಂಗ
ಚಂದಾದಾರರಾಗಿ

ವಾರ್ಷಿಕ	ರೂ. 150
6 ತಿಂಗಳು	ರೂ. 80
ಆಜೀವ	ರೂ. 1000

ವಿಶ್ವ ಬಂಡವಾಳಗಾರರ ಹೆಗಲಿಗೆ ಬಡತನ ನಿವಾರಣೆ ಹೊರೆ

ಈವಾರ ಕರ್ನಾಟಕ ಒಂದು ನೋಟ —— ಎಸ್.ವೈ.ಗುರುಶಾಂತ್

ವಿಶ್ವ ಬಂಡವಾಳ ಹೂಡಿಕೆದಾರರ ಶೃಂಗಸಭೆಯಿಂದ ಕೃಷ್ಣ ವಾಪಾಸಾಗಿ ವಾರವೇ ಕಳೆದಿದೆ. ಮೂರು ವರುಷಗಳಿಗೊಮ್ಮೆ ದಾವೂಸ್‌ನಲ್ಲಿ ನಡೆಯುವ ಈ ಸಭೆಗೆ ಅತೀಯಾದ ಪ್ರಚಾರ ನೀಡುವುದು ವಾಡಿಕೆಯಾಗಿಬಿಟ್ಟಿತ್ತು. ಆದರೆ ಈಗ ಅದು ಕರ್ನಾಟಕದ ಮಟ್ಟಿಗಂತೂ ಅಷ್ಟಾಗಿ ಕಾಣುತ್ತಿಲ್ಲ. ಅಧಿಕಾರಕ್ಕೆ ಬಂದ ಮೊದಲ ಅವಧಿಯಲ್ಲೇ ಕೃಷ್ಣ ಇಂತಹದ್ದೇಸಭೆಗೆ ಮೂರು ವರುಷಗಳ ಹಿಂದೆ ಹಾರಿದ್ದಾಗ ವಿದೇಶಿ ಬಂಡವಾಳ ತುಂಬಿ ತಂದು ಕರ್ನಾಟಕದ ಉದ್ದಗಲ ಸುರಿದು, ಅಭಿವೃದ್ಧಿಯ ಹೊಸ ಶಕೆ ಪ್ರಾರಂಭವಾಗಿದೆ ಎಂದು ಪತ್ರಿಕಾ ಇತರ ಮಾಧ್ಯಮಗಳು, ಬಂಡವಾಳಗಾರರು ಹೊಗಳಿದ್ದರು. ಆದರೆ ಈಗ ಈ ಭ್ರಮಾಲೋಕದ ಗುಳ್ಳೆ ಒಡೆದಿದೆ. ಸರ್ಕಾರವೇ ಡಂಗುರ ಹೊಡೆದಂತೆ, ವಿಧಾನಸೌಧದ 'ಬಾಂಕ್ವೆಟ್ ಹಾಲ್'ನಲ್ಲಿ ಹೂಡಿಕೆದಾರರ ಮೇಳಗಳನ್ನು ವರ್ಷವೂ ನಡೆಸಿದ ಯತೇಚ್ಛ ರಿಯಾಯತಿಗಳ ಪ್ರೋತ್ಸಾಹ ಪ್ರಕಟಿಸಿದ ನಂತರವೂ ನಿರೀಕ್ಷಿತ ಬಂಡವಾಳ ಹೂಡಿಕೆಯಾಗಿಲ್ಲ. ಈಗ ಹೂಡಿಕೆ ಎನ್ನುವಂತಹದ್ದು ಸುಮಾರು 9500 ಕೋಟಿ. ಆದರೆ ವಿಚಿತ್ರವೆಂದರೆ ಇಷ್ಟು ಹೂಡಿಕೆ ಮಾಡಲು ಕರ್ನಾಟಕ ಸರ್ಕಾರ ಕೊಟ್ಟ ರಿಯಾಯಿತಿಯೇ 6500 ಕೋಟಿ ರೂಪಾಯಿಗಳು. ಅಂದರೆ ಈ ಹೂಡಿಕೆಯೆಂಬುದು ಕರ್ನಾಟಕದ ಜನತೆಯ ತಲೆ ಮೇಲೆ ಕಲ್ಲು ಚಪ್ಪಡಿ ಎಳೆಯುವ, ಮನಬಂದಂತೆ ಆಯಕಟ್ಟಿನ ಜಾಗವನ್ನು ಆದಾಯದ ಜಾಗಗಳನ್ನು ಮೇಯುವ ಸ್ವೇಚ್ಛಾ ಸ್ವಾತಂತ್ರ್ಯವಷ್ಟೆ. ಹೂಡಿಕೆ, ವಿದೇಶಿ ಸಾಲಗಳ ಒಟ್ಟು ಪರಿಣಾಮ ಸಾಲದ ವಿಪರೀತ ಹೊರೆ, ಅಸಹನೀಯ ಧರಗಳು- ತೆರಿಗೆಗಳ ಏರಿಕೆ, ಅಭಿವೃದ್ಧಿಯ ಮೂಲರಂಗಕ್ಕೆ ಕೊಡಲಿಯೇಟು, ಉದ್ದಿಮೆ-ಕೃಷಿಯ ಬೆನ್ನೆಲುಬು ಮುರಿತ ಖಾಸಗೀಕರಣದ ಆವೇಶ.

ಹೀಗಾಗಿ ಕೃಷ್ಣರವರು ಧರೆಗಿಳಿದ ಅಭಿವೃದ್ಧಿಯ ಹೊಸ ಮನ್ವಂತರ ಸೃಷ್ಟಿಸುವರೆಂದು ಮರುದಿನ ಪತ್ರಿಕಾಗೋಷ್ಠಿ ನಡೆಸಿದರಾದರೂ ದಾವೂಸ್ ಸಭೆಯ ಮಹತ್ವದ ವಿಷಯಗಳನ್ನು ಪ್ರಕಟಿಸಿಲ್ಲ. ಅವರು ಒಂದು ಪ್ರವಾಸ ಮುಗಿಸಿ ಬಂದವರಂತೆ ಮಾತನಾಡಿದರು. ವಿಶ್ವದ ಹೂಡಿಕೆದಾರರ ಶೃಂಗಸಭೆಯಲ್ಲಿ, ಬಂಡವಾಳಗಾರರು, 'ಜಗತ್ತಿನಲ್ಲಿನ ಬಡತನ ನಿವಾರಣೆಗೆ ಪ್ರಥಮ ಆದ್ಯತೆ ನೀಡುತ್ತಿದ್ದಾರೆ' ಎಂದರು ಈ ಮಾತುಗಳನ್ನು ಮುಖ್ಯಮಂತ್ರಿ ಕೃಷ್ಣರವರೇ ಮನಸಾರೆ ಒಪ್ಪಿದಂತೆ ಕಾಣಲಿಲ್ಲ. ಯಾಕೆಂದರೆ ಅನುಭವ ಬೇರೆಯದನ್ನೇ ಹೇಳುತ್ತಿತ್ತು. ಆದಾಗ್ಯೂ ಬಂಡವಾಳಗಾರರ, ವಿದೇಶಿ ಸಾಲದ ಮೇಲೆಯೇ ಉದ್ಧಾರ ಸಾಧ್ಯವೆಂಬ,

ಜಾಮಾಷ

ವಿಶ್ವಬ್ಯಾಂಕ್ ಆದೇಶಗಳನ್ನೂ, ಕೇಂದ್ರದ ವಾಜಪೇಯಿಯವರ ಮಾರ್ಗವನ್ನು ಅನುಸರಿಸುವುದಕ್ಕೆ ಬದ್ಧತೆ ತೋರಿದರು.


ಇದೇ ಸೈಬರ್ ಕೃಷ್ಣರವರು ದಾವೂಸ್ ಸಭೆ ಮುಗಿಸಿ ಹಿಂತಿರುಗಿದಾಗ ನಿಗದಿತ ಹಾದಿಯಲ್ಲಿ ಬರಲಾಗದೇ ಹಲವಾರು ದೇಶಗಳನ್ನು ಸುತ್ತು ಹಾಕಿ ಬರಬೇಕಾಯ್ತೆಂದು, ಅದೂ ಅಮೇರಿಕಾದ ಮಾಜಿ ಅಧ್ಯಕ್ಷ ಕ್ಲಿಂಟನ್ ಸಹ! ಯಾಕೆಂದರೆ ಜಾಗತೀಕರಣ- ಹಾಗೂ ಈ ವಿಶ್ವ ಬಂಡವಾಳಗಾರರ ಸುಲಿಗೆ ವಿರುದ್ಧ ಜನತೆಯ ಪ್ರಭಲ ಪ್ರತಿಭಟನೆ ಎದುರಿಸಲಾಗದೇ ಓಡೋಡಿ ಬರಬೇಕಾಯಿತಂತೆ- ಕೃಷ್ಣರೇ ಹೇಳಿದ್ದು. ಇದನ್ನು ಸಮರ್ಥವಾಗಿ ಎದುರಿಸುವ ದೃಢ ಕ್ರಮ ವಹಿಸುವಂತಹ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಕೃಷ್ಣರವರು ಹಿರಿಯ ಪೋಲೀಸ್ ಅಧಿಕಾರಿಗಳ ಸಭೆಯಲ್ಲಿ ಹೇಳಿದ್ದರು. ಅದರ ನಂತರ ಪ್ರಜಾಪ್ರಭುತ್ವೀಯ ಹಕ್ಕುಗಳನ್ನು ದಮನಿಸುವ ಘೋರ, ಕ್ರೂರ ಮಸೂದೆ 'ಕೋಕಾ'ವನ್ನು ಅಂಗೀಕರಿಸಿದ್ದು. ಈಗಲೂ ಜಾಗತೀಕವಾಗಿ ಪ್ರತಿಭಟನೆಗಳು ಬಹಳಷ್ಟು ಬೆಳೆದಿವೆ. ಕೃಷ್ಣರ ಸರ್ಕಾರ ಇನ್ನೇನು ಮಾಡುತ್ತದೆ ನೋಡಬೇಕು. ಆದರೆ ಇದಕ್ಕೆ ತಕ್ಕ ಶಾಸ್ತಿ ಮಾತ್ರ ಜನರಿಗೆ ಖಂಡಿತ ಸಿಗಲಿದೆ.

ಕಾಂಗ್ರೆಸ್‌ಗೆ ಹೊಸ ಪೂಜಾರಿ ಬದಲಾಗದ ದಾರಿ

ಕರ್ನಾಟಕ ಪ್ರದೇಶ ಕಾಂಗ್ರೆಸ್‌ಗೆ ಅಧ್ಯಕ್ಷರನ್ನಾಗಿ ಜನಾರ್ಧನ ಪೂಜಾರಿಯವರ ನೇಮಕವಾಗಿದೆ. ಸ್ವಾತಂತ್ರ್ಯ ಹೋರಾಟದ ಪರಂಪರೆ ತಮ್ಮದೆಂದು ಪದೇ ಪದೇ ಸಾರುವ ಕಾಂಗ್ರೆಸ್‌ನಲ್ಲಿ ಜಿಲ್ಲೆಯ- ರಾಜ್ಯದ ಪಕ್ಷದ ಅಧ್ಯಕ್ಷರಾಗಲಿ- ಮುಖಂಡರನ್ನು ಪ್ರಜಾಸತ್ತಾತ್ಮಕವಾಗಿ ಚುನಾಯಿಸಿಕೊಳ್ಳುವ ಕ್ರಮವನ್ನೇ ಪೂರ್ಣವಾಗಿ ನಾಶಗೊಳಿಸಲಾಗಿದೆ. ಎಲ್ಲರೂ ಹೈಕಮಾಂಡ್‌ನ ಕೃಪೆಯಿಂದಲೇ ಎಂಬುದು ನಿತ್ಯವಿದ್ಯಾಮಾನಗಳ ಪ್ರತೀತಿಯಾಗಿದೆ. ಕಳೆದ ತಿಂಗಳು ಕೃಷ್ಣ ಸರ್ಕಾರದ ನಾಯಕತ್ವದ ವಿರುದ್ಧ ಬಂಡಾಯ ಹೂಡಿದ್ದ (ಸ್ವಪಕ್ಷದವರು) ಹೊಸಬರನ್ನು ಮುಖ್ಯಮಂತ್ರಿಯನ್ನಾಗಿಸಬೇಕೆಂದು ಪಟ್ಟು ಹಿಡಿದಿದ್ದಾಗ, ಮಹಾರಾಷ್ಟ್ರದಲ್ಲಿಯೂ ಇಂತಹದೇ ಬಂಡಾಯ ನಡೆದು, ವಿಲಾಸರಾವ್‌ದೇಶ್ ಮುಖ್ ವಿರುದ್ಧದೂರುಗಳ ನಾಟಕ ನಡೆದು ಕೊನೆಗೆ ಸುಶೀಲ್ ಕುಮಾರ್ ಶಿಂಧೆಯವರನ್ನು

ಮುಖ್ಯಮಂ

ಸೋನಿಯಾ ಗಾಂಧಿ ದೆಹಲಿಯಲ್ಲಿ ನೇಮಿಸಿ ಬಾಂಬೆಗೆ ಕಳಿಸಿದ್ದಾರೆ. ಇಂತಹ ನೇಮಕಾತಿ, ಮಾಡುವಾಗ, ಹೈಕಮಾಂಡ್‌ನ- ಕಾಂಗ್ರೆಸ್ ಅಧ್ಯಕ್ಷರಿಗೆ ಎಷ್ಟು ನಿಷ್ಠರು- ಎಷ್ಟು ಬಾಗಬಲ್ಲರು, ಕೊಡುಕೊಳ್ಳುವುದನ್ನು ಎಷ್ಟು ಸುಲಲಿತವಾಗಿ ನಿಭಾಯಿಸಬಲ್ಲರು ಎಂಬುದು ಪ್ರಧಾನ ಅಂಶ. ಹಾಗೇ ನಂತರ 'ಜಾತಿ'ಯನ್ನು ಬಳಸುವ ಆಟಕ್ಕೆ ಇನ್ನುಳಿದದ್ದು. ಜನರ ಅತೃಪ್ತಿ ಹೆಚ್ಚುತ್ತಿರುವಾಗ ನಾಯಕತ್ವ ಬದಲಾವಣೆ ಮಾಡಿ 'ಜಾತಿ ಪ್ರೀತಿ'ಯಲ್ಲಿ ಕೆಲ ಕಾಲ ತಳ್ಳುವ ಲೆಕ್ಕಾಚಾರ.



ಜನಾರ್ಧನ ಪೂಜಾರಿ

ಕೆ.ಪಿ.ಸಿ.ಸಿ ಅಧ್ಯಕ್ಷತೆ ಖಾಲಿ ಮಾಡುವುದಾಗಿ ಅಲ್ಲಿ ಅಲ್ಲಂ ವೀರಭದ್ರಪ್ಪ ಹೇಳಿದಾಗಿನಿಂದ ಇಂದಿನವರೆಗೆ ಊಹಾಪೋಹ ನಡೆದಿದ್ದವು. ಈಗ ಪೂಜಾರಿ (ದ.ಕ) ಯವರಿಗೆ ನೀಡುವ ಮೂಲಕ ಹಿಂದುಳಿದ ವರ್ಗಕ್ಕೆ ನಾಯಕತ್ವ ನೀಡಲಾಗಿದೆಯೆಂದು ನಂಬಿಸಲಾಗುತ್ತಿದೆ. ಲೋನ್ ಮೇಳದ ಪೂಜಾರಿಯವರು ಕಾಂಗ್ರೆಸ್ಸಿಗೆ ಕರ್ನಾಟಕದ ಜನತೆಗೆ ಎಷ್ಟು ನ್ಯಾಯಕೊಡುತ್ತಾರೆ ಕೋಮುವಾದದಂತಹ ಗಂಭೀರ ಅಪಾಯದೆದುರು ಏನು ಕಾರ್ಯಕ್ರಮ ರೂಪಿಸಲು ಮುಂದಾಗುತ್ತಾರೆ. ಬಂದು ಕಾದು ನೋಡಬೇಕು. ಆದರೆ ಅವರ ಮಾತುಗಾರಿಕೆ, ಚಪಲದ ಬಗ್ಗೆ ಯಾರಿಗೆ ಅಪನಂಬಿಕೆ ಇರಲಿಕ್ಕಿಲ್ಲ. ಅಂದ ಹಾಗೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೋಯ್ಲಿ ಬಣ- ಪೂಜಾರಿ ಬಣ ಎಂದು ಸದಾ ಯುದ್ಧ ರಂಗದಲ್ಲಿ ಕಾಡುತ್ತಿರುವ ಭಿನ್ನಮತೀಯತೆ ಪೂಜಾರಿಯವರಿಂದ ದೂರವಾದೀತೆ? ಡಿಕ್ಕಿ ಹೊಡೆದೀತೆ? ಅದನ್ನು ಕಾದು ನೋಡಬೇಕು. ಆದರೆ ಇಷ್ಟು ಮಾತ್ರ ನಿಜ ನೀತಿಗಳನ್ನು ಬದಲಾಯಿಸಿಕೊಳ್ಳದೇ ಕಾಂಗ್ರೆಸ್ ಕೇವಲ ನೇತಾಗಳನ್ನು ಬದಲಾಯಿಸಿಕೊಂಡರೆ ಅದರ ಅವನತಿಯನ್ನು ತಡೆಯಲು ಸಾಧ್ಯವಿಲ್ಲ.

ಜಾತಿ ಜಾತಿಗಳ ಜಾತ್ರೆಯೇ ಜಾತ್ರೆ. ಜನವಿಭಜನೆ.

ಫಸಲು ಕೈಸೇರಿ, ಹಣ ಕಿಸೆಗೆ ಇಳಿದಾಗ ಸುಗ್ಗಿ ಬಳಿಕ ಜಾತ್ರೆಗೆ ನಡೆಯೋದು ರೂಢಿ. ಆದರೀಗ ಕರ್ನಾಟಕದ ತುಂಬಾ ಜಾತಿ ಸಮ್ಮೇಳನಗಳದ್ದೇ ಸುಗ್ಗಿ. ಆಯಾ ಜಾತಿ ಜಗದ್ಗುರುಗಳಿಗೆ ರಾಜಕೀಯ ಪಕ್ಷಗಳ ನಾಯಕರು ಬಿಡುವಿಲ್ಲದೆ ಭರಾಟೆ- ಓಡಾಟ.

ಇತ್ತಿಚಿಗೆ ದಕ್ಷಿಣ ಕನ್ನಡದ ಮಂಗಳೂರಿನಲ್ಲಿ ವಿಶ್ವಬಂಟರ ಸಮ್ಮೇಳನ ನಡೆಯಿತು. ಮೈದಾನವೊಂದರಲ್ಲಿ ಭಾರೀ ಚಪ್ಪರ ಅಲಂಕಾರ ಮಾಡಿ, ಭರ್ಜರಿ ಭೋಜನ ಇತ್ಯಾದಿ ಪೂರೈಕೆಯಾಯಿತು. ಇದಕ್ಕೆ ಕೇಂದ್ರ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಆದಿಯಾಗಿ ರಾಜಕೀಯ, ಜಾತಿಗಳ ನಾಯಕರು ಜಮಾಯಿಸಿದ್ದರು. ಬಳಿಕ ಇದಕ್ಕೇನು ತಾವು ಕಡಿಮೆಯಿಲ್ಲವೆಂದು 'ಗೌಡರ ಸಮ್ಮೇಳನವು ಆಯಿತು. ಅಲ್ಲಿಯೂ ಉದ್ಧಾರದ, ಜಾತೀಯ ಜನರ ಒಗ್ಗಟ್ಟು ಧರ್ಮವಿಚಾರಗಳೂ ಮೊಳಗಿದವು. ಇಷ್ಟಾದರೆ ಹೇಗಾದೀತು ಎಂದು ಉಳಿದ ಹತ್ತಾರು ಜಾತಿಗಳ ಸಮ್ಮೇಳನಗಳು ಯೋಜಿತವಾದವು. ಬಂಟರು, ಗೌಡರು ಆದ ಮೇಲೆ ಇನ್ನೊಂದು ದೊಡ್ಡ ಜಾತಿ ಬಿಲ್ಲವ' ರದ್ದು... ಅದಕ್ಕೂ ಏರ್ಪಾಡಾಗುತ್ತಿದೆ. (ಪೂಜಾರಿ ಬಂದ ಮೇಲೆ ಇನ್ನೂ ರಂಗು..) ಬೆಂಗಳೂರು ಒಳಗೊಂಡು ಕುರುಬರ, ವಾಲ್ಮೀಕಿಗಳ, ಲಿಂಗಾಯಿತರ ಮುಂತಾದವರ ಸಮ್ಮೇಳನಗಳು ಪೂರ್ಣ ಪ್ರಮಾಣದಲ್ಲಿ ಜರುಗತೊಡಗಿವೆ. ಇವುಗಳ ನಡುವೆ ಮಠಾಧೀಶರು 'ಫೆಡರೇಷನ್' ರಚಿಸಿಕೊಳ್ಳಲು ಮುಂದಾಗಿದ್ದಾರೆ. ಅಡ್ಡ-ಉದ್ದ ಪಕ್ಕಕ್ಕೆ, ಹಿಂದು-ಮುಂದು ಸಮಾಜೋತ್ಸವಗಳಿಗೆ ಬರವಂತೂ ಇಲ್ಲ! ಇವರೆಲ್ಲಾ ಜನರಿಗೆ ಇಹಲೋಕ ಮರೆಸಿ, ಪರಲೋಕ ತೋರಿಸುವರೆ! ಜಾತಿ ಸೇವೆಯಲ್ಲಿ ಬಲಪ್ರದರ್ಶಿಸಿ, ಅಧಿಕಾರ- ಹಣ, ಸ್ಥಾನ- ಮಾನ ಗಟ್ಟಿಗೊಳಿಸಿಕೊಳ್ಳುವವರೇ. ಇನ್ನೇನು ವಿಧಾನ ಸಭಾ ಚುನಾವಣೆಗೆ ಎರಡು ವರುಷವಿದೆಯೆಂದು ರಾಜಕೀಯ ತಾಲೀಮು ಮಾಡಿರುವವರೇ. ಜಾತಿ- ಜಾತಿಗಳಲ್ಲಿ ಜನರನ್ನು ಎತ್ತಿ ಕಟ್ಟಿ ಜಗಳ ಹೂಡಿಸುವವರೇ ಸಂಕಟದಲ್ಲಿರುವ ಜನತೆಯನ್ನು ದಿಕ್ಕೆಡಿಸಿ, ನಿಜ ಸಮಸ್ಯೆಯ ವಿರುದ್ಧ ಹೋರಾಡದಂತೆ ವಿಭಜಿಸುವವರೆ! ಇಂತಹ ಸ್ಪರ್ಧೆಯಲ್ಲಿ, ಎಡಪಕ್ಷಗಳನ್ನು ಹೊರತುಪಡಿಸಿ, ಬಿಜೆಪಿ ಕಾಂಗ್ರೆಸ್, ಜನತಾದಳಾದಿಯಾಗಿ ಸಿಕ್ಕಷ್ಟು 'ಬಾಚಿಕೊಳ್ಳುವ' ಜಾತಿ ಕ್ರೋಢೀಕರಣಕ್ಕೆ ಇಳಿದಿವೆ. ಈ ಅಪಾಯಕಾರಿ ಬೆಳವಣಿಗೆ ಪ್ರಜಾಸತ್ತಾತ್ಮಕ ಚಳುವಳಿಗೆ, ಜನರ ಐಕ್ಯತೆಗೆ ಮಾರಕ.

ಒಂದಾಗುವ ಮಾತನ್ನು ಬಿಟ್ಟಿಲ್ಲ. ಆದರೆ ಒಂದಾಗುತಿತಿಲ್ಲ ಇದು ಜನತಾದಳದ ಬಣ ಪರಿಸ್ಥಿತಿಐ ಜನತಾದಳ (ಎಸ್), ಜನತಾದಳ(ಯು) ನಡುವಿನ ವಿಲೀನದ ಮಾತು ಕೇಳುತ್ತಿರುವಾಗಲೇ ಇದಕ್ಕಾಗಿಯೇ ಚಾಲನೆಯೆಂದು ಅಖಿಲ ಭಾರತ ಜನತಾದಳವನ್ನು ರಚಿಸಿ ಎಸ್.ಆರ್.ಬೊಮ್ಮಾಯಿಯವರನ್ನು ಅಧ್ಯಕ್ಷರನ್ನಾಗಿಸಲಾಯಿತು. ಆದರೆ ಇದು ಸಮಸ್ಯೆ ಇತ್ಯರ್ಥಪಡಿಸದೇ ಉಲ್ಬಣಗೊಳಿಸಿತು. ಜೆಡಿ(ಎಸ್) ಸ್ವತಂತ್ರವಾಗುಳಿಯುವ ನಿರ್ಧಾರ ಪ್ರಕಟಿಸಿತು. ಇದಕ್ಕೆ ರಾಜಕೀಯ ಕಾರಣಗಳಿಗಿಂತ ಮುಂದಿನ ಮುಖ್ಯ ಮಂತ್ರಿ, ಪಕ್ಷದ ನಾಯಕ ಹುದ್ದೆ ಪ್ರಧಾನವಾದ ಪ್ರಶ್ನೆ ಎಂಬುದು ಗುಟ್ಟೇನಲ್ಲ. ಅಖಿಲ ಭಾರತ ಜನತಾ ಎನ್‌ಡಿಎಯ ಬಿಡಲು ತಯಾರಿಲ್ಲ. ರಾಮಕೃಷ್ಣ ಹೆಗಡೆ ಹಾಸಿಗೆ ಹಿಡಿದಿದ್ದರೂ ಈಗಲೂ ಜೆಡಿ(ಯು) ಕೆಲ ನಾಯಕರ ವರ್ತನೆ ನೋಡಿದರೆ 'ನಿಯಂತ್ರಣ' ಎಲ್ಲಿ ಎಂದೂ ಅದೇಕೆ ಎಂಬ ಕಾರಣಗಳೂ ಕಾಣುತ್ತವೆ.

ದಳದ ನಾಯಕರು ಪರಸ್ಪರ ಮಣ್ಣೆರಚುವುದನ್ನಾದರೂ ನಿಲ್ಲಿಸಲಿ

ಈಗ ಉಭಯ ಬಣಗಳೂ ಬಿರುಸಿನಿಂದ ತಮ್ಮ ಶಕ್ತಿ ಕ್ರೋಢೀಕರಿಸಿಕೊಳ್ಳಲು ಮೈಕೊಡವಿ ಓಡಾಡುತ್ತಿವೆ. ಸಮಾವೇಶ ನಡೆಸುತ್ತಿವೆ. ಹಾಗೇ ಒಬ್ಬರ ಮೇಲೆ ಇನ್ನೊಬ್ಬರು ಕಿಡಿ ಹಾರಿಸುತ್ತಿದ್ದಾರೆ. ಪರಸ್ಪರ ಮಣ್ಣು ಎರಚಿಕೊಳ್ಳುತ್ತಿದ್ದಾರೆ. ಇದು ಅನಾರೋಗ್ಯಕಾರಿ ಬೆಳವಣಿಗೆ. ಕಾಂಗ್ರೆಸ್ ವಿರುದ್ಧ ಜನತೆಯ ಅತೃಪ್ತಿ ಹೆಚ್ಚುತ್ತಿರುವಾಗ ಇದನ್ನು ಬಳಸಿಕೊಂಡು ಕೋಮುವಾದಿ ವಿಭಜನೆ ತರಲು ಬಿಜೆಪಿ ಸಂಘ ಪರಿವಾರ ಅತ್ಯಾಕ್ರಮಣಶೀಲವಾಗಿ ಕೆಲಸ ಮಾಡುತ್ತಿರುವಾಗ ಕಾಂಗ್ರೆಸ್ಸೇತರ ಸೆಕ್ಯುಲರ್ ಶಕ್ತಿಗಳು ಹೀಗೆ ದುರ್ಬಲವಾಗುವುದು ಅತ್ಯಂತ ಅಪಾಯಕಾರಿ. ವಿಲೀನದ ಯತ್ನವಿರಲಿ ಈ ಕೂಡಲೇ ಕನಿಷ್ಠ ಕೆಸರೆರಚುವುದನ್ನು ದಳ ನಾಯಕರು ಬಿಡಲಿ.



ರಾಜ್ಯ ಸರ್ಕಾರದ [illegible] ವಿರುದ್ಧ ಬೆಂಗಳೂರಿನ ಕೆ.ಆರ್. ಪುರಂನಲ್ಲಿ ನಡೆದ ಸಿಪಿಐ(ಎಂ) ಬಹಿರಂಗ ಸಭೆ

ಹಾಸನ ಭಜರಂಗದಳದ ಹಾವಳಿ

ಚಿಕ್ಕಮಗಳೂರನ್ನು ತನ್ನ ಕೋಮುವಾದಿ ಕೃತ್ಯಗಳಿಗೆ ನೆಲೆಯಾಗಿಸಿಕೊಂಡು ಬಾಬಾಬುಡನ್‌ಗಿರಿ ಸುತ್ತಮುತ್ತ ಧಾಳಿ ನಡೆಸಲು ಯತ್ನಿಸುತ್ತಿರುವ ಸಂಘ ಪರಿವಾರ, ಬಹಳ ತೀವ್ರವಾಗಿ ಸುತ್ತಲಿನ ಜಿಲ್ಲೆಗಳಿಗೂ ಕಬಂಧಬಾಹು ಚಾಚುತ್ತಿದೆ. ಸ್ಥಳೀಯ ಪ್ರಶ್ನೆಗಳನ್ನು ತಕ್ಷಣವೇ ಕೋಮು ಸಂಘರ್ಷಕ್ಕೆ ಬಳಸಲು ತುದಿಗಾಲಮೇಲೆ ನಿಂತು ಕಾರ್ಯಾಚರಣೆಗೆ ಇಳಿದಿದೆ. ಇಡೀ ಕರ್ನಾಟಕವನ್ನೇ ಕೋಮುಗಲಭೆಗಳಲ್ಲಿ ಮುಳಿಗಿಸಲು ಹೊಂಚುಹಾಕಿ ಹೆಜ್ಜೆ ಇರಿಸುತ್ತಿರುವ ಬಗ್ಗೆ ಈಗಾಗಲೇ ಹಲವಾರು ಬಾರಿ ಎಚ್ಚರಿಸುತ್ತಿರುವ ಬಗ್ಗೆ ಈಗಾಗಲೇ ಹಲವಾರು ಬಾರಿ ಎಚ್ಚರಿಸಿದ್ದೇವೆ. ಹಾಸನದ ತೀರಾ ಈಚೆಗಿನ ಉದಾರಣೆ. ಆದರೆ ಬೆಡ್ಡ ಪಡೆಗಳು ಆಟಾಟೋಪವನ್ನು ಅಡಗಿಸಲು ಪ್ರಗತಿಸದ ಶಕ್ತಿಗಳ ತಕ್ಷಣದ ಪ್ರತಿಕ್ರಿಯೆ ಒಂದು ಸ್ವಾಗತರ್ಹ ಬೆಳವಣಿಗೆ ಒಟ್ಟು ವಿದ್ಯಾಮಾನಗಳತ್ತ ಒಂದು ಚಿತ್ರಣ ಇಲ್ಲಿ ಧರ್ಮೇಶ್ ನೀಡಿದ್ದಾರೆ.

ಪಕ್ಕದ ಚಿಕ್ಕಮಗಳೂರಿನಲ್ಲಷ್ಟೇ ಸಂಘಪರಿವಾರದ ಆರ್ಭಟವಿತ್ತು. ಆದರೆ ಅವರು ವ್ಯವಸ್ಥಿತವಾಗಿ ಇಡೀ ರಾಜ್ಯಾದ್ಯಂತ ತನ್ನ ಕರಾಳ ಹಸ್ತ ಚಾಚಲು ಸಿದ್ದವಾಗುತ್ತಿರುವುದು ನಿಚ್ಚಳವಾಗುತ್ತಿದೆ. ಗುಜರಾತಿನ ಆತಂಕಭರಿತ ಚುನಾವಣಾ ಫಲಿತಾಂಶದ ನಂತರ ಅವರ ವ್ಯವಸ್ಥಿತ ಪಿತೂರಿಗಳು ಬಯಲಿಗೆ ಬರುತ್ತಿವೆ. ಈ ಹಿನ್ನೆಲೆಯಲ್ಲಿ ಹಾಸನದಲ್ಲಿ 2003 ರ ಜನವರಿಯಿಂದಲೇ ಅವರ ಪುಡಿ ಸಂಘಟನೆಗಳು ಒಂದೊಂದಾಗಿ ತಲೆ ಎತ್ತುತ್ತ ಪ್ರಜ್ಞಾವಂತರಿಗೆ ಸವಾಲೆಸಗಲು ಹವಣಿಸುತ್ತಿದ್ದಾರೆ.

ಹಾಸನ ಜಿಲ್ಲೆ ಮೊದಲಿಂದಲೂ ಪ್ರಗತಿಪರ ಪ್ರಜಾಸತ್ತಾತ್ಮಕ ಚಳುವಳಿಗಳ ತಾಣ, ಹಿಂದೆಂದೂ ಆರ್.ಎಸ್.ಎಸ್. ಪರಿವಾರವು ಇಲ್ಲಿ ತಲೆ ಎತ್ತಿದ್ದಿಲ್ಲ ಇದ್ದರೂ ಜೋರಾಗಿ ಉಸಿರಾಡಿದವರಲ್ಲ. ಇಲ್ಲಿ ಮೊದಲಿಂದಲೂ ರೈತ ಚಳುವಳಿ, ದಲಿತ ಚಳುವಳಿಗಳ ಪ್ರಭಾವ ದಟ್ಟವಾಗಿತ್ತು. ಸಂಘ ಪರಿವಾರದವರೇನಿದ್ದರು ಕೆಲ ಕವಿಗೋಷ್ಠಿ ಸಂಗೀತ ಗೋಷ್ಠಿಗಳಿಗಷ್ಟೇ ಸೀಮಿತವಾಗಿದ್ದರು. ಮತ್ತೆ ಕೆಲವರು ಬುದ್ದಿಜೀವಿಗಳ ಸೋಗಿನಲ್ಲಿ ಅನಿವಾರ್ಯವಾಗಿ ಪ್ರಗತಿಪರ ಕಾರ್ಯಕ್ರಮಗಳಲ್ಲಿ ಗುರುತಿಸಿಕೊಳ್ಳತೊಡಗಿದ್ದರು.

ಕ್ಷುಲ್ಲಕಘಟನೆ ಬಳಿಕ.

ಆದರೆ ಇದಕ್ಕೆಲ್ಲ ಬದಲಾವಣೆ ಬಂದದ್ದು ಒಂದು ಘಟನೆಯಿಂದ, ಚಿಕ್ಕಮಗಳೂರಿನಲ್ಲಿ ಭಜರಂಗಿಗಳ ಆರ್ಭಟಕ್ಕೆ ತಕ್ಕ ಉತ್ತರ ನೀಡಲು ರಾಜ್ಯದ ಎಲ್ಲ ಪ್ರಗತಿ ಪರ ಸಂಘಟನೆಗಳು, ಚಿಂತಕರು ಒಂದೇ ವೇದಿಕೆ ಏರಿ ಭಜರಂಗಿಗಳ ಜನ್ಮ ಜಾತಕಗಳನ್ನು ಜಾಲಾಡಿದ ದಿನದ ರಾತ್ರಿ ಹಾಸನದ ಸಿದ್ದಯ್ಯನಗರದಲ್ಲಿ ನಡೆದ ಕ್ಷುಲ್ಲಕ ಘಟನೆ. ಸಿದ್ದಯ್ಯನಗರ ಒಂದು "ಸ್ಲಂ" ನಾಗರೀಕ ಸೌಲಭ್ಯಗಳ ತೀರ ಕಳಪೆಯಾಗಿರುವ ಹಾಸನ ನಗರಸಭೆ ಅಧ್ಯಕ್ಷರಾದ ಸಿ.ಚನ್ನವೀರಪ್ಪ ಪ್ರತಿನಿಧಿಸುವ ದಲಿತರು ಮತ್ತು ಮುಸ್ಲಿಮ್ ಬಡವರು ವಾಸವಾಗಿರುವ ಒಂದು ಪ್ರದೇಶ, ಕ್ಷುಲ್ಲಕ ಇಸ್ಪೀಟ್ ಆಟದಿಂದ ಪ್ರಾರಂಭವಾದ ಗಲಾಟೆ ರಾತ್ರಿ ಕೆಲ ಉದ್ರಿಕ್ತ ಮುಸಲ್ಮಾನ್ ಹುಡುಗರು ಕೆಲ ಮನೆಯ ಹೆಂಚು, ಬಾಗಿಲುಗಳನ್ನು ಒಡೆಯುವ ಹಂತ ತಲುಪಿತು. ಆದರೆ ಜಿಲ್ಲಾ ಪೋಲೀಸ್ ಬಂದೋಬಸ್ತ್ ಹಾಗೂ ಮಧ್ಯ ಪ್ರವೇಶ ಮಾಡಿ ಸೂಕ್ತ ವ್ಯವಸ್ಥೆ ಮಾಡಿತು. ಆದರೆ ಕೂಡಲೇ ಎಂದೆಂದಿಗೂ ಕಾಣದೆ ಇದ್ದ ಭಜರಂಗದಳ ಹಾಸನದಲ್ಲಿ ಹೊಸ ವರ್ಷದಲ್ಲಿ ದುಷ್ಟಶಕ್ತಿ ಅವತಾರ ಆದಂತೆ ಮಾರನೇ ದಿನವೇ ಆ ಪ್ರದೇಶದಲ್ಲಿ ಕಾಣಿಸಿಕೊಂಡು ಅಲ್ಲಿನ ದಲಿತ ಸಮುದಾಯಕ್ಕೆ ಹಿಂದುತ್ವದ ವಿಷ ತುಂಬಿ ಮುಸ್ಲೀಮರ ವಿರುದ್ಧ ಎತ್ತಿಕಟ್ಟಿತು. ಮತ್ತು ಹೆಂಚು, ಬಾಗಿಲು ಮತ್ತು ಔಷಧಿ ನೀಡುವ ನೆಪದಲ್ಲಿ ದಲಿತರನ್ನು ಮುಸ್ಲಿಮರ ವಿರುದ್ಧ ಎತ್ತಿಕಟ್ಟಲು ಯಶಸ್ವಿಯಾಯಿತು.



ಕೈಬರಹದ ಒಂದು ಪೋಸ್ಟರ್

ಈ ಸಮಸ್ಯೆಯ ಸೂಕ್ಷ್ಮತ್ರೆಯನ್ನರಿತ ಜಿಲ್ಲಾ ಡಿ.ವೈ.ಎಫ್.ಐ ಆ ಪ್ರದೇಶಕ್ಕೆ ಭೇಟಿ ನೀಡಿ ಪರಿಸ್ಥಿತಿಯ ಅಧ್ಯಯನ ನಡೆಸಿತು. ಮುಸ್ಲಿಂ ಮತ್ತು ದಲಿತ ನಾಯಕರನ್ನು ಮಾತಾಡಿಸಿ ಶಾಂತಿ ಸಭೆ ನಡೆಸಲು ತೀರ್ಮಾನಿಸಿತು. ನಂತರ ಜಿಲ್ಲೆಯ ಇತರೆ ಜಾತ್ಯಾತೀತ ವ್ಯಕ್ತಿಗಳನ್ನು ಸಂಪರ್ಕಿಸಿ ಪರಿಸ್ಥಿತಿಯ ಗಂಭೀರತೆಯನ್ನು ವಿವರಿಸಿ ಜನವರಿ 6 ರಂದು ವಿವಿಧ ಪ್ರಗತಿಪರ ಸಂಘಟನೆಗಳ ವ್ಯಕ್ತಿಗಳ ಸಭೆ ಕರೆಯಲಾಯಿತು. ಆ ಸಭೆಗೆ ಸಿಕ್ಕಿದ ಪ್ರತಿಕ್ರಿಯೆ ಕಣ್ಣೋಡಿದರೆ ತಿಳಿಯುತ್ತಿತ್ತು. ಜಿಲ್ಲೆಯ ಜನತೆ ಕೋಮು ಗಲಭೆಗಳಿಂದ ಹೆಚ್ಚು ಆತಂಕದಲ್ಲಿದ್ದರೆಂದು ಜಿಲ್ಲೆಯ ಹಿರಿಯ ಸಾಹಿತಿ ಜ.ಹೊ. ನಾರಾಯಣಸ್ವಾಮಿ ಭಾನು ಮುಫ್ತಾಕ್, ಪತ್ರಕರ್ತ ಆರ್.ಜಿ.ವೆಂಕಟೇಶ್ ಮೂರ್ತಿ ಸೇರಿದಂತೆ ಜಿಲ್ಲೆಯ ಎಲ್ಲಾ ದಲಿತ ಸಂಘಟನೆಗಳ ನಾಯಕರು, ರೈತ ಸಂಘಟನೆಗಳ ನಾಯಕರು, ಮುಸ್ಲಿಂ ನಾಯಕರು, ಸಾಹಿತಿಗಳು, ವಿವಿಧ ಪಕ್ಷಗಳ ಮುಖಂಡರು ಎಸ್‌ಎಫ್‌ಐ ಮತ್ತು ಡಿ.ವೈ.ಎಫ್.ಐ, ಕೆ.ಪಿ.ಆರ್.ಎಸ್ ನಾಯಕರು ಸೇರಿದಂತೆ 100ಕ್ಕೂ ಹೆಚ್ಚು ಜನ ಆ ಸಭೆಗೆ ಹಾಜರಾಗಿ ಜಿಲ್ಲೆಯಲ್ಲಿ ಬೆಳೆಯುತ್ತಿರುವ ಮತ್ತು ಅವರ ಹುನ್ನಾರಗಳನ್ನು ಬಯಲಿಗೆಳೆಯುವ ಬಗ್ಗೆ ಚಿಂತಿಸಿದರು. ಇಂತಹ ಆರೋಗ್ಯಕರ ಸಭೆ ಸೇರಿಸಲು ಶ್ರಮಿಸಿದ ಡಿ.ವೈ.ಎಫ್.ಐ ನ್ನು ಪ್ರಶಂಶಿಸಿದರು. ಕೂಡಲೇ ಸಿದ್ದಯ್ಯನಗರದಲ್ಲಿ ಶಾಂತಿ ನೆಲೆಸುವ ಕಾರ್ಯಕ್ರಮ ನಡೆಸಬೇಕಿತ್ತು. ಆದ್ದರಿಂದ ನಾಳೆಯೇ ಸಿದ್ದಯ್ಯನಗರದಲ್ಲಿ ಒಂದು ಸೌಹಾರ್ದತಾ ಸಭೆ ನಡೆಸಲು ಸಭೆ ನಿರ್ಧರಿಸಿ ಡಿ.ವೈ.ಎಫ್.ಐ ಜಿಲ್ಲಾಧ್ಯಕ್ಷ ಧರ್ಮೇಶ್ ಡಿಎಸ್‌ಎಸ್‌ನ ಅಬ್ದುಲ್ ಸಮದ್ ಕೆ.ಟಿ.ಎಸ್.ಎಸ್.ನ ಮುಖಿಜಿರ್ ಅಹಮದ್ ಮತ್ತು ಸ್ಥಳೀಯ ಮಾಜಿ ನಗರಸಭಾ ಸಭಾ ಸದಸ್ಯ ಪುಟ್ಟರಾಜುರವರಿಗೆ ಜವಾಬ್ದಾರಿ ವಹಿಸಿತು. ಸೌಹಾರ್ದತಾ ಸಭೆ ಜಿಲ್ಲೆಯ ಇತಿಹಾಸದಲ್ಲಿ ಗಮನಾರ್ಹವಾದುದು. ವೇದಿಕೆಯಲ್ಲಿ ಜಿಲ್ಲಾಧಿಕಾರಿ ಎಲ್.ಕೆ.ಅತೀಕ್, ಪೋಲೀಸ್ ವರಿಷ್ಠಾಧಿಕಾರಿ ನಂಜುಂಡಸ್ವಾಮಿ, ನಗರಸಭಾಧ್ಯಕ್ಷ, ಚನ್ನವೀರಪ್ಪ, ಸಾಹಿತಿಗಳಾದ ಜ.ಹೊ.ನಾ ಮತ್ತು ಭಾನು ಮುಷ್ತಾಕ್ ಡಿ.ವೈ.ಎಫ್.ಐ ಜಿಲ್ಲಾಧ್ಯಕ್ಷ ಧರ್ಮೇಶ್ ಮತ್ತು ಡಿ.ಎಸ್.ಎಸ್ ನ ಎರಡು ಗುಂಪಿನ ನಾಯಕರು ಮತ್ತು ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು. ವೇದಿಕೆಯ ಮೇಲಿದ್ದ ಎಲ್ಲರೂ ಕೋಮುವಾದದ ಎಳೆ ಎಳೆ ಬಿಡಿಸಿದರು. ಎರಡೂ ಕೋಮಿನ ಜನಗಳಿಗೆ ಶಾಂತಿಯಿಂದ ಇರಲು ಮನವಿ ಮಾಡಿಕೊಳ್ಳಲಾಯಿತು. ಭಜರಂಗದಳದವರು ನೀಡಿದ ಹೆಂಚು, ಬಾಗಿಲುಗಳನ್ನು ಸ್ಥಳೀಯ ಜನತೆ ದಿಕ್ಕರಿಸುತ್ತೇವೆಂದು ಘೋಷಿಸಿದರು. ಅಲ್ಲದೆ ನೇತೃತ್ವ ವಹಿಸಿದ್ದ ಡಿ.ವೈ.ಎಫ್.ಐ ಪ್ರಸ್ತಾವನೆಯಲ್ಲಿ ಸಿದ್ದಯ್ಯ ನಗರದಲ್ಲಿನ ನಾಗರೀಕ ಸೌಲಭ್ಯಗಳ ಕೊರತೆ ಬಗ್ಗೆ ನಗರಾಡಳಿತ ಮತ್ತು ಜಿಲ್ಲಾಡಳಿತದ ಗಮನಕ್ಕೆ ಎಂದು ಕೂಡಲೇ ಅಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಂತೆ ಒತ್ತಾಯಿಸಿತು. ನಂತರ ಗಲಭೆ ಪೀಡಿತ ಪ್ರದೇಶದಲ್ಲಿ ಮೆರವಣಿಗೆ ನಡೆಸಿ ಮಾನವ ಸೌಹಾರ್ದಪರ ಘೋಷಣೆಗಳನ್ನು ಕೂಗಿ ಮಸೀದಿ ಎದುರು ಸಮಾವೇಶಗೊಂಡಿತು. ಅಲ್ಲಿನ ಮುಸ್ಲಿಂ ನಾಯಕರು ಈ ಸಭೆ ನಡೆಸಿದ ಎಲ್ಲರಿಗೂ ಅಭಿನಂದಿಸಿ ನಾವೆಲ್ಲ ಶಾಂತಿಯಿಂದಿರುತ್ತೇವೆಂದು ಭರವಸೆ ಕೊಟ್ಟರು.

ಕೋಮುವಾದಿಗಳು ಹಾಸನಕ್ಕೆ ಇಟ್ಟ ಮೊದಲ ಕೊಳ್ಳಿಯಿದು. ಡಿ.ವೈ.ಎಫ್.ಐ ಜಿಲ್ಲೆಯ ಇತರ ಸಂಘಟನೆಗಳಿಂದ ಸೇರಿ ತಣ್ಣಗೆ ಮಾಡಿತು. ಈ ಕೆಲಸಕ್ಕೆ ಹೆಚ್ಚು ಮುತುವರ್ಜಿ ವಹಿಸಿದ ಡಿ.ವೈ.ಎಫ್.ಐ ಕಾರ್ಯಕರ್ತರನ್ನು ವಿಶೇಷವಾಗಿ ಜನತೆ ಅಬಿನಂಧಿಸಿತು ಮತ್ತು ಭಜರಂಗ ದಳದವರು ನೀಡಿದ ಹೆಂಚು, ಬಾಗಿಲುಗಳನ್ನು ವಾಪಸ್ ಕಳುಹಿಸಲಾಯಿತು. ●

ಮಹಾತ್ಮ - ಹುತಾತ್ಮ ಸೌಹಾರ್ಧತೆ ಕಾಯಲು ಪಣ

ಹಾಸನ ಜಿಲ್ಲಾ ಡಿ.ವೈ.ಎಫ್.ಐ ಜನವರಿ 30ರಂದು ಮಹಾತ್ಮಗಾಂಧಿ ಹುತಾತ್ಮದಿನಾಚರಣೆ ಅಂಗವಾಗಿ ಹಾಸನ ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ "ಮಹಾತ್ಮ - ಹುತಾತ್ಮ" ಕಾರ್ಯಕ್ರಮ ಸಂಘಟಿಸಿತ್ತು. ಇಷ್ಟೇ ಅಲ್ಲದೆ ಈ ಕಾರ್ಯಕ್ರಮಕ್ಕೆ ವಿಶೇಷ ಮಹತ್ವವು ಇತ್ತು ಜನವರಿ 24,25 ಮತ್ತು 26 ರಂದು ಆರ್.ಎಸ್.ಎಸ್ ಹಾಸನದಲ್ಲಿ ನಡೆಸಿದ ಕರ್ನಾಟಕ ದಕ್ಷಿಣ ಪ್ರಾಂತೀಯ ಕಾರ್ಯಕರ್ತರ ತರಬೇತಿ ಶಿಬಿರ ಮತ್ತು 26 ರಿಂದ ನಡೆದ ಅವರ ಪಥಸಂಚಲನ ಕಾರ್ಯಕ್ರಮ ಇದರ ಅಂಗವಾಗಿ ಹಾಸನ ನಗರದಲ್ಲಿ ಕೋಮು ವಿಷ ಬಿತ್ತುವ ನೂರಾರು ಬ್ಯಾನರ್‌ಗಳು ಕೇಸರಿ ಬಾವುಟಗಳು ರಾರಾಜಿಸಿದವು. ಈ ಬ್ಯಾನರ್‌ಗಳು ಬಾವುಟಗಳನ್ನು ನೋಡಿದ ಶಾಂತಿಪ್ರಿಯರಲ್ಲಿ ಭಯ ಮನೆಮಾಡಿತು. ಒಂದು ಧರ್ಮದ ವಿರುದ್ಧ ಘೋಷಣೆಯಿದ್ದ ಬ್ಯಾನರ್‌ಗಳನ್ನು ನೋಡಿ ಅಲ್ಪಸಂಖ್ಯಾತರು ಭಯಬೀತರಾದರು. ಆರ್.ಎಸ್.ಎಸ್ ನವರು ಈ ಕಾರ್ಯಕ್ರಮದ ಅಂಗವಾಗಿ ಅದುವರೆಗೂ ಮರೆಯಲ್ಲಿ ಅಡಗಿದ್ದ ಬುದ್ದಿಜೀವಿಗಳ ಸೋಗಿನಲ್ಲಿದ್ದ ಚಡ್ಡಿಗಳನ್ನೆಲ್ಲ ಒಟ್ಟು ಸೇರಿಸಿ ಅವರ ಕಾರ್ಯಕ್ರಮದ ಯಶಸ್ಸಿಗೆ ದುಡಿದಿದ್ದರು. ಭಜರಂಗದಳ ವಿ.ಹೆಚ್.ಪಿ ಸಂಘಟನೆಗಳು ಇದ್ದಕ್ಕಿದ್ದಂತೆ ತಲೆ ಎತ್ತಿದವು. ಕ್ರಿಮಿನಲ್ ಹಿನ್ನೆಲೆ ಹೊಂದಿರುವ ಯುವಕರನ್ನು ಸೇರಿಸಿ ಭಜರಂಗದಳ ಮಾಡಲಾಯಿತು. ಒಟ್ಟಿನಲ್ಲಿ ನೋಡ ನೋಡುತ್ತಿದ್ದಂತೆಯೇ ಜಿಲ್ಲೆಯ ಪ್ರಜ್ಞಾವಂತರೆಲ್ಲ ಚಿಂತೆಗೀಡಾಗುವಂತಾಯಿತು. ಹಾಗಾಗಿ ಎಲ್ಲರ ಮನದಲ್ಲಿ ಕೋಮುವಾದದ ವಿರುದ್ಧ ಭಾವನೆ ಗಟ್ಟಿಗೊಳ್ಳುವಂತಾಯಿತು. ಆರ್.ಎಸ್.ಎಸ್ ನ ಕಾರ್ಯಕ್ರಮಕ್ಕೆ ಬಹುತೇಕ ಬಂದವರೆಲ್ಲ ಹೊರಗಿನವರೆ. ಸ್ಥಳೀಯರಾಗಿ, ವ್ಯಾಪಾರಿವರ್ಗ, ಕ್ರಿಮಿನಲ್‌ಗಳು ಮತ್ತು ಎಂದೂ ಹೊರಗೆ ಬಿಸಿಲನ್ನೇ ನೋಡದೆ ಇದ್ದ "ಶುಭ್ರ" ಜನ. ಆದರೂ ಆರ್.ಎಸ್.ಎಸ್ ನ ಆ ಶಿಬಿರ ಜಿಲ್ಲೆಯ ಅಲ್ಪಸಂಖ್ಯಾತರಿಗೆ ಮತ್ತು ಜಾತ್ಯಾತೀತರಿಗೆ ಒಂದು ಎಚ್ಚರಿಕೆಯ ಘಂಟೆಯಾಗಿತ್ತು. ಕಾರ್ಯಕ್ರಮ ಇದ್ದಷ್ಟು ದಿನ "ಚಡ್ಡಿ"ಗಳ ಹಾರಾಟ ಮಿತಿಮೀರಿತ್ತು. ಇದೆಲ್ಲದರ ವಿರುದ್ಧ ಕಿಡಿಕಾರಲು ಪ್ರಜ್ಞಾವಂತರಿಗೆ ಒಂದು ವೇದಿಕೆ ಬೇಕಿತ್ತು.

ಆದ್ದರಿಂದ ಜನವರಿ 30ರ ಗಾಂಧಿ ಹುತಾತ್ಮ ದಿನಾಚರಣೆ ಅತ್ಯಂತ ಮಹಾತ್ವದ್ದಾಯಿತು. ಈ ಕಾರ್ಯಕ್ರಮಕ್ಕೆ ಜನರು ಸ್ವಯಂ ಸ್ಫೂರ್ತಿಯಿಂದ ಸೌಹಾರ್ಧತೆ ಪರ ಘೋಷಣೆ ಬ್ಯಾನರ್‌ಗಳನ್ನು ಬರೆಸಿ ಹಾಕಿದರು. ಡಿವೈಎಫ್‌ಐ ಕೋಮುವಾದದ ವಿರುದ್ಧ ಸೌಹಾರ್ಧತೆಪರ ಘೋಷಣೆಗಳುಳ್ಳ ಸುಮಾರು 400 ಕೈಬರಹದ ಪೋಸ್ಟರ್ಸ್‌ಗಳನ್ನು ಬರೆಸಿ ನಗರದ ಬೀದಿ ಬೀದಿಗಳನ್ನೆಲ್ಲ ಅಂಟಿಸಿತು. ಕೇವಲ ಎರಡು ದಿನಗಳ ಹಿಂದೆ ಅವರು ಬಿತ್ತಿದ್ದ ವಿಷ ಬೀಜವನ್ನು ಹೊಸಕಿಹಾಕಲು ಈ ಬಿತ್ತಿಪತ್ರಗಳು ಹೆಚ್ಚು ಯಶಸ್ವಿಯಾದವು ಮತ್ತು 'ಮಹಾತ್ಮ-ಹುತಾತ್ಮ' ಕಾರ್ಯಕ್ರಮದ ಬಗ್ಗೆ ಅಲ್ಪಸಂಖ್ಯಾತರು, ಜಾತ್ಯಾತೀತರು ಸ್ವಯಂ ಸ್ಫೂರ್ತಿಯಿಂದ ಪ್ರಚಾರ ಸಭೆಗೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

'ಮಹಾತ್ಮ-ಹುತಾತ್ಮ' ಕಾರ್ಯಕ್ರಮಕ್ಕೆ ಮುಖ್ಯ ಭಾಷಣಕಾರರಾಗಿ ಜನವಾಹಿನಿಯ ಸುದ್ದಿ ಸಂಪಾದಕರಾದ ಸನತ್‌ಕುಮಾರ್ ಬೆಳಗಲಿಯವರು ಆಗಮಿಸಿದ್ದರು. ಉಳಿದಂತೆ ಜಿಲ್ಲೆಯ ಮೂಲೆ ಮೂಲೆಯಿಂದ ಅವರ ಮನಸ್ಸಿನಲ್ಲಿದ್ದ ಕೋಮುವಾದದ ವಿರುದ್ದದ ಭಾವನೆಯನ್ನು ಹೊರಹಾಕಲು ಶಾಂತಿ ಪ್ರಿಯ ಗೆಳೆಯರನೇಕರು ಭಾಗವಹಿಸಿದ್ದರು. ಸಭೆಯಲ್ಲಿ ಮಾತನಾಡಿದ ಸನತ್‌ಕುಮಾರ್ ಬೆಳಗಲಿಯವರು ಆರ್.ಎಸ್.ಎಸ್ ನವರು ಜಯಪ್ರಕಾಶ್

ಮತ್ತೆ ತನ್ನ ಆಟದಲ್ಲಿ ಖಾವಿ ಪಡೆ

ನಮ್ಮ ಜನತೆ ತಮ್ಮ ಜೀವನದ ಅತ್ಯಂತ ಸಂಕಷ್ಟದ ಸಮಯದಲ್ಲಿರುವಾಗ ಸಂಘಪರಿವಾರ ತನ್ನ ರಾಜಕೀಯ ಚದುರಂಗದಾಟದಲ್ಲಿ ಮತ್ತೊಂದು ಕಾಯಿದೆಯನ್ನು ಮುಂದೆ ಇಟ್ಟಿದೆ.


ಏನೆಂದು ಗುಜರಾತಿನಲ್ಲಿ ಗೊತ್ತಾಗಿದೆ.

ಬಿಜೆಪಿಯು ಎಲ್ಲಾ ರಂಗಗಳಲ್ಲಿ ವಿಫಲವಾಗಿರುವುದು ಸುಸ್ಪಷ್ಟ. ಗುಜರಾತನ್ನು ಪರಿಗಣಿಸುವುದಾದರೆ, 31ನೇ ತಾರೀಖಿನ ಇಂಡಿಯನ್ ಎಕ್ಸ್‌ಪ್ರೆಸ್ ವರದಿಯಂತೆ ಐದು ವರ್ಷಗಳ ಬಿಜೆಪಿ ಆಳ್ವಿಕೆ ರಾಜ್ಯದ ಖಜಾನೆಯನ್ನು ಸಂಪೂರ್ಣವಾಗಿ ಬರಿದು ಮಾಡಿದೆ. ಈಗಿನ ಮೋದಿ ಸರ್ಕಾರ ಕೇಂದ್ರ ಸರ್ಕಾರವು ಹಣಕಾಸು ನೆರವು ನೀಡಬೇಕೆಂದು ಬಿಕ್ಷಾಪಾತ್ರೆ ಒಡ್ಡಿದೆ. ಗುಜರಾತಿನ ತಲಾ ಆದಾಯ ರಾಷ್ಟ್ರದಲ್ಲೇ ಎರಡನೇ ಸ್ಥಾನದಲ್ಲಿದ್ದುದು ಏಳನೆ- ಎಂಟನೇ ಸ್ಥಾನಕ್ಕಿಳಿದಿದೆ. ಅನೇಕ ಹಳ್ಳಿಗಳು ಕ್ಷಾಮವನ್ನೆದುರಿಸುತ್ತಿವೆ. ಆದರೆ ಯಾವುದೇ ಪರಿಹಾರ ಕ್ರಮಗಳಿಲ್ಲ ಈ ಸಮೃದ್ಧ ರಾಜ್ಯದ ಬಹಳಷ್ಟು ಜನತೆಗೆ ಈಗಲೂ ಕುಡಿಯಲು ಯೋಗ್ಯ ನೀರಿಲ್ಲ. ಇದೇನೂ ಹೊಸ ವಿಚಾರವಲ್ಲ, ಕೇಶುಬಾಯಿಪಟೇಲರ ಸರ್ಕಾರ ವಾಗಲಿ, ನರೇಂದ್ರ ಮೋದಿ ಸರ್ಕಾರವಾಗಲಿ ಇದನ್ನು ಲೆಕ್ಕಿಸುತ್ತಿಲ್ಲ.

ಬಿಜೆಪಿ ಆಳ್ವಿಕೆಯಲ್ಲಿ ಆರ್ಥಿಕತೆ ಇನ್ನಿಲ್ಲದಷ್ಟು ಕುಸಿದಿದೆ. ರೈತರು ದಯನೀಯ ಸ್ಥಿತಿಗಳಿದಿದ್ದಾರೆ. ಈಗಾಗಲೇ ಸಾವಿರಕ್ಕೂ ಹೆಚ್ಚಿನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾರ್ಮಿಕ ವರ್ಗಕ್ಕೆ ಕೈಗಾರಿಕೆಗಳ ಮುಚ್ಚುವಿಕೆ, ಬೀಗಮುದ್ರೆ, ವಿಪರೀತ ಸಂಕಷ್ಟಗಳನ್ನು ತಂದೊಡ್ಡಿದೆ. ಸಾರ್ವಜನಿಕ ವಲಯದ ನವರತ್ನಗಳನ್ನು ಮೂರು ಕಾಸಿಗೆ ಮಾರಲಾಗುತ್ತಿದೆ. ನಿರುದ್ಯೋಗ ವ್ಯಾಪಕ ಪ್ರಮಾಣದಲ್ಲಿ ಬೆಳೆಯುತ್ತಿದೆ. ಜನತೆ ಹಸಿವಿನಿಂದ ಸಾಯುತ್ತಿದ್ದಾರೆ, ಸ್ವಾತಂತ್ರ್ಯ ಭಾರತದಲ್ಲೇ ಇದೊಂದು ಸಾಮ್ರಾಜ್ಯಶಾಹಿ ಬಾಲಬಡುಕ ಸರ್ಕಾರವಾಗಿದೆ. ಇದೆಲ್ಲವನ್ನು ಮರೆಮಾಚಲು ಎಲ್ಲಾ ಸಾಂಸ್ಕೃತಿಕ- ಶೈಕ್ಷಣಿಕ ಸಂಸ್ಥೆಗಳನ್ನು ವಶಪಡಿಸಿಕೊಳ್ಳುವ ಆತುರದಲ್ಲಿ ಬಿಜೆಪಿ ಇದೆ.

ಚುನಾವಣಾ ತಯಾರಿಯಲ್ಲಿ ಖಾವಿ ಪಡೆ.

ಬಿಜೆಪಿ ಮತ್ತು ಸಂಘ ಪರಿವಾರದ ಇತರರು ಚುನಾವಣಾ ತಯಾರಿಗೆ ತಮ್ಮನ್ನು ಸಜ್ಜುಗೊಳಿಸಿಕೊಳ್ಳುತ್ತಿದ್ದಾರೆ. ಎನ್‌ಡಿಎಯ ಕಾರ್ಯಸಮಿತಿಯುನ್ನು ಒಂದು ಕಾಗದದ ತುಂಡಿಗಿಂತಲೂ ಕಡೆಯಾಗಿ ಕಂಡಿರುವ ಬಿಜೆಪಿ, ಕಳೆದ ನಾಲ್ಕು ವರ್ಷಗಳಲ್ಲಿ ಅದನ್ನು ಕಡೆಗಣಿಸಿದೆ.



ಹರ್ಕಿಶನ್ ಸಿಂಗ್ ಸುರ್ಜಿತ್

ರಾಜ್ಯ ವಿಧಾನ ಸಭಾ ಚುನಾವಣೆಗಳಲ್ಲಿ ಈ ಕಾರ್ಯಸೂಚಿಗೆ ಬದ್ಧವಾಗಿರುವುದಿಲ್ಲವೆಂದು ಅದು ತನ್ನ ಮಿತ ಪಕ್ಷಗಳಿಗೆ ಸ್ಪಷ್ಟಪಡಿಸಿದೆ. ಅಂದರೆ ವಿವಾದಾತ್ಮಕ ವಿಷಯಗಳಾದ- ಮಂದಿರ, 370 ನೇ ಕಲಮು ಮತ್ತು ಸಮಾನ ನಾಗರೀಕ ಸಂಹಿತೆಯುನ್ನು - ಬಳಸಲು ಅದು ಹಿಂಜರಿಯುವುದಿಲ್ಲ.

ಇದೇ ಸಮಯದಲ್ಲಿ ಬಿಜೆಪಿಯು ಪಕ್ಷದ ಸಂಘಟನೆ ಮತ್ತು ಸಚಿವ ಸಂಪುಟದಲ್ಲಿ ತನ್ನ ಕೋಮುವಾದಿ ಪ್ರಚಾರಕ್ಕೆ ಬೇಕಾದ ಬದಲಾವಣೆಗಳನ್ನೆ ಮಾಡಿದೆ. ಉದಾಹರಣೆಗೆ ಠಾಕೂರ್ ಸಮುದಾಯರನ್ನು ಒಲಿಸಿಕೊಳ್ಳಲು ಹಿಂದೆ ಅದಕ್ಷ ಮಂತ್ರಿ ಎಂದು ಕೈಬಿಟ್ಟಿದ್ದ ಸಿ.ಪಿ. ಠಾಕೂರ್‌ರವನ್ನೇ ಮತ್ತೆ ಸಂಪುಟಕ್ಕೆ ತೆಗೆದುಕೊಳ್ಳಲಾಗಿದೆ. ಜನರ ಅತೃಪ್ತಿ ವ್ಯಾಪಕಗೊಳ್ಳುತ್ತಿದೆ. ಉದಾಹರಣೆಗೆ ಗಣಿಕಾರ್ಮಿಕರ ಮುಷ್ಕರದಿಂದ ಕೆಲವು ದಿನಗಳ ಹಿಂದೆ ಆರ್‌ಎಸ್‌ಎಸ್ ನೇತೃತ್ವದ ಬಿಎಂಎಸ್ ಸಂಘಟನೆ ದೂರ ಉಳಿದರೂ ಬಿಎಂಎಸ್‌ಗೆ ಸೇರಿದ ಕಾರ್ಮಿಕರು ಸ್ವಯಂ ಆಗಿ ಮುಷ್ಕರದಲ್ಲಿ ಭಾಗವಹಿಸಿದ್ದರು. ಕೇಳ್ಕರ್ ಸಮಿತಿಯು ಶಿಫಾರಸ್ಸುಗಳು ರಕ್ಷಿಸುತ್ತೇನೆಂದು ಕಾರ್ಮಿಕರಿಗೆ ನೀಡಿದ್ದ ಸರ್ಕಾರದ, ಭರವಸೆ ಮುಂದಿನ ಲೋಕಸಭಾ ಚುನಾವಣೆಯುವರೆಗೆ ಉಳಿಯಬಹುದಷ್ಟೆ. ಹೆಚ್.ಪಿ.ಸಿ.ಎಲ್ ಮತ್ತು ಬಿಪಿಸಿಎಲ್‌ನ ಕಾರ್ಮಿಕರು ಕೆಲವೇ ಸಮಯದಲ್ಲಿ ಮುಷ್ಕರ ಹೂಡಲಿದ್ದಾರೆ. ಒರಿಸ್ಸಾದ ಎನ್‌ಎಎಲ್‌ಸಿಓ ಕಾರ್ಮಿಕರು ಯಾವುದೇ ಖಾಸಗಿ ಬಿಡ್ಡು ದಾರರು ಕಾರ್ಖಾನೆಯ ಒಳಗೆ ಪ್ರವೇಶಿಸಲು ಅವಕಾಶ ನೀಡಿಲ್ಲ.

ಆದರೆ ಈ ಎಲ್ಲಾ ಚಟುವಟಿಕೆಗಳ ನಡುವೆ ಒಂದು ಸಾಮ್ಯತೆ ಇಲ್ಲ. ಆದರೆ ಸದ್ಯದಲ್ಲೇ ಒಂದು ಸಾಮ್ಯತೆ ಬರುತ್ತದೆ. ಮುಂಬರುವ ಸಂಸತ್ ಅಧಿವೇಶನದ ವೇಳೆಗೆ ಒಂದು ಬೃಹತ್ ಪ್ರತಿಭಟನೆ ಮೂಡಿಬರ. ಆದರೆ ಬಿಜೆಪಿ ಈ ನೀತಿಗಳನ್ನು ಬಿಟ್ಟುಕೊಡಬೇಕು ಅಥವಾ ಜನರ ಗಮನವನ್ನು ಬೇರೆಡೆ ಸೆಳೆಯಬೇಕು. ಆದರೆ ಅವರು ಜನರ ಗಮನವನ್ನು ಬೇರೆಡೆ ಸೆಳೆಯುವ ಕೆಲಸವನ್ನು ಮಾಡುತ್ತಾರೆ.

ಲೆಕ್ಕಾಚಾರದ ಆಟ:

ವಿ.ಹೆಚ್.ಪಿ ಕೇಂದ್ರ ಸರ್ಕಾರಕ್ಕೆ ಬೆದರಿಕೆ ಹಾಕುತ್ತಿರುವುದು ಈ ಲೆಕ್ಕಾಚಾರದ ಆಟದ ಒಂದು ಭಾಗ. 67 ಎಕರೆ ಭೂಮಿಯಲ್ಲಿ 40 ಎಕರೆಯನ್ನು ತನಗೆ ಬಿಟ್ಟುಕೊಡಬೇಕೆಂದು ವಿಹೆಚ್‌ಪಿ ಹೇಳುತ್ತಿದೆ. ಇದಕ್ಕೆ ಅದು ಮೂರು ಕಾರಣಗಳನ್ನು ನೀಡುತ್ತಿದೆ. ಮೊದಲನೆಯದಾಗಿ ಆ ಭೂಮಿ ವಿವಾದಾತ್ಮಕವಲ್ಲ ಎಂಬುದು. ಅದೊಂದು ಹುಸಿ ವಾದ. ಈ ರವಾದವನ್ನು ಒಪ್ಪಿಕೊಂಡರೆ ಹಳೆಯ ಬಾಬ್ರಿಮಸೀದಿಗೆ ಹೋಗಲು ಸಣ್ಣ ಜಾಗವೂ ಉಳಿಯದು. ಈ ಜಾಗ ಬಿಟ್ಟುಕೊಟ್ಟರೂ ವಿಹೆಚ್‌ಪಿಗೆ ಇದೊಂದು ಗೆಲುವೆ.

ಎರಡನೆಯದಾಗಿ, ಕೋರ್ಟು ತೀರ್ಪು ತನ್ನ ಪರವಾಗಿ ಬಂದರೆ ಅದನ್ನು ಒಪ್ಪುತ್ತೇನೆ ಎಂಬುದು. ಕೋರ್ಟು ಈ ಭೂಮಿಯನ್ನು ಹಸ್ತಾಂತರಿಸುವುದನ್ನು, ಅಲ್ಲಿ ಯಾವುದೇ ರೀತಿಯ ಪೂಜೆ, ಧಾರ್ಮಿಕ ಕಾರ್ಯಗಳನ್ನು ನಿಷೇಧಿಸಿದೆ.

ಕೊನೆಯದಾಗಿ ವಿಹೆಚ್‌ಪಿ ಈಗಲೇ ಯಾಕೆ 'ಧರ್ಮ ಸಂಸತ್' ನ್ನು ಸಂಘಟಿಸುತ್ತಿದೆ ಎಂದು ಕೇಳಬೇಕು. ಏಕೆಂದರೆ ಇಂತಹದ್ದೆ ನಾಟಕ ಉತ್ತರ ಪ್ರದೇಶ, ಉತ್ತರಾಚಲ, ಪಂಜಾಬ, ಮಣಿಪುರ, ಪಾಂಡಿಚೇರಿಗಳಲ್ಲಿ ಚುನಾವಣೆಗಳಿದ್ದಾಗಲೂ ನಡೆದಿತ್ತು. ಅಂದರೆ ಚುನಾವಣೆ ಸಮೀಪಿಸಿದಾಗ ಇದೊಂದು ಮಾಮೂಲಿ ನಾಟಕ.

ಇತ್ತೀಚೆಗೆ ಸ್ವಾಮಿ ಜಯೇಂದ್ರ ಸರಸ್ವತಿಗಳನ್ನು ಪ್ರಧಾನಿ, ಬಿಜೆಪಿ ಮುಖಂಡರು, ಕೇಂದ್ರ ಮಂತ್ರಿಗಳು, ಆರ್‌ಎಸ್‌ಎಸ್ ಮುಖಂಡರುಗಳ ಬೇಟಿ ಮಾಡಿದಾಗಲೂ ಅದರ ಹಿಂದೆ ಇದ್ದ ಉದ್ದೇಶ ರಾಮಮಂದಿರವೇ.

ಈ ಎಲ್ಲಾ ನಾಟಕಗಳು, ಆಟಗಳ ವಿರುದ್ಧ ಎಲ್ಲಾ ಜಾತ್ಯಾತೀತ ಶಕ್ತಿಗಳು ಒಂದಾಗಿ ಹೋರಾಟ ಮಾಡಬೇಕಾಗಿದೆ.

ತೈಲ ಕಂಪೆನಿಗಳ ಮಾರಾಟ ವಿರೋಧಿಸಿ ಫೆಬ್ರುವರಿ 14, ಸಿಪಿಐ(ಎಂ) ಪ್ರತಿಭಟನೆ

ಎಲ್ಲೆಂದರಲ್ಲಿ ಡಿಸ್ಕೌಂಟ್ ಮಾರಾಟಮಳಿಗೆ ಕಾಣುತ್ತಿದ್ದೇವೆ. ಎಷ್ಟು ಡಿಸ್ಕೌಂಟ್ ನೀಡಿದರೂ ತೆಗೆದುಕೊಳ್ಳಲು ಜನ ಮುಂದೆ ಬರುತ್ತಿಲ್ಲ. ಜನರಲ್ಲಿಹಣ ಇದ್ದರೆ ತಾನೇ ಅವರು ಖರೀದಿ ಮಾಡುವುದು?

ಇನ್ನೊಂದೆಡೆಯಲ್ಲಿ ಬಿಜೆಪಿ ಸರಕಾರವೇ ಡಿಸ್ಕೌಂಟ್ ಮಾರಾಟಕ್ಕೆ ಇಳಿದಿದೆ. ಲಾಭದಾಯಕವಾದ ಸರಕಾರಿ ಉದ್ದಿಮೆಗಳನ್ನು ಅಗ್ಗದ ಬೆಲೆಗೆ ಮಾರಾಟ ಮಾಡುತ್ತಿದೆ. ದೇಶದ ಎರಡು ದೈತ್ಯ ತೈಲ ಕಂಪನಿಗಳಾದ ಹಿಂದೂಸ್ಥಾನ್ ಪೆಟ್ರೋಲಿಯಂ (ಹೆಚ್.ಪಿ.ಸಿ.ಎಲ್) ಕಾರ್ಪೋರೇಶನ್ ಮತ್ತು ಭಾರತ ಪೆಟ್ರೋಲಿಂ ಕಾರ್ಪೋರೇಶನ್ ಲಿ (ಬಿ.ಪಿ.ಸಿ.ಎಲ್) ಕಂಪನಿಗಳ ಶೇರುಗಳನ್ನು ಮಾರಾಟ ಮಾಡುವ ನಿರ್ಧಾರವನ್ನು ಕೇಂದ್ರ ಸಚಿವ ಸಂಪುಟ ಕೈಗೊಂಡಿದೆ.

ಹಿಂದೂಸ್ತಾನ್ ಪೆಟ್ರೋಲಿಯಂ (ಹೆಚ್.ಪಿ.ಸಿ.ಎಲ್) ನ ಶೇ. 26 ರಷ್ಟು ಶೇರುಗಳನ್ನು ಪ್ರಮುಖ ಪಾಲುದಾರ (ಛಟಒಟಿಗಟ ಖಿಚಿಟಜಒಟ) ರಿಗಂ ಮಾರಾಟ ಮಾಡಬೇಕೆಂದು ಹಾಗೂ ಭಾರತ ಪೆಟ್ರೋಲಿಯಂ (ಬಿ.ಪಿ.ಸಿ.ಎಲ್)ನ ಶೇ. 40 ರಷ್ಟು ಶೇರುಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಬೇಕೆಂದೂ ಸರಕಾರ ನಿರ್ಧರಿಸಿದೆ.

ದೇಶದ ಹಿತಾಸಕ್ತಿಯ ದೃಷ್ಟಿಯಲ್ಲಿ ತೈಲ ಕ್ಷೇತ್ರವು ರಕ್ಷಣಾ ವಲಯದ ನಂತರದಲ್ಲಿ ಪ್ರಮುಖ ಸ್ಥಾನ ಪಡೆಯುತ್ತದೆ. ಸಾರ್ವಜನಿಕ ವಲಯಕ್ಕೆ ಮೇಲಿನ ಎರಡು ಕಂಪೆನಿಗಳು ಸೇರ್ಪಡೆಗೊಂಡನಂತರ ಸಾಕಷ್ಟು ಬೆಳವಣಿಗೆ ಸಾಧಿಸಿವೆ. ಈಗಾಗಲೇ ಡಿವಿಡೆಂಟ್ ರೂಪದಲ್ಲಿ 35,000 ಕೋಟಿರೂಗೂ ಹೆಚ್ಚು ಹಣವನ್ನು ಕೇಂದ್ರ ಸರಕಾರಕ್ಕೆ ನೀಡಿದೆ. ಕಳೆದ ವಾರವಷ್ಟೇ ಕೇಂದ್ರ ಸರ್ಕಾರಕ್ಕೆ ಹಣದ ಕೊರತೆ ಇದೆಯೆಂದು ತೈಲ ಕಂಪೆನಿಗಳು ಸಾಧಾರಣ 2000 ಕೋಟಿ ರೂ ಮಧ್ಯವರ್ತಿ (ಔಖಿಜಡಿಟಿಜ) ಡಿವಿಡೆಂಟ್ ನೀಡಿದ್ದು ಪತ್ರಿಕೆಗಳಲ್ಲಿ ವರದಿಯಾಗಿದೆ. ದೇಶದ ನವರತ್ನಗಳೆಂದು ಖ್ಯಾತಿ ಪಡೆದ ಈ ಕಾಮಧೇನುವನ್ನು ಮಾರಾಟ ಮಾಡುವುದು ಸರಿಯಲ್ಲ.

ಜನತಾ ಪ್ರತಿನಿಧಿಗಳ ವಂಚಿಸಿ ಮಾರಾಟ:

ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕ ಉದ್ದಿಮೆಗಳ ನಿಜವಾದ ಮಾಲಿಕ ಜನತೆ. ಸಂಸತ್ತು ಜನತಾ ಪ್ರತಿನಿಧಿಗಳ ಕೇಂದ್ರ. ಯಾವುದೇ ಪ್ರಮುಖ ನಿರ್ಧಾರ ಕೈಗೊಳ್ಳುವಾಗಲೂ ಜನತಾ ಪ್ರತಿನಿಧಿಗಳ ಒಪ್ಪಿಗೆ ಪಡೆಯಬೇಕಾದದ್ದು ಸರಕಾರದ ಕರ್ತವ್ಯ. ಆದರೆ ಹೆಚ್.ಪಿ.ಸಿ.ಎಲ್ ಮತ್ತು ಬಿ.ಪಿ.ಸಿ.ಎಲ್ ಶೇರುಗಳ ಮಾರಾಟದ ಕುರಿತು ಕೇಂದ್ರ ಸರಕಾರ ಸಂಸತ್ತಿನ ಒಪ್ಪಿಗೆ ಪಡೆಯಲಿಲ್ಲ.

ಹಾಗೆ ನೋಡಿದರೆ, ಹೆಚ್.ಪಿ.ಸಿ.ಎಲ್ ಮತ್ತು ಬಿ.ಪಿ.ಸಿ.ಎಲ್ ಕಂಪನಿಗಳು ಆರಂಭವಾದುದೇ ಸಂಸತ್ತಿನಲ್ಲಿ ರೂಪಿಸಿದ ಕಾಯಿದೆಗಳ ಮೂಲಕ. 1974ರ ಇ.ಎಸ್.ಎಸ್.ಓ (ESSO)ಕಾಯಿದೆಯ ಮೂಲಕ ಹೆಚ್.ಪಿ.ಸಿ.ಎಲ್ ನ ಸ್ಥಾಪನೆ ಆಯಿತು. ವಿದೇಶಿ ಮೂಲದ ಈ ಎರಡು ಕಂಪನಿಗಳ ಭಾರತದ ವಹಿವಾಟುಗಳನ್ನು ಅಂದು ಸಾರ್ವಜನಿಕ ಉದ್ದಿಮೆಗಳನ್ನಾಗಿ ಮಾರ್ಪಟ್ಟಾಗ, ಸಾರ್ವಜನಿಕ ಹಿತಾಸಕ್ತಿಯಿಂದ ಇದನ್ನು ಮಾಡಲಾಗುತ್ತಿದೆ ಎಂಬುದನ್ನು ಕಾಯಿದೆಯು ಪ್ರಥಮದಲ್ಲಿ ತಿಳಿಸಲಾಗಿತ್ತು. ಆದರೆ ಈಗ?

ಹಿಂದೆ ಸಾರ್ವಜನಿಕ ಉದ್ದಿಮೆಯಾಗಿದ್ದ ಐಪಿಸಿಎಲ್ (Indian Petroleum Corporation Ltd) ಕಂಪನಿಗೆ ರಿಲೈಯನ್ಸ್ ಕಂಪನಿಯನ್ನು ಪಾಲುದಾರನಾಗಿ (Stratige Partner) ತೆಗೆದುಕೊಂಡಂತೆ, ಈಗ ಹೆಚ್.ಪಿ.ಸಿ.ಎಲ್ ಕಂಪನಿಗೆ ಪಾಲುದಾರನನ್ನು ಹುಡುಕಲು ಹೊರಟಿದೆ. ಬಿಜೆಪಿ ಸರ್ಕಾರ ಬಿ.ಪಿ.ಸಿ.ಎಲ್ ಶೇರುಗಳ ಮಾರಾಟಕ್ಕಾಗಿ ಜಾಗತಿಕ ಟೆಂಡರ್‌ನ್ನು ಕರೆಯಲಾಗುವುದಂತೆ! ಏಕೆಂದರೆ, ಈಗ ಶೇ 66 ರಷ್ಟು ಶೇರು ಹೊಂದಿರುವ ಕೇಂದ್ರ ಸರಕಾರ ಅರ್ಧದಷ್ಟನ್ನು ಮಾರಾಟ ಮಾಡಿದರೂ 2000 ಕೋಟಿ ರೂ ಅಥವಾ 400 ಮಿಲಿಯ ಡಾಲರ್ ಹಣ ನೀಡುವ ಕುಳ ಭಾರತದಲ್ಲಿ ಸಿಗುವುದು ಕಷ್ಟ! ಅಂದರೆ ದೇಶದ ಅಮೂಲ್ಯ ಆಸ್ತಿಯನ್ನು ವಿದೇಶಿ ಹಣಕಾಸು ಬಂಡವಾಳಕ್ಕೆ ತೆರೆದಿಡುತ್ತಿದೆ.

ಈಗ ಸಾರ್ವಜನಿಕ ಉದ್ದಿಮೆಗಳನ್ನು ಮಾರಾಟ ಮಾಡುತ್ತಿರುವ ಬಿಜೆಪಿ ನೇತೃತ್ವದ ಸರಕಾರ, ಮುಂದೊಂದು ದಿನ ದೇಶವನ್ನೇ ಮಾರಾಟ ಮಾಡಿದರೂ ಆಶ್ಚರ್ಯವಿಲ್ಲ.

ಕೇಂದ್ರ ಸಚಿವರಾದ ಜಾರ್ಜ್ ಫೆರ್ನಾಂಡಿಸ್, ರಾಮ ನಾಯಕ್, ಮತ್ತು ಮುರಳಿ ಮನೋಹರ ಜೋಷಿಯವರು ವಿರೋಧದ ನಾಟಕವಾಡಿದರು.

ಬಾಲ್ಕೊ, ಮಾಡರ್ನ್‌ಫುಡ್ಸ್, ವಿ.ಎಸ್.ಎನ್.ಎಲ್ ಅಶೋಕ ಗುಂಪಿನ ಹೋಟೆಲುಗಳು ಹೀಗೆ ಹತ್ತಾರು ಲಾಭದಾಯಕ ಉದ್ದಿಮೆಗಳನ್ನು ಅಗ್ಗದ ಬೆಲೆಗೆ ಮಾರಾಟ ಮಾಡ ಆಗಿದೆ. ಇದೀಗ ಹೆಚ್.ಪಿ.ಸಿ.ಎಲ್, ಬಿ.ಪಿ.ಸಿ.ಎಲ್ ನ ಸರದಿ.

ಈ ಮಾರಾಟದ ವ್ಯವಸ್ಥೆಯಲ್ಲಿ ಎಷ್ಟೊಂದು ಭ್ರಷ್ಟಾಚಾರ ನಡೆಯುತ್ತಿದೆ ಎಂಬುದನ್ನು ವರ್ಣಿಸಲು ಸಾಧ್ಯವಿಲ್ಲ. ಉದಾಹರಣೆಗೆ ಸೆಂಚೂರ್ ಹೋಟೆಲ್ ಮೊದಲು ಸಾರ್ವಜನಿಕ ಉದ್ದಿಮೆಯಾಗಿತ್ತು. ಅದನ್ನು ಖರೀದಿ ಮಾಡಿದ ಎ.ಎಲ್.ಭಾತ್ರ, ಆರ್.ಎಸ್.ಎಸ್‌ನ ಆತ್ಮೀಯ 'ಸ್ನೇಹಿತ'. ಆ ಹೋಟೇಲನ್ನು ಖರೀದಿ ಮಾಡಿದ 4 ವಾರಗಳಲ್ಲಿ 32 ಕೋಟಿ ರೂ ಲಾಭ ಇಟ್ಟು ಇನ್ನೊಂದು ಕಂಪನಿಗೆ ಮಾರಾಟ ಮಾಡಿದ. ಆರ್.ಎಸ್.ಎಸ್.ನ ಸ್ನೇಹಿತನಿಗೆ ಲಾಭ ಮಾಡಿಕೊಡಲು ಲಾಭದಾಯಕವಾದ ಹೋಟೇಲನ್ನೇ ಅಗ್ಗದ ಬೆಲೆಗೆ ಮಾರಾಟ ಮಾಡಲಾಗಿತ್ತು. 1976ರ ಕಾಯಿದೆ ಮೂಲಕ ಬರ್ಮಾಶೆಲ್‌ನ್ನು ರಾಷ್ಟ್ರೀಕರಣಗೊಳಿಸಿ ಬಿ.ಪಿ.ಸಿ.ಎಲ್. ಸ್ಥಾಪನೆಯಾಗಿತು.

ಡಿಸ್ಕೌಂಟ್ ದರದಲ್ಲಿ ಲಾಭದಾಯಕ ಸಾರ್ವಜನಿಕ ಉದ್ದಿಮೆಗಳನ್ನು ಮಾರಾಟ ಮಾಡುವ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಉಳಿಯಬೇಕೆ?

ದೇಶದ ಹಿತಾಸಕ್ತಿಯನ್ನು ಕಡೆಗಣಿಸಿದ ಕೇಂದ್ರ ಸರಕಾರದ ನಿರ್ಧಾರದ ವಿರುದ್ಧ ಫೆಬ್ರುವರಿ 14 ರಂದು ಎಲ್ಲೆಡೆ ಪ್ರತಿಭಟನೆ ನಡೆಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ (ಸಿ.ಪಿ.ಐ.(ಎಂ) ತನ್ನೆಲ್ಲಾ ಘಟಕಗಳಿಗೆ ಕರೆ ನೀಡಿದೆ. ಅಂದು ತೈಲ ಕಂಪನಿಗಳ ಕಛೇರಿ ಎದುರು, ಕೇಂದ್ರ ಸರಕಾರದ ಕಛೇರಿ ಎದುರು ಧರಣಿ, ಪಿಕೆಟಿಂಗ್, ಸಭೆ, ಮೆರವಣಿಗೆ ನಡೆಸಿ ಪ್ರತಿಭಟಿಸಬೇಕೆಂದು ಸಿಪಿಐ(ಎಂ) ಮನವಿಮಾಡಿದೆ.

ಕೇಂದ್ರ - ರಾಜ್ಯ
ಕರ್ನಾ

ವಿದೇಶಿ ಕಂಪನಿಗಳಿಗೆ ಹಸೆಮಣೆ ಹಾಸಿದ ಕೇಂದ್ರ ಸರಕಾರದ ವಿದ್ಯುತ್ ನೀತಿಯನ್ನು ಕರ್ನಾಟಕದಲ್ಲಿ ಚಾಚೂ ತಪ್ಪದೆ ಜ್ಯಾರಿಮಾಡುತ್ತಿರುವ ಹೈಟೆಕ್ ಕೃಷ್ಣ ಸರಕಾರ, ಇನ್ನೊಮ್ಮೆ ವಿದ್ಯುತ್ ದರ ಏರಿಸಲು ಹೊರಟಿದೆ. ಊರೆಲ್ಲಾ ಬರ ಬಡಿದರೂ, ಜನರೆಲ್ಲ ಗುಳೆ ಹೊರಟರೂ ವಿದ್ಯುತ್ ದರ ಏರಿಕೆಯನ್ನು ನಿಲ್ಲಿಸಲಿಲ್ಲ ಈ ಸರಕಾರ!

ಇದೆಂತಹ ಸರಕಾರ! ಬಡಜನರಿಂದ ವೋಟು ಪಡೆಯುವಾಗ 'ಸ್ವರ್ಗ'ವನ್ನೇ ಭೂಮಿಗೆ ತರುತ್ತೇವೆ ಎಂದು ಭರವಸೆ ನೀಡಿದ ಬಿಜೆಪಿ ಮತ್ತು ಕಾಂಗ್ರೆಸ್ ನೇತೃತ್ವದ ಸರಕಾರಗಳು, ಊರೆಲ್ಲ ಬರ ಬಡಿದು ಜನರು ಗುಳೆ ಹೋಗುತ್ತಿರುವಾಗ ವಿದ್ಯುತ್ ದರ ಹೆಚ್ಚಿಸಿ, 'ಪಾತಾಳ'ಕ್ಕೆ ನೂಕಲು ಸಜ್ಜಾಗುತ್ತಿವೆ. ಇನ್ನೊಮ್ಮೆ ಓಟು ಬಂದಾಗ 'ಸ್ವರ್ಗ' ದ ಭರವಸೆ ಇದ್ದೇ ಇದೆಯಲ್ಲ!

ವಿದ್ಯುತ್ ದರದ ಹೆಚ್ಚಳದ ಕೋರಿಕೆಯನ್ನು 4 ಸರಬರಾಜು ಕಂಪನಿಗಳು ಕೆ.ಇ.ಆರ್.ಸಿ.ಗೆ ಸಲ್ಲಿಸಿದ್ದರೂ, ಅದನ್ನು ಮಂಜೂರು ಮಾಡುವ ಕೆಲಸ ಕೆ.ಇ.ಆರ.ಸಿ (ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ) ಯದಾದರೂ ಅದರ ಹಿಂದಿರುವ ಸೂತ್ರಧಾರಿಗಳು ರಾಜ್ಯದ ಕಾಂಗ್ರೆಸ್ ಸರಕಾರ ಮತ್ತು ಕೇಂದ್ರ ಬಿಜೆಪಿ ನೇತೃತ್ವದ ಸರಕಾರಗಳೇ.


ಆಡಳಿತ ವೆಚ್ಚದಲ್ಲಿ ಹೆಚ್ಚಳ: ವಿದ್ಯುತ್ ಸರಬರಾಜು ಕಂಪನಿಗಳು, ದರ ಹೆಚ್ಚಿಸಲು ನೀಡಿದ ಪ್ರಮುಖ ಕಾರಣ ಆದಾಯ ಕಡಿಮೆಯಾಗಿ ಖರ್ಚು ಜಾಸ್ತಿಯಾಗುತ್ತಿದೆ ಎಂದು. ಆದ್ದರಿಂದ ಖರ್ಚು ಕಡಿಮೆ ಮಾಡುವ ಉಪಾಯ ಮಾಡಬೇಕು. ಆದರೆ ಹಿಂದಿನ ಕೆ.ಇ.ಬಿ, ಆನಂತರದ ಕೆ.ಪಿ.ಟಿ.ಸಿ.ಎಲ್ ವಿಭಜನೆಯಾದ ನಂತರ 'ಎಂ.ಡಿ' (Managing Director)ಗಳ ಸಂಖ್ಯೆ 1 ರಿಂದ 5ಕ್ಕೆ ಏರಿದೆ. ಚೀಫ್ ಇಂಜಿನಿಯರ್, ಸೂಪರಿಡೆಂಟೆಂಟಿಂಗ್ ಇಂಜಿನಿಯರ್‌ಗಳ ಸಂಖ್ಯೆ ಜಾಸ್ತಿಯಾಗಿದೆ. ಆದ್ದರಿಂದ ಈ ಕಂಪನಿಗಳ ಮುಂದೆ ನಿಲ್ಲುವ ಕಾರುಗಳ ಸಂಖ್ಯೆ ಮತ್ತು ಆ ಪ್ರಮುಖ ಅಧಿಕಾರಿಗಳ ಆಳುಗಳ ಸಂಖ್ಯೆ, ಪೆಟ್ರೋಲ್ / ಡೀಸೇಲ್ ಖರ್ಚು, ಬಂಗಲೆ ಬಾಡಿಗೆ, ಟೆಲಿಫೋನ್ ಖರ್ಚು ಜಾಸ್ತಿಯಾಗಿದೆ ಅಷ್ಟೆ. ಇದಕ್ಕೆ ಭಾಗ್ಯಜ್ಯೋತಿ/ ಕುಟೀರಜ್ಯೋತಿ ಫಲಾನುಭವಿಗಳಾದ ದಲಿತ, ಕೂಲಿಕಾರ ಬಂಧುಗಳು ಬಲಿಯಾಗಬೇಕೆ? ಅಥವಾ ದಿನವಿಡೀ ದುಡಿದು ಸಮಾಜಕ್ಕೆ ಆಹಾರ ನೀಡುವ ರೈತ ನೇಣು ಹಾಕಿಕೊಳ್ಳಬೇಕೆ?

ಹಿಂದೆ ಕೆ.ಇ.ಬಿ. / ಕೆ.ಪಿ.ಟಿ.ಸಿ.ಎಲ್ ಇರುವಾಗ ಪ್ರಧಾನ ಕಛೇರಿಯ ಎಲ್ಲಾ ಘಟಕಗಳು ಹೆಚ್ಚಾಗಿ ಬೆಂಗಳೂರಿನ ಕಾವೇರಿ ಭವನದಲ್ಲೇ ಇರುತ್ತಿದ್ದವು. ಈಗ ಬೆಸ್ಕಾಂ ಪ್ರತ್ಯೇಕವಾದ ನಂತರ ಪ್ರಧಾನ ಕಛೇರಿ ನೃಪತುಂಗ ರಸ್ತೆಯ ಬಹುಮಹಡಿ ಕಟ್ಟಡದಲ್ಲಿ ಸ್ಥಾಪಿತಗೊಂಡು ಹಲವಾರು ಕ್ಯಾಬಿನ್‌ಗಳು, ಕೌಂಟರ್‌ಗಳು ಅನಾವರಣಗೊಂಡವು. ಇನ್ನೇನು ಕೆಲಸ ಆರಂಭಗೊಳ್ಳಬೇಕು ಎನ್ನುವಷ್ಟರಲ್ಲಿ ಕಛೇರಿ ಕೆ.ಆರ್.ವೃತ್ತದಲ್ಲಿರುವ 4ನೇ ಮಹಡಿಗೆ ಸ್ಥಳಾಂತರವಾಗಿದೆ. ಪುನಃ ಕ್ಯಾಬಿನ್, ಕೌಂಟರ್‌ಗಳ ನಿರ್ಮಾಣ ಆಗಬೇಕು. ಬಣ್ಣ ಬಳಿಯಬೇಕು ದುಂದುವೆಚ್ಚ- ಆಪ್ತರಾಗಿರುವ ಕಂಟ್ರಾಕ್ಟ್‌ದಾರರಿಗೆ ವಸಂತ ಹಬ್ಬ ಅಷ್ಟೆ.

ಇದೇ ಗತಿ ಗೆಸ್ಕಾಂ, ಹೆಸ್ಕಾಂ, ಮೆಸ್ಕಾಂ ಸರಬರಾಜು ಸಂಸ್ಥೆಗಳದ್ದು. ಈ ಆಡಳಿತ ವೆಚ್ಚದ ಹೊರೆಯನ್ನು ಭರಿಸಬೇಕಾದವನು ಗ್ರಾಹಕ.

ಖಾಸಗೀಕರಣಕ್ಕೆ ದಾರಿ ಸುಗಮ

ಸಾಮಾನ್ಯವಾಗಿ ತಾವಿರುವ ಮನೆಗಳನ್ನು ಮಾರಾಟ ಮಾಡುವಾಗ ಸ್ವಚ್ಛಗೊಳಿಸಿ, ಬಣ್ಣ ಬಳಿಯುತ್ತಾರೆ. ಕೊಳ್ಳುವವರಿಗೆ ಆಕರ್ಷಕವಾಗಿರಲೆಂದು. ಈಗ ವಿದ್ಯುತ್ ಸರಬರಾಜು ಕಂಪನಿಗಳು ಮಾಡುತ್ತಿರುವುದು ಅದನ್ನೇ. ವಿದ್ಯುತ್ ಸರಬರಾಜು ಕಂಪನಿಗಳನ್ನು ಖಾಸಗೀಕರಣ ಮಾಡುವ ನಿರ್ಧಾರವನ್ನು ರಾಜ್ಯ ಸರಕಾರ ಕೈಗೊಂಡಿದೆ. ಇದಕ್ಕೆ ಕೇಂದ್ರ ಸರಕಾರವೇ ಪ್ರೇರಣೆ. 'ಜೀ ಹುಜೂರ್' ಎನ್ನುವುದು ಎಸ್.ಎಂ.ಕೃಷ್ಣರವರ ಕಾರ್ಯವೈಖರಿ. ಜನವರಿ 20 ರಂದು ಪತ್ರಿಕೆಗಳಲ್ಲಿ ಲಕ್ಷಗಟ್ಟಲೆ ಹಣ ಖರ್ಚು ಮಾಡಿ, ಜಾಹೀರಾತು ಕೊಡಲಾಗಿದೆ. ಈ ಖಾಸಗೀಕರಣದ ಹಿನ್ನೆಲೆಯಲ್ಲಿ ಅಂದಿನ ಕೆ.ಪಿ.ಟಿ.ಸಿ.ಎಲ್ 3 ಪ್ರಮುಖ ನಿರ್ಧಾರಗಳನ್ನು ಕೈಗೊಂಡಿತು.


ಖನಿಜ ಭವನ

ಹಳೆ ಬಾಕಿ ವಸೂಲಿ, ಅನಧಿಕೃತ ಕನೆಕ್ಷನ್‌ಗಳನ್ನು ಅಧಿಕೃತಗೊಳಿಸುವುದು, ಮೀಟರ್ ಅಳವಡಿಸುವುದು.

ಹಲವಾರು ವರ್ಷಗಳಿಂದ ಬಾಕಿ ವಸೂಲಿ ಬಗ್ಗೆ ತಲೆಕೆಡಿಸಿಕೊಂಡಿರದೆ ಇದ್ದ ಸರಕಾರ ಹಠಾತ್ತಾಗಿ ಸಾಲ ವಸೂಲಿಗೆ ತೊಡಗಿತು. 10,000 ದಿಂದ 50,000 ರೂ.ವರೆಗೂ ಬಾಕಿ ಬಿಲ್ಲುಗಳನ್ನು ನೀಡಿತ್ತು. 'ಹಣ ನೀಡಿ ಇಲ್ಲವೇ ಲೈನ್ ಕಟ್ ಮಾಡುತ್ತೇವೆ'. ಎಂದು ಘೋಷಿಸಿತು. ಬೆಳೆದ ಬೆಳೆಗಳಿಗೆ ದರ ಇಲ್ಲದೆ ಕಂಗಾಲಾಗಿದ್ದ ರೈತ ಎಲ್ಲಿಂದ ಹಣ ನೀಡಬೇಕು?

ಅನಧಿಕೃತ ಕನೆಕ್ಷನ್‌ಗಳನ್ನು ಅಧಿಕೃತಗೊಳಿಸುವ ಹೆಸರಿನಲ್ಲಿ ಕಳ್ಳತನ ನಿಗ್ರಹ ಕಾನೂನನ್ನು ಹೊಸದಾಗಿ ಜಾರಿಗೊಳಿಸಿತು. ಹಳ್ಳಿ ಹಳ್ಳಿಗಳಿಗೆ ಅಧಿಕಾರಿಗಳು ಧಾಳಿ ನಡೆಸಿ ರೈತರನ್ನು ಬೆದರಿಸಿ ಕಳ್ಳತನದ ಆಪಾದನೆ ಹೊರಿಸಲಾಗಿತ್ತು. ಆದರೆ ದೊಡ್ಡ ಮಟ್ಟದಲ್ಲಿ ವಿದ್ಯುತ್‌ನ್ನು ಕದಿಯುತ್ತಿದ್ದ ಕೈಗಾರಿಕಾ ಮಾಲೀಕರುಗಳಿಗೆ ಯಾವ ಶಿಕ್ಷೆಯೂ ಇಲ್ಲ.

ಕೃಷಿಗೆ ಉತ್ತೇಜನ ನೀಡಬೇಕೆಂಬ ಉದ್ದೇಶದಿಂದ ನೀರಾವರಿ ಪಂಪ್‌ಸೆಟ್‌ಗಳಿಗೆ ಸಬ್ಸಿಡಿ ದರದಲ್ಲಿ ವಿದ್ಯುತ್‌ನ್ನು ಒದಗಿಸಲಾಗಿತ್ತು. ಇದರಿಂದ ಕೃಷಿಯ ಉತ್ಪಾದನೆ ಜಾಸ್ತಿಯಾಗಿತ್ತು.

ಬಾಲಕೃಷ್ಣ ಶೆಟ್ಟಿ

ಈ ಗ ಪಂಪ್‌ಸೆಟ್‌ಗಳಿಗೆ ವಿ ೂ ಟ ರ್ ಅಳವಡಿಸಬೇಕೆಂದು ಪಟ್ಟು ಹಿಡಿಯಿತು ರಾಜ್ಯ ಸರಕಾರ. ಅವರಿಗೆ ವಿದ್ಯುತ್ ಎಷ್ಟು ಖರ್ಚಾಗುತ್ತಿದೆ ಎಂಬ ಲೆಕ್ಕ ಬೇಕಂತೆ. ಇದಕ್ಕಾಗಿ ಒರಿಸ್ಸಾ ಮೂಲದ ಕ್ಲೇವಿಯರ್ ಕಂಪನಿಯೊಂದಿಗೆ ಒಪ್ಪಂದ ಕೂಡಾ ಮಾಡಿಕೊಂಡಿತು.

ರೈತರು ತೀವ್ರವಾಗಿ ವಿರೋಧಿಸಿದ ನಂತರ ಪಂಚಾಯತಿ ಮೂಲಕ ಮೀಟರ್ ಅಳವಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯ್ತು. ಜೊತೆಯಲ್ಲಿ ಪುಲಕೇಶಿ ತಂಡದ ಹೆಸರಿನಲ್ಲಿ ಪೋಲೀಸರ ಮೂಲಕ ಮೀಟರ್‌ಗಳನ್ನು ಅಳವಡಿಸಲು ಪ್ರಯತ್ನಿಸಲಾಯ್ತು.


ವಿಶ್ವಬ್ಯಾಂಕ್, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಆದೇಶದ ಮೇರೆಗೆ ಖಾಸಗೀಕರಣವನ್ನು ಕೈಗೆತ್ತಿಕೊಳ್ಳುತ್ತಿರುವ ಸರಕಾರ, ಉತ್ಪಾದನೆ, ಪ್ರಸರಣಾ ಮತ್ತು ವಿತರಣೆಯ ಪ್ರತಿ ಹಂತದಲ್ಲಿ ಶೆ.16 ರಷ್ಟು ಲಾಭವನ್ನು ಖಾತರಿಗೊಳಿಸಬೇಕಾಗಿದೆ. ಹಾಗಾದರೆ ವಿದ್ಯುಚ್ಛಕ್ತಿ ದರ ಎಷ್ಟು ಹೆಚ್ಚಾಗಬಹುದು? ಊಹಿಸುವುದು ಕಷ್ಟ.

ಎನ್ರಾನ್‌ನಿಂದ ಪಾಠ ಕಲಿತಿಲ್ಲ

ಖಾಸಗೀಕರಣವನ್ನು ಜಾರಿಗೊಳಿಸಲು ಒಪ್ಪಂದ ಮಾಡಿಕೊಂಡ ಮಹಾರಾಷ್ಟ್ರ ಸರಕಾರದ ಗತಿ ಏನಾಯಿತೆಂಬುದನ್ನು ಕರ್ನಾಟಕ ಸರಕಾರ ಅರಿತಿಲ್ಲವೆ? ಅಲ್ಲಿನ ಕಾಂಗ್ರೆಸ್ ಸರಕಾರ ಹಾಗೂ ಬಿಜೆಪಿ. ಶಿವಸೇನಾ ಸರಕಾರಗಳು ರತ್ನಗಂಬಳಿ ಹಾಸಿ ಎನ್ರಾನ್ ಕಂಪನಿಯನ್ನು ಸ್ವಾಗತ ಮಾಡಿದವು. ಆದರೆ ಇಂದಿನ ಪರಿಸ್ಥಿತಿ! ಯುನಿಟ್ಟಿಗೆ ರೂ.2.40ರಂತೆ ವಿದ್ಯುತ್ತನ್ನು ಒದಗಿಸುವುದಾಗಿ ಒಪ್ಪಂದ ಮಾಡಿಕೊಂಡಿದ್ದರೂ ನಂತರ ಯುನಿಟ್ಟಿಗೆ ರೂ.7-20 ರವರೆಗೆ ಆದದ್ದು, ಮಹಾರಾಷ್ಟ್ರ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಗೆ ಸಾವಿರಾರು ಕೋಟಿ ರೂ. ನಷ್ಟವನ್ನುಂಟು ಮಾಡಿದ್ದು, ಹೈ-ಟೆಕ್ ಕೃಷ್ಣರಿಗೆ ಮರೆತುಹೋಯಿತೆ? ಅಥವಾ ವಿಶ್ವಬ್ಯಾಂಕ್ ದಾಸ್ಯದಿಂದ ಹೊರಬರಲು ಸಾಧ್ಯವಾಗಲಿಲ್ಲವೆ?

ಜಗತ್ತಿನ ದೈತ್ಯ ಕಂಪನಿಗಳಲ್ಲಿ ಒಂದು ಒಂದು ಹೆಸರಾದ ಎನ್ರಾನ್ ಕಂಪನಿಯು 2000ನೇ ವರ್ಷದಲ್ಲಿ 100 ಮಿಲಿಯ ಡಾಲರ್ (500 ಕೋಟಿ ರೂ) ಲಾಭಗಳಿಸಿದರೂ ಅದರ ನಂತರದ ವರ್ಷದಲ್ಲಿ ದಿವಾಳಿ ಅರ್ಜಿ ನೀಡಿ, ತಾನು ಮುಳುಗಿದ್ದು ಮಾತ್ರವಲ್ಲದೆ, ಮಹಾರಾಷ್ಟ್ರದ ಜನತೆಯನ್ನು ಕತ್ತಲಲ್ಲಿ ಮುಳುಗಿಸಿತು.

ಕರ್ನಾಟಕದಲ್ಲಿ ತಣ್ಣೀರು ಬಾವಿ ಪವರ್ ಕಂಪನಿಯೊಂದಿಗೆ ಮಾಡಿಕೊಂಡ ಒಪ್ಪಂದದ ಫಲವಾಗಿ ರಾಜ್ಯ ಸರಕಾರವು 1040 ಕೋಟಿ ರೂ. ದಂಡ ತೆರಬೇಕಾದ ಪರಿಸ್ಥಿತಿ ಬಂದಿದೆ. ಒಪ್ಪಂದದ ಪ್ರಕಾರ ಕೆ.ಪಿ.ಟಿ.ಸಿ.ಎಲ್‌ಗೆ ಸೇರಿದ ಸಾಧಾರಣ 50 ಕೋಟಿ ರೂ. ಹಣವನ್ನು ತಣ್ಣೀರು ಬಾವಿ ಕಂಪನಿಯು ಕೆ.ಪಿ.ಟಿ.ಸಿ.ಎಲ್. ಗೆ ಹೇಳದೇನೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಖಾತೆಯಿಂದ ತೆಗೆದುಕೊಂಡಿದೆ. ಈ ವಿವಾದದಲ್ಲಿ ಅಂದಿನ ಚೆರ್‌ಮ್ಯಾನ್ ಆಗಿದ್ದ 'ಎಫಿಶಿಯಂಟ್' ಎಂದು ಹೆಸರು ಪಡೆದಿದ್ದ ಅಧಿಕಾರಿಯೊಬ್ಬರು ಬೇರೆ ಇಲಾಖೆಗೆ ಹೋಗಬೇಕಾಯ್ತು ಎಂದು ಜನರಾಡಿಕೊಳ್ಳುತ್ತಿದ್ದಾರೆ.



ಈ ಖಾಸಗಿ ಕಂಪೆನಿಗಳು ಇಂತಹ ಖಾಸಗಿ ಕಂಪನಿಗಳು ನೀಡುತ್ತಿರುವ ವಿದ್ಯುತ್‌ನ ಖರೀದಿ ದರವೂ ಹೆಚ್ಚು. ಉದಾ : ತಾಲ್ಲೂಕು ಬಾವಿಯಿಂದ ಈ ಬಾರಿ ಖರೀದಿಸುತಿರುವ ವಿದ್ಯುತ್‌ಗೆ ಯುನಿಟ್ಟಿಗೆ ರೂ. 3.57 ನೀಡಬೇಕಾಗುತ್ತದೆ. ರಾಯಲಸೀಮಾ ಮತ್ತು ಟಾಟಾ ಕಂಪೆನಿಗಳಿಗೆ ಕ್ರಮವಾಗಿ ರೂ. 3.80 ಮತ್ತು ರೂ. 4.01 ನೀಡಬೇಕಾಗುತ್ತದೆ. ಆಶ್ಚರ್ಯದ ಸಂಗತಿ ಎಂದರೆ ಮುಂದಿನ ವರ್ಷ ರಾಯಲ ಸೀಮಾ ಕಂಪೆನಿಯಿಂದ ವಿದ್ಯುತ್‌ನ್ನ ಖರೀದಿಸುವ ಆಲೋಚನೆ ಕೆ.ಪಿ.ಟಿ.ಸಿ.ಎಲ್. ಗೆ ಇಲ್ಲ. ಆದರೆ ಒಪ್ಪಂದದ ಪ್ರಕಾರ (ಪಿ.ಪಿ.ಎ) ನಿಗದಿತ ಶುಲ್ಕ (fexed cost)ದ ಹೆಸರಿನಲ್ಲಿ 21.97 ಕೋಟಿರೂ ಪ್ರತಿವರ್ಷ ನೀಡಬೇಕು. ಹಾಗೆಯೇ ತಣ್ಣೀರು ಬಾವಿ ಕಂಪೆನಿಗೆ 183 ಕೋಟಿ ರೂ ಹಾಗೂ ಟಾಟಾ ಕಂಪೆನಿಗೆ 71.7 ಕೋಟಿರೂ ನೀಡಬೇಕು. ಬೇಡ ಎಂದು ಒತ್ತಾಯ ಹೇರಬೇಕಾಗಿದೆ.

ಜಲ ವಿದ್ಯುತ್‌ಗೆ ತಿಲಾಂಜಲಿ

ಖಾಸಗಿ ವಿದ್ಯುತ್ ಕಂಪನಿಗಳಿಂದ ಹೆಚ್ಚಿನ ದರದಲ್ಲಿ ವಿದ್ಯುತ್‌ನ್ನು ಖರೀದಿಸುವ ಬದಲಾಗಿ ಜಲ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಾಗೂ ಇನ್ನಿತರ ಸಂಘಟನೆಗಳು ಒತ್ತಾಯ ಮಾಡುತ್ತಾ ಬಂದಿದ್ದವು. ಖಾಸಗೀಕರಣದ ಗುಂಗಿನಲ್ಲಿರುವ ಕೃಷ್ಣ ಸರಕಾರದ ಕಿವುಡು ಕಿವಿಗೆ ಈ ಕೂಗು ಕೇಳಿಸುತ್ತಿಲ್ಲ. 2000-2001 ರಲ್ಲಿ 10,663 ದಶಲಕ್ಷ ಯೂನಿಟ್ ಜಲವಿದ್ಯುತ್ ಉತ್ಪಾದನೆಯಾಗಿದೆ.

2002-2003 ರಲ್ಲಿ ಉತ್ಪಾದನೆಯ ಗುರಿಯನ್ನು 6835 ದಶಲಕ್ಷ ಯೂನಿಟ್‌ಗೆ ಇಳಿಸಲಾಗಿದೆ. ಜಲವಿದ್ಯುತ್‌ಗೆ ತಗಲುವ ಖರ್ಚು ಯೂನಿಟ್‌ಗೆ 48-98 ಪೈಸೆ ಮಾತ್ರ. (ಅಂದರೆ 49 ಪೈಸೆ) ಆದರೆ ಖಾಸಗಿ ಕಂಪನಿಗಳಿಂದ ಖರೀದಿ ಮಾಡುವ ವಿದ್ಯುತ್‌ನ ಸರಾಸರಿ ದರ ಯೂನಿಟ್‌ಗೆ ರೂ.3.38 ಆಗುತ್ತದೆ. ಕೇಂದ್ರ ಸರಕಾರದ ಮೂಲಗಳಿಂದ ಖರೀದಿ ಮಾಡುವ ವಿದ್ಯುತ್‌ನ ದರ ರೂ.2-37 ಆಗುತ್ತದೆ.

ವಿವಿಧ ಮೂಲಗಳಿಂದ ಕೆಪಿಟಿಸಿಎಲ್ ಖರೀದಿ ಮಾಡುವ ವಿದ್ಯುತ್‌ನ ದರ ಕೆಳಗಿನಂತಿದೆ.

	2003-04ರಲ್ಲಿ ಅಂದಾಜು ಉತ್ಪಾದನೆ	2002-03 ರಲ್ಲಿದ್ದ ದರ	2003-04 ರಲ್ಲಿ ಅಂದಾಜು
ಕೆಪಿಟಿಸಿಎಲ್ ಜಲವಿದ್ಯುತ್	6431	50.07	48.98
ಥರ್ಮಲ್	10578	197.17	207.32
ಇತರೆ ರಾಜ್ಯಗಳಿಂದ	113	191.64	194.07
ಕೇಂದ್ರದಿಂದ	7076	204.04	236.86
ಖಾಸಗಿ ಸಂಸ್ಥೆಗಳಿಂದ	3091	324.78	338.40

ಕಡಿಮೆ ಬೆಲೆಗೆ ಸಿಗುವ ಜಲವಿದ್ಯುತ್ತನ್ನು ಜಾಸ್ತಿ ಉತ್ಪಾದಿಸುವ ಬದಲಾಗಿ ಖಾಸಗಿ ಸಂಸ್ಥೆಗಳೆಡೆಗೆ ಕೈಚಾಚಲಾಗುತ್ತಿದೆ. ಮೇಲೆ ನೀಡಿದ ಅಂಕಿಅಂಶಗಳಿಂದ ಇನ್ನೊಂದು ಪ್ರಮುಖ ಅಂಶವನ್ನು ಗಮನಿಸಬೇಕು. ಕರ್ನಾಟಕ ವಿದ್ಯುತ್ ನಿಗಮ (ಕೆ.ಪಿ.ಸಿ.) ಉತ್ಪಾದಿಸುತ್ತಿರುವ ಜಲ ಹಾಗೂ ಥರ್ಮಲ್ ಘಟಕಗಳು ಸರಕಾರಿ ಕ್ಷೇತ್ರದಲ್ಲಿದೆ. ಆದ್ದರಿಂದ ಸಾಕಷ್ಟು ಕಡಿಮೆ ದರದಲ್ಲಿ ಉತ್ಪಾದನೆ ಸಾಧ್ಯವಾಗಿದೆ. ಆದರೆ ಇದನ್ನು ಹಂತಹಂತವಾಗಿ ಖಾಸಗಿಯವರಿಗೆ ವಹಿಸಲಾಗುತ್ತಿದೆ.

ಕೈಗಾ ವಿದ್ಯುತ್ ಸ್ಥಾಪನೆಯ ಹೆಸರಿನಲ್ಲಿ ಪರಿಸರವಾದಿಗಳು ವಿರೋಧ ಮಾಡಿದಾಗ, ಸಿಪಿಐ(ಎಂ) ಅದರ ವಿರುದ್ಧ ದೃಢವಾಗಿ ಪ್ರಚಾರ ನಡೆಸಿತು. ಬೆಂಗಳೂರಿನಲ್ಲಿ ನಡೆದ ರಾಜ್ಯ ಸಮ್ಮೇಳನದಲ್ಲಿ ಕೈಗಾ ಅಣು ಸ್ಥಾವರ ಸ್ಥಾಪನೆ ಆಗಬೇಕೆಂದು ಸರ್ವಾನುಮತದ ಗೊತ್ತುವಳಿಯನ್ನು ಅಂಗೀಕರಿಸಿ, ಅದರ ಅನುಷ್ಠಾನಕ್ಕಾಗಿ ರಾಜ್ಯದಾದ್ಯಂತ ಪ್ರಚಾರ ನಡೆಸಿತು. ರಾಜ್ಯದಲ್ಲಿ ಮತ್ತು ದೇಶದಲ್ಲಿ

...ಕಾರಗಳ ವಿದ್ಯುತ್ ನೀತಿ ...ಕೆದ ಅವನತಿ

ವಿದ್ಯುತ್ ಸ್ವಾವಲಂಬನೆಯನ್ನು ಬಯಸದ ವಿದೇಶಿ ಶಕ್ತಿಗಳು ಪರಿಸರವಾದಿಗಳ ಹೆಸರಿನಲ್ಲಿ ಈ ತಡೆಯನ್ನು ಒಡ್ಡುತ್ತಿದ್ದಾರೆ ಎಂಬ ಅನುಮಾನವನ್ನು ಸಿಪಿಐ(ಎಂ) ಆಗ ವ್ಯಕ್ತಪಡಿಸಿತ್ತು. ಇತ್ತೀಚೆಗೆ ನಡೆಯುತ್ತಿರುವ ಮಹಾರಾಷ್ಟ್ರದ ಎನ್ರಾನ್, ಒರಿಸ್ಸಾದ ಎಇಎಸ್ ಘಟನೆಗಳು ಈ ಅನುಮಾನ ಸತ್ಯ ಎಂಬುದನ್ನು ಸ್ಪಷ್ಟಪಡಿಸಿದೆ.



ಎನ್ರಾನ್ ಕಥೆ- ಬಿಜೆಪಿ, ಕಾಂಗ್ರೆಸ್ ವ್ಯಥೆ

28 ಫೆಬ್ರುವರಿ 1995 ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ನಡೆದಿತ್ತು. ಆದರೆ ಫಲಿತಾಂಶ ಬಂದಿರಲಿಲ್ಲ. ಎನ್ರಾನ್ ಜತೆ ಒಪ್ಪಂದಕ್ಕೆ ಸಹಿ ಹಾಕುವುದಕ್ಕೆ ಎಲ್ಲಾ ದಿಕ್ಕುಗಳಿಂದ ವಿರೋಧವಿತ್ತು. ಆದರೂ ಕಾಂಗ್ರೆಸ್ ಸರಕಾರ ಚುನಾವಣೆ ಫಲಿತಾಂಶ ಬರುವ ಮೊದಲೇ ಒಪ್ಪಂದಕ್ಕೆ ಸಹಿ ಹಾಕಿತು. ಬಿಜೆಪಿ ಶಿವಸೇನೆ ತೀವ್ರ ವಿರೋಧ ಮಾಡಿದವು. ಬಿಜೆಪಿಯ ಮುಖಂಡ ಎಲ್.ಕೆ.ಅಡ್ವಾನಿ ಜುಲೈ 1995 ರಂದು ಒಪ್ಪಂದವನ್ನು ವಿರೋಧಿಸಿ, ತೀವ್ರ ಟೀಕೆ ಮಾಡಿದರು.

ಅವರ ಟೀಕೆ ಎಷ್ಟು ತೀವ್ರವಾಗಿತ್ತೆಂದರೆ "ನಾವೀಗ ಕೈಗಾರಿಕಾ ಕ್ರಾಂತಿಯ ಘಟ್ಟದಲ್ಲಿದ್ದೇವೆ. ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ನಡೆಸಲು ನಮಗೆ ಅಗ್ಗದ ದರದ ವಿದ್ಯುಚ್ಛಕ್ತಿ ಬೇಕಾಗಿದೆ. ಭಾರತವು ಜಲವಿದ್ಯುತ್ ಮತ್ತು ಕಲ್ಲಿದ್ದಲನ್ನು (ಥರ್ಮಲ್) ಸಂಪೂರ್ಣವಾಗಿ ಬಳಸಿಕೊಂಡಿಲ್ಲ. ವಿದೇಶದಿಂದ ಆಮದಾಗುವ ಇಂಧನದ ಮೇಲೆ ಅವಲಂಬಿತವಾಗುವುದು, ಲಾಭದಾಯಕವಲ್ಲ ಮತ್ತು ದೇಶದ ರಕ್ಷಣೆಗೆ ಅಪಾಯಕಾರಿ" ಎಂದು ಹೇಳಿದ ಅಡ್ವಾನಿಯವರು, 'ಎನ್ರಾನ್ ಒಪ್ಪಂದವನ್ನು ತೆರೆಯ ಮರೆಯಲ್ಲಿ ನಡೆಸಲಾಗಿದೆ" ಎಂದು ಹೇಳಿದ್ದರು.

1996ರಲ್ಲಿ ಬಿಜೆಪಿ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಸರಕಾರ ನಡೆಸಲು ರಾಷ್ಟ್ರಪತಿ ಅವರನ್ನು ಆಹ್ವಾನಿಸಿದರು. ಬಹುಮತ ಇರಲಿಲ್ಲ. ಆದರೂ 13 ದಿನ ಆಡಳಿತ ನಡೆಸಿದರು.

ಬಿಜೆಪಿ ಅಧಿಕಾರದ ಕೊನೆಯ ದಿನ ಸಂಸತ್ತಿನಲ್ಲಿ ಚರ್ಚೆ ನಡೆಯುತ್ತಿತ್ತು. ಇನ್ನು ಸ್ವಲ್ಪ ಹೊತ್ತಿನಲ್ಲಿ ವಾಜಪೇಯಿ ಅಧಿಕಾರ ತ್ಯಜಿಸಬೇಕಾಗಿತ್ತು. ಈ ಸಂದರ್ಭದಲ್ಲಿ ಅವರು ಮಾಡಿದ ಏಕೈಕ ಕೆಲಸವೆಂದರೆ, ತಾವೇ ವಿರೋಧ ಮಾಡಿದ ಎನ್ರಾನ್ ಒಪ್ಪಂದಕ್ಕೆ ಕೌಂಟರ್ ಗ್ಯಾರಂಟಿ ನೀಡಿದ್ದು.

ಆರ್ಥಿಕ ನೀತಿಗಳ ವಿಚಾರದಲ್ಲಿ ಕಾಂಗ್ರೆಸ್- ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳು ಎಂಬುದಕ್ಕೆ ಇನ್ನೇನು ಸಾಕ್ಷಿ ಬೇಕು. ಅವರು ಪರಸ್ಪರ ವಿರೋಧ ಮಾಡುವುದು ಅಧಿಕಾರಕ್ಕಾಗಿ ಮಾತ್ರ.

ಪ್ರಾದೇಶಿಕ ಅಸಮಾನತೆ

ಈಗಾಗಲೇ ಹಲವು ಬಾರಿ ಚರ್ಚಿಸಿದಂತೆ, ಕರ್ನಾಟಕ ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆ ತೀವ್ರಗೊಂಡಿದ್ದು ಸರಕಾರವೇ ನೇಮಿಸಿದ ನಂಜುಂಡಪ್ಪ ಸಮಿತಿಯ ವರದಿಯಲ್ಲಿ ಇದನ್ನು ವಿವರಿಸಲಾಗಿದೆ.

ವಿದ್ಯುತ್ ಕ್ಷೇತ್ರದಲ್ಲಿ ಈ ಅಸಮಾನತೆ ತೀವ್ರವಾಗಿದೆ. ಬೆಸ್ಕಾಂ ವಲಯದಲ್ಲಿ 12330 ದಶಲಕ್ಷ ಯೂನಿಟ್ (ಶೇ.45-57) ವಿದ್ಯುತ್ ಬಳಕೆಯಾಗುತ್ತಿದ್ದರೆ, ಗೆಸ್ಕಾಂ ವಲಯದಲ್ಲಿ (ಗುಲ್ಬರ್ಗಾ) ಕೇವಲ 3709 ದಶಲಕ್ಷ ಯೂನಿಟ್ (ಶೇ.13-70) ವಿದ್ಯುತ್ ಬಳಕೆಯಾಗುತ್ತದೆ. ಹಾಗೆಯೇ ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್‌ನ ಬಳಕೆ ಶೋಚನೀಯವಾಗಿದೆ.

ವಿದ್ಯುತ್ ದರವನ್ನು ಪುನಃ ಹೆಚ್ಚಿಸಿದ್ದೇ ಆದಲ್ಲಿ ಈ ತಾರತಮ್ಯ ಇನ್ನಷ್ಟು ಹೆಚ್ಚುತ್ತದೆ.

ಗೃಹಬಳಕೆದಾರರ ಒಂದು ದೊಡ್ಡ ವಿಭಾಗ ಇಂದಿನ ದರಗಳನ್ನು ಕೊಡಲಾಗದ ಸ್ಥಿತಿಯಲ್ಲಿದ್ದಾರೆ. 'ಹಳ್ಳಿಗಳಿಗೆ ವಿದ್ಯುತ್' ಎಂಬ ಘೋಷಣೆ ನೀಡಿದರೂ ಕರ್ನಾಟಕದಲ್ಲಿ ವಿದ್ಯುತ್ ಅಳವಡಿಸಿಕೊಂಡ ಮನೆಗಳ ಸಂಖ್ಯೆ ಕೇವಲ ಶೇ 52-47 ಗ್ರಾಮಾಂತರ ಭಾಗಗಳಲ್ಲಿ ಕೇವಲ ಶೇ.41-75 ಬೆಂಗಳೂರು ನಗರದಲ್ಲಿಯೂ ಶೇ.20 ಭಾಗ ವಿದ್ಯುತ್ ಬಳಸಲಾಗದ ಜನ ಇದ್ದಾರೆ.

ಕೆಲವೊಂದು ಜಿಲ್ಲೆಗಳ ವಿದ್ಯುತ್ ಬಳಕೆಯ ಶೇಕಡಾ ಪ್ರಮಾಣ ಶೋಚನೀಯ ಸ್ಥಿತಿಯಲ್ಲಿದೆ

ಜಿಲ್ಲೆ	ಒಟ್ಟು	ಗ್ರಾಮೀಣ	ನಗರ
ರಾಯಚೂರು	32.5	26-47	55.48
ಗುಲ್ಬರ್ಗಾ	35-91	25-85	70-64
ಕೊಡಗು	36-28	29-08	76-04
ಬೀದರ್	39-32	33-65	71-04
ಬಳ್ಳಾರಿ	41-23	32-69	60-90
	41-19	32-96	68-70

(ಸಿಪಿಐ-ಎಂ ಸಲ್ಲಿಸಿದ ಆಕ್ಷೇಪಣಾ ಪತ್ರದಿಂದ) ದರ ಇನ್ನಷ್ಟು ಹೆಚ್ಚಿಸಿದ್ದೆ ಆದಲ್ಲಿ ವಿದ್ಯುತ್ ದೀಪಗಳ ಬದಲಿಗೆ ಚಿಮಿಣಿ, ಕ್ಯಾಂಡಲ್ ಉರಿಸುವ ದಿನ ದೂರವಿಲ್ಲ. ಹಿಂದಿನ ಐಕ್ಯರಂಗದಲ್ಲಿ ಚರ್ಚಿಸಿದಂತೆ, ವಿದ್ಯುತ್ ಸರಬರಾಜು ಕಂಪನಿಗಳು ಸಲ್ಲಿಸಿದ ಮನವಿಯ ಪ್ರಕಾರ 30 ಯೂನಿಟ್‌ಗಳವರೆಗೆ ಈಗಿರುವ ರೂ.1-50 ರ ಬದಲಾಗಿ, 100 ಯೂನಿಟ್‌ಗಳವರೆಗೂ ರೂ.2-50ಕ್ಕೆ ಏರಿಸಲು ಸೂಚಿಸಲಾಗಿದೆ.

ಭಾಗ್ಯಜ್ಯೋತಿ / ಕುಟೀರಜ್ಯೋತಿ ದರ ಏರಿಕೆ

ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂಗಳು) ಕೆ.ಇ.ಆರ್.ಸಿ.ಗೆ ಸಲ್ಲಿಸಿದ ಮನವಿಗಳಲ್ಲಿ ರಾಜ್ಯವು ಎದುರಿಸುತ್ತಿರುವ ಭೀಕರ ಬರ ಪರಿಸ್ಥಿತಿಯನ್ನು ವಿವರಿಸಿದೆ. ಆದರೆ ಬರದಿಂದಾಗಿ 'ಗುಳೆ' ಹೋಗುತ್ತಿರುವ ದಲಿತ ಕುಟುಂಬಗಳಿಗೆ ಪರಿಹಾರ ನೀಡುವ ಬದಲಾಗಿ, ಅವರು ಬಳಸುತ್ತಿರುವ ಭಾಗ್ಯಜ್ಯೋತಿ/ ಕುಟೀರಜ್ಯೋತಿ ದೀಪಗಳಿಗೆ ಒಂದು ಪಾಯಿಂಟ್‌ಗೆ ರೂ.30 ರಿಂದ 50ಕ್ಕೆ ಏರಿಸಲು ಕೋರಲಾಗಿದೆ. ಎರಡನೇ ಪಾಯಿಂಟಿಗೆ ಹೆಚ್ಚುವರಿ 20 ರೂ ನೀಡಬೇಕು ಎಂದು ಸೂಚಿಸಲಾಗಿದೆ. ವಿದ್ಯುತ್ ಸರಬರಾಜು ಕಂಪನಿಗಳು ಗೃಹಬಳಕೆಗೆ ಸೂಚಿಸಿರುವ ದರ 100 ಯುನಿಟ್ಟಳ ವರೆಗೆ, ಯುನಿಟ್ಟಿಗೆ ರೂ. 2.50 ಈ ದರವೇ ಜಾಸ್ತಿ ಎಂದು ಆಕ್ಷೇಪಣೆ ಸಲ್ಲಿಸಲಾಗಿದೆ. ಆದರೆ ಭಾಗ್ಯಜ್ಯೋತಿ / ಕುಟೀರಜ್ಯೋತಿ ಫಲಾನುಭವಿಗಳು ತಿಂಗಳಿಗೆ ಪಾಯಿಂಟ್ ಎಂದರೆ ಸಾಧಾರಣ 18 ಯೂನಿಟ್ ಖರ್ಚು ಮಾಡುತ್ತಾರೆ. ಆದರೆ ಅವರಿಗೆ ದರ ನಿಗದಿ ಮಾಡಿದ್ದು ತಿಂಗಳಿಗೆ 50 ರೂ 18 ಯೂನಿಟ್ಟಿಗೆ 50 ರೂ. ಎಂದರೆ ಯುನಿಟ್ಟಿಗೆ ರೂ. 2.80 ಆಗುತ್ತದೆ.

ಸಮಾಜದಲ್ಲಿ ಅತ್ಯಂತ ಕೆಳಸ್ತರದಲ್ಲಿರುವ ಜನರಿಗೆ ಕಡಿಮೆದರದಲ್ಲಿ ವಿದ್ಯುತ್ ನೀಡಬೇಕೆಂದು ಭಾಗ್ಯಜ್ಯೋತಿ / ಕುಟೀರಜ್ಯೋತಿಯನ್ನು ಜ್ಯಾರಿಗೆ ತರಲಾಗಿತ್ತು. ಆದರೆ ಅವರನ್ನು ಇತರೆ ಗ್ರಾಹಕರಿಗೆ ಸೂಚಿಸಿದ ದರಕ್ಕಿಂತ ಹೆಚ್ಚಿಗೆ ದರವನ್ನು ಸೂಚಿಸಲಾಗಿದೆ.

ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ ದೀಪಗಳ ದುರುಪಯೋಗವನ್ನು ತಡೆಗಟ್ಟಬೇಕೆಂದು ಕೆ.ಇ.ಆರ್.ಸಿ.ಯು ಸರಬರಾಜು ಕಂಪನಿಗಳಿಗೆ ಸೂಚಿಸಿದೆ. ಆದರೆ ಆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಕಂಪನಿಗಳು ದರ ಹೆಚ್ಚಿಸಲು ಕೋರಿವೆ. ಇದು ದಲಿತ ವಿರೋಧಿ ಕ್ರಮವಲ್ಲದೆ ಇನ್ನೇನು? ಎಸ್. ಎಂ. ಕೃಷ್ಣ ಸರಕಾರದ ಈ ನೀತಿಯ ವಿರುದ್ಧ ಹಾಗೂ ಈ ನೀತಿಗಳನ್ನು ಜ್ಯಾರಿಗೊಳಿಸುತ್ತಿರುವ ಕೇಂದ್ರ ಸರಕಾರದ ವಿರುದ್ಧ ಸಂಘಟಿತ ಆಂದೋಲನ ನಡೆಸಬೇಕಾಗಿದೆ.

ಹೋರಾಟಕ್ಕೆ ಸಿಕ್ಕ ಜಯ

ತಮ್ಮ ಹಕ್ಕುಗಳಿಗಾಗಿ, ಸರಕಾರದ ನೀತಿ ವಿರುದ್ಧ ರೈತರು ಸಂಘಟಿತರಾಗಿ ಹೋರಾಟ ನಡೆಸಿದ ಪರಿಣಾಮ ಈ ಬಾರಿ ನೀರಾವರಿ ಪಂಪ್‌ಸೆಟ್‌ಗಳಿಗೆ ಸರಬರಾಜಾಗುವ ವಿದ್ಯುಚ್ಛಕ್ತಿಗೆ ದರ ಏರಿಸಿಲ್ಲ. ಬರದಿಂದಾಗಿ ದರ ಏರಿಸಿಲ್ಲ ಎಂದು ಸರಬರಾಜು ಕಂಪನಿಗಳು ಹೇಳಿಕೊಂಡರೂ, ನಿಜವಾದ ಕಾರಣ ಅದಲ್ಲ. ಬರವೇ ನಿಜವಾದ ಕಾರಣವಾಗಿದ್ದರೆ, ಭಾಗ್ಯಜ್ಯೋತಿ / ಕುಟೀರ ಜ್ಯೋತಿ ಬಳಕೆದಾರರಿಗೆ ದರ ಹೆಚ್ಚಳ ಸೂಚಿಸಬಾರದಾಗಿತ್ತು.

ಮೀಟರ್ ಅಳವಡಿಸುವುದರ ವಿರುದ್ಧವೂ ರೈತರು ಅನೇಕ ಹೋರಾಟಗಳನ್ನು ನಡೆಸಿದ್ದಾರೆ. ಹಾಸನ, ಬಿದರ್ ಬೆಂಗಳೂರು ಜಿಲ್ಲೆಯ ಹೊಸಕೋಟೆ, ದೊಡ್ಡಬಳ್ಳಾಪುರ ಮೊದಲಾದ ಕಡೆಗಳಲ್ಲಿ ತಮ್ಮ ಒಪ್ಪಿಗೆ ಇಲ್ಲದೆ ಹಾಕಿದ ಮೀಟರ್‌ಗಳನ್ನು ಕಿತ್ತು, ಸುಟ್ಟರು. ವಿದ್ಯುತ್ ಎಷ್ಟು ಖರ್ಚಾಗುತ್ತಿದೆ ಎಂದು ತಿಳಿಯಲು ಅಗತ್ಯವಿದೆ ಎಂದು ಸರಕಾರ ಹೇಳಿಕೊಂಡಿದೆ. ಬೆಸ್ಕಾಂ ಪ್ರದೇಶವೊಂದರಲ್ಲೇ ಮೀಟರ್ ಅಳವಡಿಸಲು 140 ಕೋಟಿ ರೂ. ಬೇಕಾಗುತ್ತದೆ. 'ವಿದ್ಯುತ್ ಎಷ್ಟು ಖರ್ಚಾಗುತ್ತದೆ ಎಂದು ತಿಳಿಯುವುದಕ್ಕೋಸ್ಕರ ಮೀಟರ್ ಅಳವಡಿಸುವುದಾದರೆ ಟ್ರಾನ್ಸ್ ಫಾರ್ಮರ್‌ಗೆ ಮೀಟರ್ ಅಳವಡಿಸಿ' ಎಂದು ಕರ್ನಾಟಕ ಪ್ರಾಂತ ರೈತ ಸಂಘ ಹೇಳಿದೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಕಳಪೆ ವಿದ್ಯುತ್ ಪೂರೈಕೆಯ ವಿರುದ್ಧ ಪ್ರತಿಭಟನೆ ನಡೆದಾಗ ಪೋಲೀಸರ ವಿರುದ್ಧ ಚಕಮಕಿ ನಡೆದು ರೈತ ಮುಖಂಡರನ್ನು ಬಂಧಿಸಲಾಗಿತ್ತು. ಅವರ ಬಂಧನದ ವಿರುದ್ಧ ರಾಯಚೂರು, ಕೊಪ್ಪಳ, ಬಳ್ಳಾರಿ, ಗುಲ್ಬರ್ಗಾ, ಬೀದರ್ ಜಿಲ್ಲೆಯ ಪ್ರಮುಖ ಪಟ್ಟಣಗಳಲ್ಲಿ 'ಬಂದ್' ಆಚರಿಸಿ ಪ್ರತಿಭಟಿಸಲಾಯ್ತು.

ಕರ್ನಾಟಕ ಪ್ರಾಂತ ರೈತ ಸಂಘ (AIKS) ಮತ್ತು ವಿದ್ಯುತ್ ಪಂಪ್‌ಸೆಟ್ ಬಳಕೆದಾರರ ಹೋರಾಟ ಸಮಿತಿಗಳು ಪ್ರಮುಖವಾಗಿ ಈ ಹೋರಾಟಕ್ಕೆ ನೇತೃತ್ವ ನೀಡಿದ್ದು ಪಕ್ಷಾತೀತವಾಗಿ ಈ ಹೋರಾಟ ನಡೆದಿತ್ತು. 'ಆಳುವ ಸರಕಾರಗಳ ನೀತಿಯಿಂದ ಶೋಷಣೆಗೆ ಒಳಗಾದ ರೈತರೆಲ್ಲ ಒಂದೇ' ಎಂಬ ಘೋಷಣೆ ಈ ಹೋರಾಟಗಳಲ್ಲಿ ಮೊಳಗಿತ್ತು.

2000 ಇಸವಿಯಲ್ಲಿ ಪ್ರತಿ ಹೆಚ್.ಪಿ.ಗೆ ರೂ.300 ಇದ್ದುದನ್ನು ರೂ.540 ಮತ್ತು ರೂ.900 ಕ್ಕೆ ಏರಿಸಿದಾಗ, ರೂ.540 ನೀಡಬೇಕಾಗಿದ್ದ ಬಹುಸಂಖ್ಯಾತ ಮಧ್ಯಮ ಮತ್ತು ಬಡರೈತರಿಗೆ ರೂ.240ರ ರಿಯಾಯತಿಗಳನ್ನು ಸರಕಾರ ಘೋಷಿಸಬೇಕಾಯ್ತು. ಈಗಲೂ 2 ಕ್ಕಿಂತ ಕಡಿಮೆ ಪಂಪ್‌ಸೆಟ್ ಹೊಂದಿರುವ ರೈತರು ಸರಕಾರದಿಂದ ರೂ.180/- ಸಬ್ಸಿಡಿ ಪಡೆಯುತ್ತಿದ್ದಾರೆ.

ಇದು ರೈತರ ಸಂಘಟಿತ ಹೋರಾಟಕ್ಕೆ ಸಿಕ್ಕ ಜಯವಾಗಿದೆ ಮುಂದಿನ ಹೋರಾಟಗಳು.

ಕಳೆದ ವರ್ಷ ಸರಾಸರಿ 17.5 ರಷ್ಟು ವಿದ್ಯುತ್ ದರ ಏರಿಸಲಾಗಿತ್ತು. ಇದರಲ್ಲಿ ಬಡ, ಮಧ್ಯಮ ವರ್ಗದವರ ಮೇಲೆಯೇ ಹೆಚ್ಚಿನ ಹೊರೆ ಬಿದ್ದಿತ್ತು. ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ದರ ಕಡಿಮೆ ಮಾಡಲಾಗಿತ್ತು. ಈ ವರ್ಷ ಪುನಃ ವಿದ್ಯುತ್ ದರ ಏರಿಕೆ ಪ್ರಸ್ತಾಪವನ್ನು 4 ವಿದ್ಯುತ್ ಸರಬರಾಜು ಕಂಪನಿಗಳು (ಬೆಸ್ಕಾಂ, ಹೆಸ್ಕಾಂ, ಗೆಸ್ಕಾಂ, ಮೆಸ್ಕಾಂ) ಕೆ.ಇ.ಆರ್.ಸಿಗೆ ಸಲ್ಲಿಸಿವೆ. ವಿದ್ಯುತ್ ದರ ಹೆಚ್ಚಿಸಬಾರದೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಾಗೂ ಇನ್ನಿತರ ಸಂಘ ಸಂಸ್ಥೆಗಳು, ರಾಜಕೀಯ ಪಕ್ಷಗಳು ಕೆ.ಇ.ಆರ್.ಸಿ ಗೆ ಆಕ್ಷೇಪಣಾ ಪತ್ರ ಸಲ್ಲಿಸಿದೆ.

ಅದೇ ಸಂದರ್ಭದಲ್ಲಿ ದರ ಹೆಚ್ಚಳದ ವಿರುದ್ಧ ಜನತೆಯ ಸಂಘಟಿತ ಹೋರಾಟ ಅಗತ್ಯವಾಗಿದೆ. ದರ ಹೆಚ್ಚಳದ ವಿರುದ್ಧ ಬಿಜೆಪಿಯ ಕೆಲ ಶಾಸಕರು ಪ್ರತಿಭಟನೆ ನಡೆಸಿದರು. ದರ ಹೆಚ್ಚಳಕ್ಕೆ ಬಿಜೆಪಿ ನೇತೃತ್ವದ ಕೇಂದ್ರಸರಕಾರದ ವಿದ್ಯುತ್ ನೀತಿಯೂ ಕಾರಣವೆಂಬುದನ್ನು ಮರೆಯಲಾಗದು. ರಾಜ್ಯ ಕಾಂಗ್ರೆಸ್ ಸರಕಾರಕ್ಕೆ ಸಮನಾಗಿ ಬಿಜೆಪಿಯ ಕೇಂದ್ರ ಸರಕಾರವೂ ದೋಷಿಯಾಗಿದೆ.

ಅಲ್ಲಲ್ಲಿ ಹೋರಾಟ ಸಮಿತಿಗಳು: ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್, ಕರ್ನಾಟಕ ಪ್ರಾಂತ ರೈತ ಸಂಘ, ಕೃಷಿ ಕೂಲಿಕಾರರ ಸಂಘ, ವಿವಿಧ ವಿದ್ಯಾರ್ಥಿ ಯುವಜನ ಸಂಘಟನೆಗಳು ಜಂಟಿಯಾಗಿ ಗ್ರಾಮ ಪ್ರದೇಶ, ವಾರ್ಡುಗಳಲ್ಲಿ ಹೋರಾಟ ಸಮಿತಿಗಳನ್ನು ರಚಿಸಲು ಮುಂದಾಗಿವೆ. ಅಲ್ಲಲ್ಲಿಸಮಾವೇಶ, ಸಭೆಗಳು ನಡೆದಿವೆ. ಭಾಗ್ಯಜ್ಯೋತಿ, ಕುಟೀರಜ್ಯೋತಿ, ಬಳಕೆದಾರರು, ವಿದ್ಯುತ್ ಪಂಪ್‌ಸೆಟ್ ಬಳಕೆದಾರರು, ಗೃಹ ಬಳಕೆದಾರರ ಹೋರಾಟ ಸಮಿತಿಗಳು, ಸಣ್ಣ ಕೈಗಾರಿಕೆಗಳ ಸಂಘ ಹೀಗೆ ಪಕ್ಷಾತೀತವಾಗಿ ಈ ಹೋರಾಟವನ್ನು ಮುನ್ನಡೆಸಲು ಮುಂದೆ ಬಂದಿವೆ.

ಈ ಹೋರಾಟ ಸಮಿತಿಗಳು ಕೆಳಕಂಡ ಪ್ರದೇಶಗಳಲ್ಲಿ ಜಂಟಿ ಹೋರಾಟವನ್ನು ನಿರ್ಧರಿಸಿವೆ.

ಮಂಗಳೂರು-	ಮೆಸ್ಕಾಂ	ಪ್ರ-ಕಛೇರಿ ಎದುರು	ಫೆಬ್ರುವರಿ 27
ಹುಬ್ಬಳ್ಳಿ-	ಹೆಸ್ಕಾಂ	"	ಫೆಬ್ರುವರಿ 26
ಗುಲ್ಬರ್ಗಾ-	ಗೆಸ್ಕಾಂ	"	ಫೆಬ್ರುವರಿ 24
ಬೆಂಗಳೂರು-	ಬೆಸ್ಕಾಂ	"	ಮಾರ್ಚ್ 3

ಈ ಪ್ರತಿಭಟನೆಯ ನಂತರವೂ ಕೇಂದ್ರದ ಬಿಜೆಪಿ ಮತ್ತು ರಾಜ್ಯದ ಕಾಂಗ್ರೆಸ್ ಸರಕಾರಗಳು ಮಧ್ಯ ಪ್ರವೇಶ ಮಾಡದೆ ಹೋದಲ್ಲಿ ಈ ಚಳುವಳಿ ಇನ್ನಷ್ಟು ತೀವ್ರಗೊಳ್ಳುವುದೆಂದು ಹೋರಾಟ ಸಮಿತಿಯ ಮುಖಂಡರು ಘೋಷಿಸಿದ್ದಾರೆ.

ಸೀಬರ್ಡ್ ನಿರಾಶ್ರಿತರು
ಕಡಲ ಹಕ್ಕಿಗಳಿಗೆ ಕಾಣದ ನೆಲೆ



ಕಳೆದ 50 ದಿನಗಳಿಂದ ಕಾರವಾರದ ಜಿಲ್ಲಾಧಿಕಾರಿ ಕಛೇರಿ ಎದುರು ಸೀಬರ್ಡ್ ನಿರಾಶ್ರಿತರು ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಧರಣಿ ಕುಳಿತಿದ್ದಾರೆ. ವಿವಿಧ ರೀತಿಯ ಹೋರಾಟ ನಡೆಸಿದರೂ ಸರ್ಕಾರದ ಪೊಲೀಸ್ ಶಕ್ತಿಯ ಎದುರು ಸೋತು ನೆಲ ಕಳೆದುಕೊಂಡರು. ಒಂದು ಗುಂಟೆಗೆ 150-200 ರೂ.ಗಳಿಗೆ ಭೂಮಿ ಕಳೆದುಕೊಂಡರು. ಅನಂತರವಾದರೂ ಬೇಡಿಕೆ ಈಡೇರಬಹುದೆಂದು ತಾತ್ಕಾಲಿಕವಾಗಿ ನಿರ್ಮಾಣ ಆದ ವಸತಿಗೆ ಬಂದರೆ ಮೀನು ಬೇಯಿಸುವ ಬಂಡಿಯಂತ ತಗಡಿನ ಮನೆಯಲ್ಲಿ ವಾಸ, ಯಾವ ಮೂಲಭೂತ ಸೌಕರ್ಯಗಳೂ ಇಲ್ಲದ ಬದುಕು... ಬದುಕಿವದರಂಗೆ ಬೇಕಾದ ಯಾವ ವ್ಯವಸ್ಥೆಯೂ ಈವರೆಗೆ ಸಾಧ್ಯ ಆಗದಿದ್ದಾಗ ಕಡಲಹಕ್ಕಿಗಳು ಕಳಕೊಂಡ ರೆಕ್ಕೆಗಾಗಿ, ಒದಗಿದ ಹೊಟ್ಟೆಗಾಗಿ ವಿವಿಧ ಹೋರಾಟ ನಡೆಸಿ ಅನಿರ್ದಿಷ್ಟಾವಧಿ, ಹೋರಾಟಕ್ಕೆ ಕುಳಿತಿದ್ದಾರೆ. ಅವರ ಬಗ್ಗೆ ಯಮುನಾ ಗಾಂವ್ಕಾರ್‌ರವರ ವರದಿ ಇಲ್ಲಿದೆ.

ಕಡಲಾಳ ಅರಿತರೂ ಒಡಲಾಳದ ಬೆಂದುರಿ ಸಹಿಸಲಾದೀತೆ ತಣ್ಣಗಾದೀತೇ? ಕಡಲ ಮಕ್ಕಳು ಕಡಲ ಹಕ್ಕಿಗೆ (ಸೀಬರ್ಡ್) ಬಲಿಯಾದದ್ದು ಒಂದು ದುರಂತದ ಕಥೆ. 80 ರ ದಶಕದಲ್ಲಿ ಉದ್ಘಾಟನೆಯಾದಾಗ ಪ್ರಧಾನ ಮಂತ್ರಿಯಾದಿಯಾಗಿ ಆಳುವವರೆಲ್ಲ ಹೇಳಿದ್ದರು. 'ನೋಡಿ ನಿಮ್ಮ ಕಣ್ಣಲ್ಲಿ ಒಂದು ತೊಟ್ಟು ನೀರು ಬರದಂತೆ ನೋಡ್ತೇವೆ. ಎಲ್ಲರೀತಿಯ ಪರಿಹಾರ ನೀಡ್ತೇವೆ. ನೀವು ನಿಶ್ಚಿಂತೆಯಿಂದಿರಿ ಎಂದು . ಆದರೆ ಉತ್ತರಕನ್ನಡ ಜಿಲ್ಲೆಯ ರಮಣೀಯ ಸ್ಥಳ, ದಕ್ಷಿಣದ ಕಾಶ್ಮೀರ ಮತ್ಸ್ಯೋದ್ಯಮದಲ್ಲಿ ಗಮನಾರ್ಹ ಬೆಳವಣಿಗೆ ಕಂಡು ದೇಶಕ್ಕೆ ಸಂಪತ್ತು ಒದಗಿಸಿದ ಕಾರವಾರದ ಕಡಲ ತೀರದಿಂದ ಅಂಕೋಲದವರೆಗಿನ ಮೀನುಗಾರರು ಮತ್ತು ರೈತರು ನಿರಾಶ್ರಿತರಾಗಿ ಸಮಂಜಸ ಪರಿಹಾರ ಸೌಲಭ್ಯ ಸಿಗದೇ ಒಂದುವರೆ ತಿಂಗಳಿಂದ ಜಿಲ್ಲಾಧಿಕಾರಿಗಳ ಕಛೇರಿ ಎದುರು ಸರದಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ.

ದೇಶದಲ್ಲಿ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳು ಬರುವಾಗಲೆಲ್ಲ ಈ ಮಣ್ಣ ಮಕ್ಕಳ ಆಕ್ರಂದನ ಮುಗಿಲಿಗೇರಿದ್ದನ್ನು ನೋಡಿದ್ದೇವೆ. ವೈಜ್ಞಾನಿಕವಾದ ರೂಪುರೇಷೆಗಳಿಲ್ಲದ ಹಲವಾರು ಯೋಜನೆಗಳಿಂದು ಜಾರಿಗೊಳ್ಳುತ್ತಿವೆ. ಅದು ಹರಿವ ನೀರಿನ ಯೋಜನೆ (Ren of the river) ಇರಬಹುದು, ಅಣೆಕಟ್ಟು ಕಟ್ಟಿ ವಿದ್ಯುತ್ ಉತ್ಪಾದಿಸುವುದು, ಅಣುಶಕ್ತಿಯಿಂದ ವಿದ್ಯುತ್ ಉತ್ಪಾದನೆ ಹಾಗೂ ರಕ್ಷಣಾ ಇಲಾಖೆ, ಬೃಹತ್ ಕೈಗಾರಿಕಾ ಸಮುಚ್ಚಯ ನಿರ್ಮಾಣಗಳಿರಬಹುದು. ಅಂಥ ಯೋಜನೆ ಆಯಾ ಪ್ರದೇಶಕ್ಕೆ ಬರುವಾಗಲೆಲ್ಲ ಸರ್ಕಾರ ತನ್ನ ಯುಕ್ತ ಯುಕ್ತ ವಿವೇಚನೆ ಬಳಸುತ್ತಿಲ್ಲ ಎನ್ನುವುದು ಸರ್ವವಿಧಿತ. ಹಾಗೆ ಉತ್ತರಕನ್ನಡ ಜಿಲ್ಲೆಯ ಸಂದರ್ಭದಲ್ಲಿ ಈ ಹಿಂದೆ ಇಂಥ ಯೋಜನೆಗಳು ಬಂದಾಗ ಪರಿಸರವಾದಿ ಚಳುವಳಿ ಬುಗಿಲೆದ್ದಿತು. ಯೋಜನೆಗಳೇ ಬೇಡ ಎನ್ನುವವರಿಗೂ, ಅಭಿವೃದ್ಧಿಗಾಗಿ ಯೋಜನೆಗಳು ಬೇಕು; ಯೋಜನೆಯಿಂದ ಸಂತ್ರಸ್ತರಾದವರಿಗೆ ಪರಿಹಾರ ಪುನರ್ವಸತಿ ಜರುಗಲಿ ಎನ್ನುವವರಿಗೂ ಜಿಲ್ಲೆಯಲ್ಲಿ ತಿಕ್ಕಾಟ ನಡೆದೇ ಇದೆ.

ಕಾಳಿ ಜಲವಿದ್ಯುತ್ ಮತ್ತು ಕೈಗಾ ಅಣುವಿದ್ಯುತ್ ಯೋಜನೆಗಳೆರಡರಲ್ಲಿ ಪುನರ್ವಸತಿ ಮತ್ತು ಪರಿಹಾರ ಕಾರ್ಯಗಳು ಏಕರೂಪದಲ್ಲಿಲ್ಲ ಮತ್ತು ಪಕ್ಷ ಮತಧೋರಣೆ ಅನುಸರಿಸಲಾಗಿದೆ ಎಂದು ಪುನಗಂಡು 1998-99 ರಲ್ಲಿ ಪ್ರಾಂತರೈತ ಸಂಘ (ಕೆ.ಪಿ.ಆರ್.ಎಸ್) ನೇತೃತ್ವದಲ್ಲಿ ಅನಿರ್ದಿಷ್ಟ ಅವಧಿಯ ಧರಣಿ ಹಮ್ಮಿಕೊಳ್ಳಲಾಗಿತ್ತು. ಕೈಗಾ ಅಣುಸ್ಥಾವರದ ವಿಕಿರಣ ಸೂಸುವ 5 ಕಿ.ಮೀ ವ್ಯಾಪ್ತಿಯಲ್ಲಿ ವಾಸಿಸುವ (exclusive zpne) ಕುಟುಂಬಗಳ ಸ್ಥಳಾಂತರಕ್ಕೆ ಮತ್ತು ಪರಿಹಾರ ಪುನರ್ವಸತಿ ಹಾಗೂ ಉದ್ಯೋಗ ಇತ್ಯಾದಿ ಆಗ್ರಹಿಸಿ ಬೃಹತ್ ಹೋರಾಟ ಸ್ವಲ್ಪಮಟ್ಟಿಗೆ ಯಶಸ್ಸು ಗಳಿಸಲಾಗಿತ್ತು. ಹಾಗೇ ವಿವಿಧ ಸ್ಥಳೀಯ ಸಂಘಟನೆಗಳು ಹೋರಾಟ ನಡೆಸಿದವು. ಆದರೆ ಅಂತಿಮ ಪರಿಹಾರ ಕಾರ್ಯ ಜರುಗಬೇಕಿದೆ.

ದೇಶದ ರಕ್ಷಣಾ ಇಲಾಖೆಯ ಬೃಹತ್ ಯೋಜನೆ 'ಸೀಬರ್ಡ್' ಕಾರವಾರದಲ್ಲಿ 1980 ರ ದಶಕದಲ್ಲಿ ರಾಜೀವಗಾಂಧಿ ಪ್ರಧಾನಿ ಆಗಿದ್ದಾಗ ಆರಂಭಿಸಲ್ಪಟ್ಟು ಮಧ್ಯದಲ್ಲಿ ಸ್ವಲ್ಪ ಸ್ಥಗಿತವಾಗಿ ಮತ್ತೆ ಕಾರ್ಯಾರಂಭ ಮಾಡಿತು. ಕಾರವಾರದ ಬೈಥಕೋಲ ಬಂದರಿನಿಂದ ಪ್ರಾರಂಭವಾಗಿ ಅಂಕೋಲಾದವರೆಗಿನ ಸಮುದ್ರ ತೀರ ಪ್ರದೇಶ ಸೀಬರ್ಡ್ ಯೋಜನಾ ಪ್ರದೇಶ ದೇಶ ರಕ್ಷಣಾ ಕೆಲಸದ ಭಾಗವಾಗಿ ಸೈನಿಕರಿಗೆ ತರಬೇತಿಯಿಂದ ಹಿಡಿದು ಗಡಿ(ಪಶ್ಚಿಮ ಕರಾವಳಿ) ರಕ್ಷಣೆಗೆ ಈ ಭಾಗ ಉಪಯೋಗಿಸಲಾಗುತ್ತಿದೆ. ಸುಮಾರು 24 ಕಿ.ಮೀ ವ್ಯಾಪ್ತಿಯ ಪ್ರದೇಶದ ಜನರು ಮುಖ್ಯವಾಗಿ ಮೀನುಗಾರಿಕೆಯನ್ನೇ ಅವಲಂಬಿಸಿದೆ. ಮೀನುಗಾರ ಕುಟುಂಬ ಹಾಗೂ ರೈತರನ್ನು ಇಲ್ಲಿಂದ ಎಬ್ಬಿಸಲಾಗಿದೆ. ಪ್ರಾರಂಭದ ಹಂತದಲ್ಲಿ ದರ್ಪ-ದೌರ್ಜನ್ಯ ಕಣ್ಣಿಗೆ ರಾಚುವಂತಿರದಿದ್ದರೂ ಬರಬರುತ್ತಾ ಆಡಳಿತಶಾಹಿ ಪೊಲೀಸರನ್ನಿಟ್ಟು ಸಂತ್ರಸ್ತರನ್ನು ಓಡಿಸುವತ್ತ ಯಶಸ್ಸು ಪಡೆಯಿತು. 1986 ರಿಂದ ಹಲವಾರು ಹೋರಾಟಗಳಾಗಿರುವುದನ್ನು ಹೇಗೆ ಮರೆಯಲು ಸಾಧ್ಯವಿಲ್ಲವೋ ಹಾಗೇ 1999ರಲ್ಲಿ ಅರ್ಗಾ ಅಲಿಗದ್ದಾ ಮತ್ತು ಬಿಣಗಾ ನಿರಾಶ್ರಿತರನ್ನು ತೆರವು ಮಾಡಬೇಕಾದಾಗ ನಡೆದ ಘಟನೆ ಪಾತ್ರೆ ಪಗಡೆ ಬಿಸಾಡಿ ಹೆಣ್ಣು- ಗಂಡು ಲೆಕ್ಕಿಸದೇ ಏಟು ಬಿಗಿದದ್ದು ಕಾರವಾರದ ಜನತೆಯ ಕಣ್ಣಿಂದ ಮಾಸುವಂತಿಲ್ಲ. ನಿರಾಶ್ರಿತರಿಗೆ ಸಂದಾಯವಾಗಬೇಕಾದ ಪರಿಹಾರಕ್ಕಾಗಿ ಆಗ್ರಹಿಸಿ 11-12-2002 ಬೃಹತ್ ಸಂಖ್ಯೆಯಲ್ಲಿ ಸೇರಿದ ನಿರಾಶ್ರಿತರ ಮೆರವಣಿಗೆಯ ಮೂಲಕ ಪ್ರಾರಂಭವಾದ ಧರಣಿ ಸತ್ಯಾಗ್ರಹ ಸರದಿಯಂತೆ ಇಂದಿಗೂ ಮುಂದುವರಿದಿದೆ. ನರಕ ಸದೃಶ ತಾಣಗಳಾದ ಚಿತ್ತಾಕುಲಾ, ಹಾರುವಾಡ, ಆಮದಳ್ಳಿ, ತೋಡೂರು, ಹಟ್ಟಿಕೇರಿ, ಬೇಲೆಕೇರಿ ಕಾಲನಿಗಳ ಜನ ದಿನವೂ ನೂರಾರು ಸಂಖ್ಯೆಯಲ್ಲಿ ಬಂದು ಧರಣಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಸ್ಥಳದಲ್ಲೇ ಅಡಿಗೆ ಮಾರಿ ತಿನ್ನುತ್ತಿದ್ದಾರೆ. ಈ ಹೋರಾಟಕ್ಕೆ ಪಕ್ಷಾತೀತ ಬೆಂಬಲ ದೊರೆಯುತ್ತಿದೆ. ಕಾಂಗ್ರೆಸ್ ಪಕ್ಷ ಆಗಾಗ ಹುಳಿ ಹುಳಿ ಹೇಳಿಕೆ ನೀಡುತ್ತಿದೆ. ಬಹುಶಃ ಅದು ತನ್ನ ಪಕ್ಷದಲ್ಲಿ ಈ ಹಿಂದೆ ಇದ್ದ ಮುಖಂಡರೇ ಈಗ ಹೋರಾಟಕ್ಕೆ ನೇತೃತ್ವ ನೀಡಿದ್ದನ್ನು ಸಹಿಸಲಾರದೇ ಹಾಗೆ ಮಾಡುತ್ತಿರಬಹುದು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಜಿಲ್ಲಾ ಸಂಚಾಲಕ ಶಾಂತಾರಾಮ ನಾಯಕ, ಸಿಪಿಐ(ಎಂ) ಜಿ.ಆರ್.ನಾಯ್ಕ ಸಿಐಟಿಯು ನ ಯಮುನಾ ಗಾಂವ್ಕಾರ್ ಡಿ.ವೈ.ಎಫ್.ಐ ನ ವಿಠ್ಠಲ ಭಂಡಾರಿ, ಜೋಸ್ ಥಾಮಸ್ ಭಾಗವಹಿಸಿದ್ದರು.

ಸಂಯುಕ್ತ ಜನತಾ ದಳದ ಪ್ರಮೋದ ಹೆಗಡೆ, ರೈತ ಸಂಘದ ಬಾಬಾಗೌಡ ಪಾಟೀಲ, ಬಿಜೆಪಿಯ ವಿಶ್ವೇಶ್ವರ ಹೆಗಡೆ ಕಾಗೇರಿ ಮುಂತಾದವರು ಕೆಲಹೊತ್ತು ಕುಳಿತು ಬೆಂಬಲಿಸಿ ಹೋಗಿದ್ದಾರೆ.

ರೆಕ್ಕೆ ಮುರಿಯಲ್ಪಟ್ಟ ಕಡಲ ಹಕ್ಕಿಗಳಿಗೆ ಹಾರುವ ಶಕ್ತಿಯಿಲ್ಲದಿದ್ದರೂ ನಡೆದಾಡುವ ಶಕ್ತಿಯನ್ನಾದರೂ ಸರ್ಕಾರ ಕೊಡಬೇಕೆಂದು ಆಗ್ರಹಿಸಿ ಡಿ.ವೈ.ಎಫ.ಐ ಮತ್ತು ಎಸ್.ಎಫ್.ಐ ಸಂಘಟನೆ ಒಂದು ದಿನ ನಿರಾಶ್ರಿತರೊಂದಿಗೆ ಸೌಹಾರ್ದಯುತವಾಗಿ ಧರಣಿಯಲ್ಲಿ ಪಾಲ್ಗೊಂಡಿದೆ. ಪ್ರತ್ಯೇಕವಾಗಿ ಮನವಿಯ ಮೂಲಕ ಪರಿಹಾರಕ್ಕಾಗಿ ಸರ್ಕಾರವನ್ನು ಆಗ್ರಹಿಸಿದೆ.

ಸೀಬರ್ಡ್ ನಿರಾಶ್ರಿತರ ಹೋರಾಟಕ್ಕೆ ಆಗಮಿಸಿದ ಜನ ಸುಮಾರು 40 ದಿನಗಳಿಂದ ಸರ್ಕಾರಕ್ಕೆ - ಮಂತ್ರಿ ಮಹೋದಯರಿಗೆ ಹಿಡಿಶಾಪ ಹಾಕುತ್ತಲೇ ಇದ್ದಾರೆ. ಹೋರಾಟದ ನೇತೃತ್ವವನ್ನು ನೌಕಾನೆಲೆ ನಿರಾಶ್ರಿತರ ವೇದಿಕೆಯ ಗೌರವಾಧ್ಯಕ್ಷ ಮಾಜಿ ಸಚಿವ ಪ್ರಭಾಕರ ರಾಣೆ, ಅಧ್ಯಕ್ಷ ಬಿ. ಹೊನ್ನಪ್ಪ ಕಾರ್ಯದರ್ಶಿ ರವೀಂದ್ರ ಅಮದಳ್ಳಿ, ನಗರಸಭೆ --- ಸಮಿತಿ ಅಧ್ಯಕ್ಷ ಚಂದ್ರಕಾಂತ ಖಾರ್ವಿ ಡೆಂಡಿಯಾ ಗ್ರಾಮ ಪಂಚಾಯತ ಮಾಜಿ ಅಧ್ಯಕ್ಷ ಗಣಪತಿ ಮಾಗ್ರೆ ಮತ್ತು ಇನ್ನು ಅನೇಕ ಜನ ವಹಿಸಿದ್ದಾರೆ. ಹೋರಾಟ ದಿನದಿಂದ ದಿನಕ್ಕೆ ಕಾವೇರುತ್ತಿದೆ. ಪ್ರಸಿದ್ಧ ಕರಾವಳಿ ಉತ್ಸವ ಕಾರವಾರದಲ್ಲಿ ಬರುತ್ತಿರುವುದನ್ನು ಹಾಗೂ ಅಪಾರ ಹಣ ವ್ಯಯಿಸುವುದನ್ನು ವಿರೋಧಿಸಿ ಕಾರವಾರ ಬಂದ್‌ಗೆ ಕರೆ ಕೊಡಲಾಗಿತ್ತು. ಉಸ್ತುವಾರಿ ಮಂತ್ರಿಗಳಾದ ಆರ್.ವಿ.ದೇಶಪಾಂಡೆ ಸಂಸದೆ ಮಾರ್ಗರೇಟ್ ಆಳ್ವ, ನಿರಾಶ್ರಿತರಿಗೆ ಈಗಾಗಲೇ ಸಾಕಷ್ಟು ಪರಿಹಾರ ನೀಡಲಾಗಿದೆ. ಇನ್ನು --- ನೀಡಲು ಅಸಾಧ್ಯ ಎಂದವರು ಕಾರವಾರ ಬಂದ್‌ನಿಂದ ಕರಾವಳಿ ಉತ್ಸವದಲ್ಲಿ ತಮ್ಮ ಮಾನಹಾನಿ ಆದೀತೆಂಬ ಹೆದರಿಕೆಯಿಂದ ಉತ್ಸವ ಉದ್ಘಾಟನೆಗೆ ಮುನ್ನ ಗೃಹಸಚಿವ ಮಲ್ಲಿಕಾರ್ಜುನ ಖರ್ಗೆಯವರ ಮುಂದಾಳತ್ವದಲ್ಲಿ ಅರ್ಧ ತಾಸು ನಿರಾಶ್ರಿತ ಮುಖಂಡರೊಡನೆ ಮಾತುಕತೆ ನಡೆಸಿ ಒಂದು ವಾರದೊಳಗೆ ಬೇಡಿಕೆ ಈಡೇರಿಕೆಗೆ ಸಭೆ ಜರುಗಿಸುವುದಾಗಿ ಭರವಸೆ ನೀಡಿದ್ದಾರೆ. ಆದರೂ ಧರಣಿ ಮುಂದುವರೆದದ್ದು ವಿಶೇಷ ಮತ್ತು ಸಮಸ್ಯೆಯ ತೀವ್ರತೆಯನ್ನು ಬಿಂಬಿಸುತ್ತಿದೆ. ಪ್ರಮುಖ ಬೇಡಿಕೆಗಳು

ಶೀಘ್ರ ಪರಿಹಾರ ನೀಡಿಕೆಗೆ ವಿಶೇಷ ಲೋಕಾಂದಾಲತ್ ಸ್ಥಾಪಿಸಬೇಕು. ನಿರಾಶ್ರಿತ ರೈತರಿಗೆ ಭೂಮಿಗೆ ಭೂಮಿ ಸಿಗಬೇಕು. ಎರಡು ಮೀನುಗಾರಿಕಾ ಬಂದರು ಸ್ಥಾಪನೆಯಾಗಬೇಕು. ಕುಟುಂಬಕ್ಕೊಂದು ಉದ್ಯೋಗ ನೀಡಬೇಕು; ಪರ್ಯಾಯ ಉದ್ಯೋಗ ನೀಡಬೇಕು. ವಯಸ್ಸಿನ ನಿರ್ಬಂಧವಿರಬಾರದು. ಪುನರ್ವಸತಿ ಕಾಲನಿಗಳಿಗೆ ಮೂಲಭೂತ ಸೌಲಭ್ಯ ಒದಗಿಸಬೇಕು. ವಯಸ್ಸಿನ ನಿರ್ಬಂಧವಿಲ್ಲದೇ ಅನುದಾನ ನೀಡಬೇಕು. 18 ವರ್ಷ ಮೇಲ್ಪಟ್ಟವರಿಗೆ ಪ್ರತ್ಯೇಕ ಕುಟುಂಬ ಎಂದು ಪರಿಗಣಿಸಬೇಕು. ಭೂಮಿಗೆ ಪರಿಹಾರ ಹೆಚ್ಚಾಗಬೇಕು. (ಈಗ ಗುಂಟೆಯೊಂದಕ್ಕೆ ಕೇವಲ 150 ರೂ ನೀಡಿದ್ದಾರೆ) ವಿನಾಯಕ ಹಂಚಿನ ಕಾರ್ಖಾನೆ ಕಾರ್ಮಿಕರನ್ನು ನಿರಾಶ್ರಿತರನ್ನು ಪರಿವರ್ತಿಸಿ ಪುನರ್ವಸತಿ ಪರಿಹಾರ ನೀಡಬೇಕು. ಪುನರ್ವಸತಿ ಕೇಂದ್ರಕ್ಕೆ ಜಮೀನು ನೀಡಿದವರಿಗೆ ಸರಿಯಾದ ಪರಿಹಾರ ನೀಡಬೇಕು. ಇತ್ಯಾದಿ ಬೇಡಿಕೆಯೊಂದಿಗೆ ಧರಣಿ ನಡೆಯುತ್ತಿದೆ. "ರಾಷ್ಟ್ರ ರಕ್ಷಣೆಗೆ ಸರ್ವಸ್ವ ತ್ಯಾಗ ಮಾಡಿದ ನಿರಾಶ್ರಿತರ ಜನರ ಹಕ್ಕು ಕಸಿದುಕೊಳ್ಳಬೇಡಿ" ಎಂದು ದಿನಂಪ್ರತಿ ಘೋಷಣೆ ಕೇಳಿಬರುತ್ತಿದೆ. ಸ್ಥಳೀಯ ಸಮಸ್ಯೆಗಳಾದ ದಿನೋಪಯೋಗಿ ನೀರು, ಶಿಕ್ಷಣ, ಆಸ್ಪತ್ರೆಗೆ ಸೌಲಭ್ಯ ಪೋಲೀಸ್ ಸ್ಟೇಶನ್, ಅಂಚೆ ವ್ಯವಸ್ಥೆ, ರಸ್ತೆ ನಿರ್ಮಾಣ, ತೆಗೆಯುವುದು, ವಿದ್ಯುತ್ ಪೂರೈಕೆ ಇತ್ಯಾದಿ ವ್ಯವಸ್ಥೆಗೆ ಹೋರಾಟ ನಿರತರು ಆಗ್ರಹಿಸುತ್ತಿದ್ದಾರೆ. ಹಟ್ಟಿಕೇರಿ ಕಾಲನಿಯ ಚಂದ್ರಕಾಂತ ನಾಯ್ಕ, ಮಂಗರ್ಶಿ ಪ್ರಭಾಕರ ನಾಯ್ಕ, ಚಿತ್ತಾಕುಲಾ ಕಾಲನಿಯ ಪಾಂಡು ಹರಿಕಾಂತ , ಚುಡ್ಯಾ ತಾಂಡೇಲ, ಮುದಗಾದಿಂದ ಲಕ್ಷ್ಮಣ ತೋರೂರಿಂದ ಗಜಾನನ ನಾಯ್ಕ, ರೋಹಿದಾಸ್ ನಾಯ್ಕ, ಬಾವಿಕೇರಿಯ ವೆಂಕಟ್ರಮಣ ನಾಯಕ, ಸುಬ್ರಾಯ ಸಾವಿತ್ರಿ, ಶಾಂತಿ, ಸೀತಾಬಾಯಿ, ಶಾಂತಾ ನಾಯ್ಕ, ದೀಪಾ ನಾಯ್ಕ ಮುಂತಾದವರು ತಮ್ಮ ಪುನರ್ವಸತಿ ನೇತೃತ್ವ ವಹಿಸಿದ್ದಾರೆ.

ಮಹತ್ವಾಕಾಂಕ್ಷಿ ಕಡಲಹಕ್ಕಿ (ಸೀಬರ್ಡ್) ಯೋಜನೆಗಳಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ತನ್ನೆರಡು ದುಡಿಯುವ ರಟ್ಟೆಯನ್ನು ಕಳೆದುಕೊಂಡು ಹಾರಂಗಡಿ ಬಿದ್ದುಕೊಂಡಿರುವ ಕಡಲ ಹಕ್ಕಿಗಳ (ಮೀನುಗಾರರು, ನಿರಾಶ್ರಿತರು) ನೋವನ್ನು ಸಾರ್ಕರ, ಜಿಲ್ಲಾಡಳಿತ, ಉಸ್ತುವಾರಿ ಸಚಿವರು, ರಕ್ಷಣಾ ಸಚಿವರು ಅರ್ಥ ಮಾಡಿಕೊಳ್ಳಬೇಕಾಗಿದೆ. ದೇಶಕ್ಕಾಗಿ ತ್ಯಾಗ ಮಾಡಿದ ಈ ಜನರು ಹವಾ ನಿಯಂತ್ರಿತ ಮನೆಯನ್ನೇ, ರಕ್ಷಣಾ ಇಲಾಖೆಯಲ್ಲಿ ಕಮಾಂಡರ್ ಹುದ್ದೆಯನ್ನೋ, ಸರ್ಕಾರದಲ್ಲಿ ಮಂತ್ರಿ ಪದವಿಯನ್ನೋ ಕೇಳುತ್ತಿಲ್ಲ. ಉಳಿಯಲೊಂದು ಮನೆ, ಕಳೆದುಕೊಂಡ ಭೂಮಿಗೆ ಭೂಮಿ, ಬೆಳೆದು ನಿಂತ ಮಗ/ ಮಗಳಿಗೊಂದು ಸಣ್ಣ ಉದ್ಯೋಗ, ಕಳೆದುಕೊಂಡ ಸಮುದ್ರ ತೀರಕ್ಕಾಗಿ ಒಂದು ಬಂದರು ಕೇಳುತ್ತಿದ್ದಾರೆ. ದೇಶದ ಗಡಿಯಲ್ಲಿ ಸೈನಿಕರು ಮಡಿದಾಗ ಮೆರವಣಿಗೆ ಮಾಡಿ ದೇಶಪ್ರೇಮದ ನಾಟಕ ಆಡುವ ಕೇಂದ್ರ ಸರ್ಕಾರ ರಕ್ಷಣಾ ಕಾರ್ಯಕ್ಕಾಗಿ ಮನೆ, ಭೂಮಿ-ಬದುಕು ಕಳೆದುಕೊಂಡ ಇವರದೂ ತ್ಯಾಗ ಎಂದು ಅರ್ಥ

9ನೇ ಪುಟಕ್ಕೆ



ಮಾಧ್ಯಮ ಮಂಥನ

ವಿಶ್ವಾಮಿತ್ರ

ತಿಂದು ತೇಗುವವರಿಗೆ ಪ್ರಚಾರ; ಹಸಿದವರಿಗಿಲ್ಲ.... ಸುದ್ದಿಯಾಗಬಾರದ್ದೆಲ್ಲಾ ದೊಡ್ಡಸುದ್ದಿಯಾಗುತ್ತವೆ. ಸುದ್ದಿಯಾಗಬೇಕಾದದ್ದು ಸುದ್ದಿಯಾಗುವುದೇ ಇಲ್ಲ. ಇದು ಇಂದು ಪತ್ರಿಕೆ, ಟಿ.ವಿ. ಮಾಧ್ಯಮಗಳು ಅನುಸರಿಸುತ್ತಿರುವ ನೀತಿ ಆಳುವವರ ಹಿತ ಕಾಯುವ ಜಾಣ ಲೆಕ್ಕಾಚಾರ. ಈಚೆಗಿನ ಇಂತಹ ಕೆಲ ಬೆಳವಣಿಗೆಗಳನ್ನು ವಿಶ್ವಾಮಿತ್ರರವರು ವಿಶ್ಲೇಷಿಸಿದ್ದಾರೆ.

"ರಾಜಕೀಯ ಸುದ್ದಿಗಳಷ್ಟೇ ಪ್ರಾಶಸ್ತ್ಯ ಕೊಡಬೇಡಿ" ಹೀಗೆಂದು ಅಪ್ಪಣೆ ಕೊಡಿಸಿದ್ದಾರೆ ಭಾರತದ ಉಪಪ್ರಧಾನಿಯೂ ಆದ ಗೃಹಸಚಿವ ಎಲ್.ಕೆ.ಅಡ್ವಾಣಿ. ಲೋಕಾಯುಕ್ತರ ಸಮ್ಮೇಳನ, ಧಾರ್ಮಿಕ ಸಮಾವೇಶ ಮೊದಲಾದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಅಡ್ವಾಣಿ ಕಳೆದವಾರ ಬೆಂಗಳೂರಿನಲ್ಲಿದ್ದರು. ಈ ಸಂದರ್ಭದಲ್ಲಿ ಅವರಿಂದ ಬಂದ ಮಾತಿದು.

ಒಳ್ಳೆಯದೇ ಖಂಡಿತಕ್ಕೂ ಒಳ್ಳೆಯದೇ ಅಡ್ವಾಣಿಯವರ ಈ ಉಪದೇಶ. ಮಾಧ್ಯಮಗಳು-ಪತ್ರಿಕೆಗಳೇ ಇರಲಿ, ಟಿವಿ ಚಾನೆಲ್‌ಗಳೇ ಇರಲಿ - ರಾಜಕಾರಣಿಗಳು ಹಾಗೂ ರಾಜಕೀಯಕ್ಕೆ ಸಂಬಂಧಿಸಿದ ಸುದ್ದಿಗಳಷ್ಟೆ ಆದ್ಯತೆ ನೀಡಿ ಟನ್‌ಗಟ್ಟಲೆ ನ್ಯೂಸ್‌ಪ್ರಿಂಟ್ ಹಾಗೂ ಸಮಯ ನುಂಗಿಹಾಕುತ್ತಿರುವ ಸನ್ನಿವೇಶದಲ್ಲಿ ಸ್ವತಃ 'ರಾಜಕಾರಣಿ' ಒಬ್ಬರಿಂದ ಇಂಥ 'ಕಾಳಜಿ' ವ್ಯಾಪಕವಾಗಿರುವುದನ್ನು ಮೆಚ್ಚಲೇಬೇಕು. ಮಾಧ್ಯಮದವರು ಅಭಿವೃದ್ಧಿ ವಿಚಾರಗಳಿಗೆ, ಸಾಂಸ್ಕೃತಿಕ - ಸಾಮಾಜಿಕ ಸಮಾಚಾರಗಳಿಗೆ ಸೂಕ್ತ ಸ್ಥಾನ ಒದಗಿಸುವುದಿಲ್ಲ ಎನ್ನುವುದು ಯಾವತ್ತಿನಿಂದಲೂ ಇರುವ ಕೊರಗು ಆಗಿದೆ.

ಆದೇನೇ ಇರಲಿ. ಈಗ ಕೇಂದ್ರ ಗೃಹಮಂತ್ರಿಯ ಮಾತನ್ನು ವಸ್ತುನಿಷ್ಠವಾಗಿ ನೋಡಿದರೆ ಸೂಕ್ತವೇ ಅನಿಸುವುದರಲ್ಲಿ ಸಂಶಯವಿಲ್ಲ. ಆದರೆ ವಸ್ತುನಿಷ್ಠವಾಗಿ ನೋಡಿದಾಗ? ಅಡ್ವಾಣಿಯವರ ಹೃದಯಾಂತರಾಳದಿಂದ ಈ ಮಾತು ಬಂದಿದೆಯೆಂದು ನಾವು ನಂಬಲು ಸಾಧ್ಯವೆ? ತಮ್ಮ ಕೋಮುವಾದ ರಾಜಕಾರಣಕ್ಕೆ ಪ್ರತಿಯಾದ ರಾಜಕೀಯ ವಿಚಾರ ಮಾಧ್ಯಮದಲ್ಲಿ ಪ್ರಕಟವಾದಾಗ ತಮ್ಮ 'ರಾಜಕೀಯ'ಕ್ಕೆ ಕತ್ತರಿ ಬಿತ್ತೆಂದು ಇವರು ಹರಿಹಾಯುವುದಿಲ್ಲವೆ? ತಮ್ಮ ಪಕ್ಷದ ಕೋಮುವಾದಿ ರಾಜಕೀಯಕ್ಕೆ ಒತ್ತು ಬೇಕೆಂದು ಇವರು ಸದಾ ಹಾತೊರೆಯುತ್ತಿರುತ್ತಾರೆ. ದುರದೃಷ್ಟವಶಾತ್ ನಮ್ಮ ಬಹುತೇಕ ಮಾಧ್ಯಮ ಒಡೆಯರು ಮತ್ತು ಪತ್ರಕರ್ತರು ಕೋಮುವಾದಿ ರಾಜಕಾರಣ ಮಾತ್ರವೇ ಅಲ್ಲ ಯಾವುದೇ ಪಕ್ಷದ ಆಂತರಿಕ ಕಚ್ಚಾಟ, ವೈಯಕ್ತಿಕ ಕಾಲೆಳೆಯುವ ಆಟಗಳಿಗೆ ಸಾಕಷ್ಟು ಪ್ರಚಾರ ನೀಡುತ್ತಾರೆ, ಅವುಗಳೇ ದೇಶದ, ರಾಜ್ಯದ ಪ್ರಧಾನ ಸುದ್ದಿಗಳೆಂದು ಬರೆದು ಬೀಗುತ್ತಾರೆ.

ಜಾಣ ಕುರುಡು

ಇಡೀ ಜಗತ್ತು ಜಾಗತೀಕರಣದ 'ಕುಲುಮೆ'ಯಲ್ಲಿ ಬೆಂದು ಬೇಯುತ್ತಿದೆ. ಇದರ ವಿರುದ್ಧ ಭೂಗೋಳದಲ್ಲಿ ಆಂದೋಲನ ನಡೆಯುತ್ತಿದೆ. ಈ ಜಾಗತೀಕರಣ - ಉದಾರೀಕರಣದ ಉರುಳು ಪತ್ರಿಕೋದ್ಯಮ ಕ್ಷೇತ್ರದ ಕೊರಳಿಗೂ ಬೀಳುತ್ತಿದೆ. ಆದಾಗ್ಯೂ ಜನಸಮುದಾಯ ಇಂಥ ಅನಿಷ್ಟದ ವಿರುದ್ಧ ಒಂದೆಡೆ ಕಲೆತು ಸಮಾಲೋಚಿಸಿದ ಮಹತ್ತರ ಸಂಗತಿಯನ್ನು ನಮ್ಮ ಮಾಧ್ಯಮದವರು ಕಡೆಗಣಿಸಿದ್ದು ಕಣ್ಣಿಗೆ ರಾಚುವಂತಿದೆ. ಹೊಸ ವರ್ಷದ ಆರಂಭದಲ್ಲಿ ಹೈದರಾಬಾದಿನಲ್ಲಿ ನಡೆದ ಏಷ್ಯಾ ಸಾಮಾಜಿಕ ವೇದಿಕೆಯ (ASF) ಸಮಾವೇಶಕ್ಕೆ ದೊರೆತ 'ಪ್ರಚಾರವೇ' ಇದಕ್ಕೆ ಸಾಕ್ಷಿ.

ಎ.ಎಸ್.ಎಫ್ ಸಮಾವೇಶದಲ್ಲಿ ಪ್ರದರ್ಶನಕ್ಕಿಟ್ಟಿದ್ದ ಪ್ರಖ್ಯಾತ ಕಲಾವಿದ ಎಂ.ಎಫ್.ಹುಸೇನರ ಅಮೂಲ್ಯ ಕಲಾಕೃತಿಗಳು ಹಾಗೂ ಆನಂತರ ಕೆಲವು ವ್ಯಂಗ್ಯಚಿತ್ರಕಾರರ ಕೃತಿಗಳು ನಾಪತ್ತೆಯಾಗಿವೆ, ಕಳವಾಗಿವೆ ಎಂಬ ಸುದ್ದಿ ಪ್ರಕಟಣೆಯೇ ನಮ್ಮಲ್ಲೊಂದು ಇಷ್ಟು ಬೃಹತ್ ಪ್ರಮಾಣದ ಸಮಾವೇಶ ನಡೆದಿತ್ತು ಎಂಬ ಮಾಹಿತಿ ನೀಡಿತು. ಇಲ್ಲವಾದರೆ ಅದೂ ಗೊತ್ತಾಗುತ್ತಿರಲಿಲ್ಲ.

'ಸುದ್ದಿಧರ್ಮ'ಕ್ಕೆ ಅಪಪ್ರಚಾರ

ಇಡೀ ಏಷ್ಯಾ ಖಂಡದಿಂದ ನೂರಾರು ಸಂಘಟನೆಗಳು, ರಾಜಕೀಯ ಪಕ್ಷಗಳು, ಹತ್ತು ಹಲವು ತತ್ವ ಸಿದ್ಧಾಂತಗಳನ್ನು ಪ್ರತಿನಿಧಿಸಿ 15000 ಕ್ಕೂ ಮಿಕ್ಕಿದ್ದ ಪ್ರತಿನಿಧಿಗಳು ಬಂದಿದ್ದ ಸಮಾವೇಶಕ್ಕೆ ಮಾಧ್ಯಮಗಳಲ್ಲಿ ದೊರೆತ ಪ್ರಚಾರ ಅವುಗಳ 'ಜಾಣಕುರುಡುತನ'ಕ್ಕೆ ಕನ್ನಡಿ ಹಿಡಿದಂತಿತ್ತು.

ಇಡೀ ಏಷ್ಯಾಖಂಡದ ಜನತೆ, ಅಷ್ಟೇ ಏಕೆ ಈ ಭೂಗ್ರಹದ ಮೇಲಿನ ಜನರ ಬದುಕಿನ ಪ್ರಶ್ನೆಯನ್ನು ಚರ್ಚಿಸಿದ ಒಂದು ಮಹತ್ವದ ಕಾರ್ಯಕ್ರಮಕ್ಕೆ ಸುದ್ದಿರೂಪದ ಪ್ರಚಾರವನ್ನು ನೀಡದಿರುವುದು ಪತ್ರಿಕಾಧರ್ಮ; ಅಲ್ಲಲ್ಲ 'ಸುದ್ದಿಧರ್ಮಕ್ಕೆ' ಎಸಗಿದ ಅಪಚಾರ ಎನ್ನದೇ ವಿಧಿಯಿಲ್ಲ.

ಆದರೆ ಇಡೀ ಮಾಧ್ಯಮದವರು ಅನಿವಾಸಿ ಭಾರತೀಯರ 'ಭಾರತೀಯ ಯಾತ್ರಾ ದಿವಸ' ಸಮ್ಮೇಳನಕ್ಕೆ ಅಬ್ಬರದ ಪ್ರಚಾರ ನೀಡಿದರು. ಅದೇ ವೇಳೆ ದೆಹಲಿಯಲ್ಲಿ ನಡೆದ, ನೊಬೆಲ್ ಪ್ರಶಸ್ತಿ ಪುರಸ್ಕೃತ ಆರ್ಥಿಕ ತಜ್ಞ ಅಮರ್ತ್ಯ ಸೇನ ಕೂಡ ಪಾಲ್ಗೊಂಡಿದ್ದ 'ಹಸಿವಿನಿಂದ ಕಂಗೆಟ್ಟವರ' ಸಮ್ಮೇಳನ ಇವರಿಗೆ ನಗಣ್ಯವಾಯಿತು. ಆಹಾರವುಳ್ಳವರ ಬಗ್ಗೆ, ಮೋಜು ಮಜಾ ಉಡಾಯಿಸುವವರ ಬಗ್ಗೆ ಪುಟಗಟ್ಟಲೆ ಬರೆಯುವವರಿಗೆ, ತಾಸುಗಟ್ಟಲೆ ಟಿವಿ ಕ್ಯಾಮರಾ ಹಾಯಿಸುವವರಿಗೆ; ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲದ ದರಿದ್ರ ನಾರಾಯಣರ ಬಗ್ಗೆ ಒಂದು ಕಾಲಂ ಸುದ್ದಿ ಬರೆಯುವ ಮನಸ್ಸು ಇಲ್ಲ, ವ್ಯವಧಾನವೂ ಇಲ್ಲ.

ಬಹುಶಃ 'ಹಸಿದವರ ಮೇಳ'ದಲ್ಲಿ ಮನೆಗೊಯ್ಯಲು ಯಾವುದೇ 'ಗಿಫ್ಟ್' ಸಿಗುವುದಿಲ್ಲ ಎನ್ನುವುದು ಇದಕ್ಕೆ ಕಾರಣವಿರಲೂಬಹುದೇ?

ಹಸಿವಿನಿಂದ ನರಳಿ ಸತ್ತರಷ್ಟೇ ಎಲ್ಲೋ ಒಂದು 'ಬಿಟ್' ಸುದ್ದಿ ಪ್ರಕಟವಾಗುತ್ತದೆ. ಈ ಹಸಿವಿಗೆ ಕಾರಣವಾದ 'ರಾಜಕೀಯ'ದ ಬಗ್ಗೆ ಬರೆಯುವುದು ಕಡಿಮೆ, ಬರೆದರೂ ಪ್ರಕಟವಾಗುವುದು ಕಡಿಮೆ! ಅಡ್ವಾಣಿ ಹೇಳುವ 'ರಾಜಕೀಯ'ಕ್ಕೂ ಈ 'ರಾಜಕೀಯ'ಕ್ಕೂ ತುಂಬಾ ವ್ಯತ್ಯಾಸವಿದೆ. ಎರಡನೇ ವಿಭಾಗದ 'ರಾಜಕೀಯ'ಕ್ಕೆ ಪ್ರಾಶಸ್ತ್ಯ ಸಿಗಬೇಕು. ಆದರೆ ಅಂಥದ್ದಕ್ಕೆ ಅವಕಾಶ ಸಿಗಬೇಕಾದರೆ ಜನಸಾಮಾನ್ಯರ ಕೈಯಲ್ಲಿ ಮಾಧ್ಯಮ ಇರಬೇಕು. ಇದು ಸದ್ಯ ಕನಸಿನ ಮಾತು. ಕನಿಷ್ಠಪಕ್ಷ ಮಾಧ್ಯಮದಲ್ಲಿರುವವರಾದರೂ 'ಜನಪರ' ಚಿಂತನೆ ನಡೆಸಿದರೆ ಈ ಆಶಯ ಸ್ವಲ್ಪ ಮಟ್ಟಿಗೆ ಈಡೇರಬಹುದು. -- ಪತ್ರಕರ್ತ ಎಂದರೆ ಕಲ್ಪನಾಲೋಕದಲ್ಲಿ ವಿಹರಿಸಲು ಇರುವ ಲೈಸೆನ್ಸ್ ಎಂದು ಭಾವಿಸುವವರೇ ಹೆಚ್ಚಾಗಿರುವಾಗ ಅದನ್ನು ನಿರೀಕ್ಷಿಸುವುದು ಕೂಡ ತಪ್ಪೇನೋ ಅನಿಸುತ್ತದೆ.

ಪುಟ 8 ರಿಂದ

ಮಾಡಿಕೊಳ್ಳಬೇಕು. ರಾಜ್ಯವನ್ನೇ ಸಿಂಗಾಪುರ ಮಾಡಹೊರಟಿರುವ ರಾಜ್ಯ ಸರ್ಕಾರ ನಿರಾಶ್ರಿತರಿಗೆ ಬದುಕು ಕೊಡದ ಸಿಂಗಾಪುರಕ್ಕೆ ಅರ್ಥವಿಲ್ಲ ಎಂದು ತಿಳಿಯಬೇಕಾಗಿದೆ. ಅಲ್ಲಿಯವರೆಗೆ ಜಿಲ್ಲೆಯ ಜನ, ಸಂಘಟನೆ ಹೋರಾಟದೊಂದಿಗೆ ನಿಲ್ಲುವುದು ಅವರ ಕರ್ತವ್ಯವಾಗಿದೆ.

"ನೀವ್ ಯಾರ? ಹೌದಾ? ನಮ್ಮ ಬಗ್ಗೆ ಹೋರಾಟ ಮಾಡೂಕ ಬಂದೀರಾ? ಬರೆ ಹೇಳಿ ನೀವಾರು. ಅವ್ರು ಸರ್ಕಾರ ನಡ್ಸೂಕ್ ಮುಂಚಿ ಈಗ ಓಟ್ ಕೊಡಿ ನಂತ್ರ ಪರಿಹಾರ ಅಂತ್ರು. ಗೆದ್ ಮ್ಯಾಗೆ ಕ್ಯಾರೇ ಇಲ್ಲ. ರಿಕ್ಷಾದಲ್ಲಿ ಓಟು ಕೇಳಲು ಕಳಿಸ್ತಾರೆ"- ಹಾರವಾಡದ ಶ್ರಿಮತಿ ಹಾಲಿ ತಾಕು ತಾಂಡೇಲಳ ಆಕ್ರೋಶ

"ವಯಸ್ಸಾದವರಿಗೆ ಪರಿಹಾರ ಸ್ವಲ್ಪ ಸಿಕ್ಕದೆ. ಸಣ್ಣವರಿಗೆ ಇಲ್ಲ ಈಗಲೇ ನೂರಾರು ಜನ ಸತ್ತುರು ಸೀಬರ್ಡ್ ಜಾಗಬೇಕು ಹೇಳಿ ನಮ್ಮ ಎತ್ತಂಗಡಿ ಮಾಡಿ ಮೊಳೆಲ್ಲಿ ನಿಲ್ಲಿಸಿದ್ರು ಡಿಸಿ"


ಶೋಭಾ ತಾಂಡೇಲಳ ಅಳಲು "ನಾವು ಗಂಜಿ ಉಣ್ಣಾಕೂ ಗತಿ ಇಲ್ಲ. ಹಳ್ಳದ್ ನೀರ ಬಂದ್ರ ನಾವು ಎಲ್ಲಿ ಹೋಗಾದು?" ಗಿರಿಜಾ ಜೇನು ತಾಂಡೇಲಳ ಪ್ರಶ್ನೆ.

ಮನೆ ಹಣ ಮತ್ತು 2 ಎಪ್ಪತ್ತು ಒಂದು ಐವತ್ತು(ಸಾವಿರ) ಕೊಟ್ಟೀದ್. ಅದ್ರಲ್ಲಿ ಆಳೋರು ಪಾಲ ಹಂಚ್ಕ್ಯಾತಾರೆ. ಈ ಸರ್ಕಾರ ಆ ಸರ್ಕಾರ (ಕೇಂದ್ರ ಮತ್ತು ರಾಜ್ಯ) ಎಳ್ಳೂ ಕೂಡುದಿಲ್ಲ ನಮ್ಗ ಪರಿಹಾರ ಇಲ್ಲ. ಸೀಕಾಗಿ ದವಾಖಾನೇಲಿ ಸತ್ತೆ ಅಂತಾರೆ. ನಾವು ಉಂಬಾಕೆ ಇಲ್ಲಿ ಬಂದಿಲ್ಲ. ಚಾಕುಡಾಕೂ ದುಡ್ಡಿಲ್ಲ ಗೊತ್ತಾ ಮುಗಾ? ಇದು ಕುಮಾಯಿ ಆರ್ಗೆಕರಳ ಮನದಾಳದ ಮಾತು. ಅಷ್ಟರಲ್ಲಿ ತಾಕಿ ಬಸಪ್ಪ ಹರಿಕಂತ್ರ ಬಂದು 'ಮುಗಾ ನಂದೂ ಬರ್ಕಾ. ನಂಗೆ ಕಾಯಿ ಮಳ್ದದ್ದು ದುಡ್ಡು ಸಿಗಲಿಲ್ಲ.' ಅಂದ್ಲು. ಅಧಿಕಾರಿಗಳು ಎಲ್ಲ ಬರ್ಕಂಡು ಹೋದ್ರು ಎಕ್ಷನ್ ತಗಳ್ನಾ. ಮರ ಗಿಡ ಗೋರು ಬೇರೆ ತೆಂಗು ಎಲ್ಲ ಇತ್ತ ಎಂದು ಮರೆಯದ ನೆನಪನ್ನು ಕೆಣಕಿದಳು. ತಾ ದಾನು ಹರಿಕಂತ್ರ ಈ ಸಂದರ್ಭದಲ್ಲಿ ಓಮಿ --- ಜೋಳ ಶೆಟ್ಟಿ ಹೇಳಿದ್ರು) ಏನಾದ್ರೂ ಸಿಗಬೇಕೇಳಿ ಹೋರಾಟ ಮಾಡ್ತೀರು ನಾವು ಬೆಳೆಸಿದ್ದು ನಮಗ ಸಿಗಾಕಲಾ ಎಲ್ಲಿವರ್ಗೂ ಹೋರಾಟ. ಸಾವುವರ್ಗೂ ಹೋರಾಟ ನಮ್ದು. ಜೀವನಾನೇ ಬಂದ್ ಹೋರಾಟ"

ಪರಿಹಾರ ನೀಡಿಕೆ ವಿಳಂಬ ಸಲ್ಲದು. ವಿಶೇಷ ಲೋಕ ಅದಾಲತ್ ನಡೆಸಬೇಕು. ನಿರಾಶ್ರಿತ ರೈತರಿಗೆ ಭೂಮಿಗೆ ಭೂಮಿ ಸಿಗಬೇಕು. ಎರಡು ಮೀನುಗಾರಿಕಾ ಬಂದರು ಸ್ಥಾಪನೆ ಆಗಬೇಕು. ಕುಟುಂಬಕ್ಕೊಂದು ಉದ್ಯೋಗ(ವಯಸ್ಸಿನ ನಿರ್ಬಂಧ ಸಡಿಲಿಸಬೇಕು)

ಗಾಂಧಿ ಕೊಂದವರು ದೇಶವನ್ನಾಳುತ್ತಿದ್ದಾರೆ.

ಕೋಮು ಸೌಹಾರ್ದತೆಯನ್ನು ಅತ್ಯಂತ ಪ್ರಬಲವಾಗಿ ಪ್ರತಿಪಾದಿಸುತ್ತಿದ್ದ ಗಾಂಧಿಜಿಯನ್ನು ಆ ಕಾರಣಕ್ಕಾಗಿ ಕೊಂದ ಗೂಡ್ಸೆ ಪರಂಪರೆಯ ಜನ ದೇಶವನ್ನು ಆಳುತ್ತಿದ್ದಾರೆ ಎಂದು ಪ್ರಖ್ಯಾತ ವಿಚಾರವಾದಿ ಪ್ರೊ.ಕೆ.ರಾಮದಾಸ್ ವಿಷಾದ ವ್ಯಕ್ತಪಡಿಸಿದರು.



ಅವರು ಮಳವಳ್ಳಿಯಲ್ಲಿ ಡಿ.ವೈ.ಎಫ್.ಐ ಮತ್ತು ಜೆ.ಎಂ.ಎಸ್ ತಾಲ್ಲೂಕು ಸಮಿತಿ ಜಂಟಿಯಾಗಿ ಸಂಘಟಿಸಿದ ಗಾಂಧಿ ಹುತಾತ್ಮದಿನ ಹಾಗೂ ಕೋಮು ಸೌಹಾರ್ದತೆ ದಿನಾಚರಣೆ ಉದ್ಘಾಟಿಸಿ ಮಾತನಾಡುತ್ತಿದ್ದರು.

ಗಾಂಧಿ ಹುಟ್ಟಿದ ನಾಡಿನಲ್ಲಿ ಹಾಗೂ ದೇಶದಲ್ಲಿ ಜಾತಿ ಧರ್ಮ ಪ್ರಚೋದಿಸುವ ಮೂಲಕ ಭಯೋತ್ಪಾದನೆ ಸೃಷ್ಟಿಸಲಾಗುತ್ತಿದೆ. ಇದು ಬಹಳ ಅಪಾಯಕಾರಿಯಾದ ಬೆಳವಣಿಗೆ. ಹರಿಯಾಣದಲ್ಲಿ ವಿಶ್ವಹಿಂದು ಪರಿಷತ್ತಿನ ಕೋಮುವಾದಿಗಳು ಸತ್ತದನದ ಚರ್ಮ ಸುಲಿಯುವ ವೃತ್ತಿ ನಡೆಸುತ್ತಿದ್ದ ಐವರು ದಲಿತರನ್ನು ಹಾಡು ಹಗಲೇ ಕಲ್ಲಿನಿಂದ ಹೊಡೆದು ಕೊಂದಿದ್ದಾರೆ.ದಲಿತರ ಸ್ವಾವಲಂಬನೆಗಾಗಿ ಜೀವನ ಪರ್ಯಂತ ಶ್ರಮಿಸಿದ ಅಂಬೇಡ್ಕರ್‌ರವರನ್ನು ಹಿಂದುತ್ವದ ಸಿದ್ಧಾಂತ ಪೋಷಿಸಿದರು ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಬೌದ್ಧ ಧರ್ಮಕ್ಕೆ ಮತಾಂತರಗೊಂಡಿದ್ದ ಅಂಬೇಡ್ಕರ್‌ರವರನ್ನು ಕೇಸರಿಕರಣ ಮಾಡುತ್ತಿರುವ ಸಂಘ ಪರಿವಾರ, ಮತಾಂತರದ ಆರೋಪ ಹೊರಿಸಿ ದೇಶದಾದ್ಯಂತ ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡುತ್ತಿದೆ. ಬಂಡವಾಳ ಶಾಹಿಗಳ ಹಿತವನ್ನು ಎಲ್ಲಾ ರೀತಿಯಿಂದ ರಕ್ಷಣೆ ಮಾಡುತ್ತಿರುವ ಬಿಜೆಪಿ, ಆರ್.ಎಸ್.ಎಸ್ ನ ಕೂಟ ಗಾಂಧೀಜಿಯ ಮೇಲೆ ದೇಶ ವಿಭಜನೆಯ ಆರೋಪ ಹೊರಿಸುತ್ತಿದೆ. ವಾಸ್ತವವಾಗಿ ದೇಶದ ವಿಭಜನೆಗೆ ಅವರು ವಿರುದ್ಧ ಇದ್ದರು ಧರ್ಮದ ಆಧಾರದ ಮೇಲೆ ರಾಷ್ಟ್ರ ಕಟ್ಟುವ

11ನೇ ಪುಟಕ್ಕೆ

ಕುಂದಾಪುರ ಪುರಸಭಾಧ್ಯಕ್ಷರ ಹದ್ದುಮೀರಿದ ವರ್ತನೆಗೆ ಪ್ರತಿಭಟನೆ

ಪ್ರಥಮ ಪ್ರಜೆಯೆಂದೇ ಕರೆಸಿಕೊಳ್ಳುವ ನಗರ ಸಭೆಯ ಅಧ್ಯಕ್ಷೆ ಶಿಕ್ಷಕರೊಬ್ಬರ ಮೇಲೆ ಹರಿಹಾಯ್ದಿದಲ್ಲದೇ ದೈಹಿಕ ಹಲ್ಲೆಯನ್ನೇ ನಡೆಸಿದರೆಂದರೆ ಹೇಗೆ? 'ಪ್ರತಿಭಾಕಾರಂಜಿ' ಸಮಾರಂಭದಲ್ಲಿ ಮಕ್ಕಳೆದುರು ನಗರಸಭಾಧ್ಯಕ್ಷೆ. ತಮ್ಮ ಕಾಂಗ್ರೆಸ್ ಸಂಸ್ಕೃತಿ ತೋರಿಸಿಯೇ ಬಿಟ್ಟರು. ಸಿ.ಪಿ.ಐ(ಎಂ) ಇಂತಹವರ ಮೇಲೆ ಕ್ರಮವಿನ್ನೂ ಯಾಕಿಲ್ಲ ಎಂದು ಪ್ರಶ್ನಿಸಿ ಪ್ರತಿಭಟಿಸಿದೆ.


ಕರ್ನಾಟಕ ಸರಕಾರ ಶಿಕ್ಷಣ ಇಲಾಖೆಯ ಮೂಲಕ ಪ್ರಥಮ ರಾಜ್ಯ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ವಿದ್ಯಾರ್ಥಿಗಳ ಸಾಂಸ್ಕೃತಿಕ ಸ್ಪರ್ಧೆ ಅಂಗವಾಗಿ ಡಿಸೆಂಬರ್ 20,21 ಮತ್ತು 22 ರಂದು ಕುಂದಾಪುರ ಗಾಂಧಿ ಮೈದಾನದಲ್ಲಿ " ಪ್ರತಿಭಾ ಕಾರಂಜಿ" ಕಾರ್ಯಕ್ರಮ ನಡೆಯಿತು.

ಡಿಸೆಂಬರ್ 20 ರಂದು ಪ್ರತಿಭಾ ಕಾರಂಜಿ-2002 ರ ಉದ್ಘಾಟನಾ ಸಮಾರಂಭದ ಕಾರ್ಯಕ್ರಮಗಳು ನಡೆದಾಗ, ಅನೇಕ ಜಿಲ್ಲೆಗಳಿಂದ ಆಗಮಿಸಿದ್ದ ವಿದ್ಯಾರ್ಥಿ ವಿದ್ಯಾರ್ಥಿನಿಯರು, ಅವರ ಹೆತ್ತವರು ಹಾಗೂ ಅಧ್ಯಾಪಕರ ಎದುರಿನಲ್ಲಿ ಕುಂದಾಪುರ ಪುರಸಭಾಧ್ಯಕ್ಷೆಯಾದ ದೇವಕಿ ಸಣ್ಣಯ್ಯನವರು ತಮಗೆ ವೇದಿಕೆಯಲ್ಲಿ ಭಾಷಣ ಮಾಡಲು ಅವಕಾಶ ಸಿಗಲಿಲ್ಲ. ಎನ್ನುವ ಕಾರಣಕ್ಕಾಗಿ ಕಾರ್ಯಕ್ರಮ ನಿರೂಪಕರಾದ ಕೆ.ಸಿ.ರಾಜೇಜರವರ ಮೇಲೆ ಸಭಾಂಗಣದ ಮುಂಬಾಗದಲ್ಲಿ ಅಧಿಕಾರಿಗಳ, ಮಂತ್ರಿಗಳ, ಶಾಸಕರುಗಳ ಹಾಗೂ ಸುಮಾರು 6 ಸಾವಿರ ಜನರ ಸಮ್ಮುಖದಲ್ಲೇ ಹಲ್ಲೆ ಮಾಡಿದ್ದು ತೀರಾ ಖಂಡನೀಯವಾಗಿದೆ. ಕುಂದಾಪುರದ ಪ್ರಥಮ ಪ್ರಜೆಯಾದ ಪುರಸಭಾಧ್ಯಕ್ಷರ ವರ್ತನೆಯನ್ನು ಎಲ್ಲಾ ವಿಭಾಗದವರು ಮತ್ತು ಪತ್ರಿಕೆಗಳು ಖಂಡಿಸಿವೆ. ಕಾಂಗ್ರೆಸ್ಸಿನ ಪುರಸಭೆ ಆಡಳಿತದ ವಿರುದ್ಧ ಜನಸಾಮಾನ್ಯರಲ್ಲಿ ಅತೃಪ್ತಿಯು ಹೊಗೆಯಾಡಲು ಆರಂಭಿಸಿದೆ.

ಅನಂತರ ಪ್ರವಾಸಿ ಮಂದಿರದಲ್ಲಿ ಪುರಸಭಾಧ್ಯಕ್ಷೆಯ ಮೇಲೆ ಕೆ.ಸಿರಾಜೇಶರವರು ಹಾಗೂ ಅವರ ಗುಂಪಿನವರು ಹಲ್ಲೆ ಮಾಡಿದರೆನ್ನುವ ವದಂತಿ ಇದೆ. ಇದು ಕೂಡಾ ಖಂಡನೀಯವಾದದ್ದು ಹಾಗೂ ತೀರಾ ಅವಮಾನಕಾರಿಯಾದ ಘಟನೆಯಾಗಿದೆ.

ಒಟ್ಟಾರೆಯಾಗಿ ಇತಿಹಾಸವನ್ನೇ ನಿರ್ಮಿಸಬೇಕಾಗಿದ್ದ ಕಾರ್ಯಕ್ರಮದಲ್ಲಿ ತಮ್ಮದೇ ಇತಿಹಾಸ ನಿರ್ಮಿಸಹೊರಟಿರುವುದಕ್ಕೆ ಯಾವುದೇ ರೀತಿಯ ಕ್ಷಮೆಯಿಲ್ಲ. ವೇದಿಕೆಯನ್ನು ಕಾಂಗ್ರೆಸ್ ಪಕ್ಷದ ಸಭೆಯನ್ನಾಗಿ ಮಾಡಿಕೊಂಡು ಆ ಮೂಲಕ ಸ್ಥಳೀಯ ಶಾಸಕರಾದ ಹಾಲಾಡಿ ಶ್ರೀನಿವಾಸ ಶೆಟ್ಟಿಯವರಿಗೆ ಅಗೌರವ ಸೂಚಿಸಲಾಯಿತು.

ಸಿಪಿಐ(ಎಂ)ನ 6 ಸದಸ್ಯರು ಪುರಸಭಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಗೆ ನಿರ್ಧರಿಸಿದ್ದು ನಿರ್ಣಯಕ್ಕೆ 8 ಮಂದಿ ಸದಸ್ಯರ ಸಹಿ ಬೇಕಾಗಿದ್ದುದರಿಂದ ಹಾಗೂ 23 ರಲ್ಲಿ 16 ಸದಸ್ಯರ ಬೆಂಬಲ ಅವಶ್ಯವಿರುವುದರಿಂದ ಅವಿಶ್ವಾಸ ನಿರ್ಣಯ ಮಂಡಿಸಲಾಗಲಿಲ್ಲ.



ಡಿಸೆಂಬರ್ 31ರಂದು ಪುರಸಭೆಯ ಸಾಮಾನ್ಯ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ಕುಂದಾಪುರ ತಾಲೂಕು ಸಮಿತಿಯ ನೇತೃತ್ವದಲ್ಲಿ ಪುರಸಭೆಯ ಸದಸ್ಯರು ಪುರಸಭಾಧ್ಯಕ್ಷರ ರಾಜಿನಾಮೆಗೆ ಒತ್ತಾಯಿಸಿ, ಪ್ರತಿಭಟನೆ ಮಾಡಿ ಪುರಸಭಾ ಕಛೇರಿಯ ಎದುರು ನಡೆದ ಮತ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಪುರಸಭಾಧ್ಯಕ್ಷರು ಸಭೆಗ ಬಾರದೆ ಗೈರುಹಾಜರಾದರು. ಹಾಗೂ ಇತರ ಪುರಸಭಾ ಸದಸ್ಯರು ಕೂಡಾ ಬಂದು ವಾಪಾಸು ಹೋದರು.

ಸಿಪಿಐ(ಎಂ) ಕಛೇರಿಯಿಂದ ಕುಂದಾಪುರ ಶಾಸ್ತ್ರಿ ಸರ್ಕಲಿನವರೆಗೆ ಬೃಹತ್ ಪ್ರತಿಭಟನೆಯ ರ್‍ಯಾಲಿ ನಡೆದು ಸಾರ್ವಜನಿಕ ಸಭೆ ನಡೆಯಿತು.

ಸಾರ್ವಜನಿಕ ಸಭೆಯನ್ನುದ್ದೇಶಿಸಿ ಎಚ್.ನರಸಿಂಹ, ಮಾಜಿ ಪುರಸಭಾ ಅಧ್ಯಕ್ಷ ವಿ.ನರಸಿಂಹ ಇನ್ನೋರ್ವ ಮಾಜಿ ಅಧ್ಯಕ್ಷೆ ಗುಣರತ್ನ ಹಾಗೂ ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್‌ರವರು ಮಾತನಾಡಿ, ಪ್ರತಿಭಾ ಕಾರಂಜಿಯ ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಪುರಸಭಾಧ್ಯಕ್ಷರ ಅಸಭ್ಯ ವರ್ತನೆಯನ್ನು ಖಂಡಿಸಿ ಪುರಸಭಾ ವ್ಯಾಪ್ತಿಯ ಜನರಲ್ಲಿ ಕ್ಷಮೆ ಕೇಳಿ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ನೀಡಬೇಕೆಂದು ಒತ್ತಾಯಿಸಲಾಯಿತು.

ಪುರಸಭೆಯು ಒಟ್ಟು 23 ಸದಸ್ಯರಿದ್ದು, ಸಿಪಿಐ(ಎಂ) 6, ಬಿಜೆಪಿ-6 ಹಾಗೂ ಕಾಂಗ್ರೆಸ್(ಐ) 11 ಸದಸ್ಯರಿದ್ದಾರೆ. ವಿಧಾನ ಪರಿಷತ್ ಸದಸ್ಯರ ಹಾಗೂ ಲೋಕಸಭೆಯ ಸದಸ್ಯರ ಬೆಂಬಲಗಳಿಸಿ ಬಹುಮತ ಲಭಿಸಿದೆ. ಪುರಸಭಾಧ್ಯಕ್ಷರು ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ನೀಡಿ ಬಳಿಕ, ಅವರ ಸದಸ್ಯಸ್ಥಾನಕ್ಕೂ ರಾಜಿನಾಮೆ ಸಲ್ಲಿಸಬಹುದು ಹಾಗೂ ಬಹುಮತ ಹೋಗಿ ಅಧಿಕಾರ ತಪ್ಪಿ ಹೋದೀತು ಎಂಬ ಭಯ ಕಾಂಗ್ರೆಸ್ಸಿಗಿದ್ದು ಭಾರಿ ವಿರೋಧದ ಮಧ್ಯೆ ಹೊಂದಾಣಿಕೆಯ ಮಾತು ಕೇಳಿ ಬರುತ್ತಿದೆ. ಇದು ಕೆಟ್ಟ ಸಂಸ್ಕೃತಿಯು ಕಾಂಗ್ರೆಸ್ಸಿನ ಭವಿಷ್ಯಕ್ಕೆ ಹಾನಿಯಾಗಲಿದೆ ಎಂಬುವುದು ಸ್ಪಷ್ಟ. ಕಾಂಗ್ರೆಸ್ಸಿನ ಸರ್ವಾಧಿಕಾರಿ ಮನೋಭಾವಕ್ಕೆ ಹಾಗೂ ಅಧಿಕಾರ ದಾಹಕ್ಕೆ ಮತದಾರರು ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ.

ಕೆ.ಶಂಕರ್.

ಬಳ್ಕೂರು ಪಂಚಾಯತ್ ಸಿಪಿಐ(ಎಂ) ಬೆಂಬಲಿತ ಅಧ್ಯಕ್ಷ- ಉಪಾಧ್ಯಕ್ಷರ ಆಯ್ಕೆ



ಕಳೆದ ಡಿಸೆಂಬರ್ 18 ರಂದು ಕುಂದಾಪುರ ತಾಲೂಕಿನ ಬಳ್ಕೂರು ಗ್ರಾಮ ಪಂಚಾಯತ್ ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆಯಲ್ಲಿ, ಸಿಪಿಐ(ಎಂ) ಬೆಂಬಲಿತ ಅಭ್ಯರ್ಥಿ ಕುಮಾರಿ ದೇವಿ ಅಧ್ಯಕ್ಷರಾಗಿ ಹಾಗೂ ರಾಜು ಪೂಜಾರಿ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ತಮ್ಮ ಆಡಳಿತಾವಧಿಯಲ್ಲಿ ಉತ್ತಮ ಆಡಳಿತ ನೀಡುವಂತಾಗಲಿ ಎಂದು ಸಿಪಿಐ(ಎಂ) ಆಶಿಸಿದೆ.

ಪುಟ 4 ರಿಂದ

ನಾರಾಯಣ್ ಅವರ ಚಳುವಳಿಯ ಪೂರ್ಣ ಲಾಭ ಪಡೆದರು. ಅನಿವಾಸಿ ಭಾರತೀಯರಿಂದ ಹರಿದುಬರುತ್ತಿರುವ ಕೋಟ್ಯಾಂತರ ಬಳಸಿಕೊಂಡು ಗುಜರಾತ್‌ನಲ್ಲಿ ವ್ಯವಸ್ಥಿತ ಕೋಮು ಗಲಭೆ ಹಚ್ಚಿಸಿದರು ಪ್ರಜಾಪ್ರಭುತ್ವ ನಾಶವಾದರೆ ಎಲ್ಲವೂ ನಾಶವಾದಂತೆ ಎಂದು ಎಚ್ಚರಿಸಿದರು. ಮುಖ್ಯ ಅತಿಥಿಗಳಾಗಿ ವಿಚಾರವಾದಿ ಜ.ಹೊ ನಾ ಲೇಖಕಿ ಭಾನು ಮುಷ್ತಾಕ್, ಎಂ.ಪಿ.ಡೋಂಗ್ರೆ, ಪತ್ರಕರ್ತ ಆರ್.ಪಿ.ವೆಂಕಟೇಶಮೂರ್ತಿ, ಕರ್ನಾಟಕ ರಾಜ್ಯ ಕೊಳಚೆ ನಿರ್ಮೂಲನ ಮಂಡಳಿ ಮಾಜಿ ಅಧ್ಯಕ್ಷ ಹಾಗೂ ದಲಿತ ಮುಖಂಡ ವಿ.ವಿ.ಚಂದ್ರಸಾದ್‌ತ್ಯಾಗಿ, ರಾಜ್ಯ ರೈತ ಸಂಘದ ಕೊಟ್ಟೂರು ಶ್ರೀನಿವಾಸನ್, ಕರ್ನಾಟಕ ಬಿಟ್ಟು ಸಂಘರ್ಷ ಸಮಿತಿ ಅಧ್ಯಕ್ಷ ಮುಖಶೀರ್ ಅಹಮದ್, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಪ್ರೊ. ಹಿ.ಶಿ.ರಾಮಚಂದ್ರೇಗೌಡ ಕಾಫಿ ಬೆಳೆಗಾರ ಬಾಬಿದ್ ಹುಸೇನ್ ಇನ್ನೂ ಹಲವಾರು ಸಾಹಿತಿಗಳು ಪ್ರಜ್ಞಾವಂತರು ಅಲ್ಪಸಂಖ್ಯಾತರು, ಜಾತ್ಯಾತೀತರು ಸಂವಾದದಲ್ಲಿ ಪಾಲ್ಗೊಂಡಿದ್ದರು, ಕೆ.ಎಸ್.ರವಿಕುಮಾರ್‌ರವರ ಪ್ರಸ್ತಾವನೆಯೊಂದಿಗೆ ಸಭೆ ಆರಂಭಗೊಂಡಿತು. ಭಾಗವಹಿಸಿದ್ದ ಪ್ರತಿಯೊಬ್ಬ ಪ್ರಮುಖರು ತಮ್ಮ ಮುಂದಿರುವ ಕೋಮುವಾದಿ ಸವಾಲುಗಳನ್ನು ಎದುರಿಸಲು ಎಲ್ಲರೂ ಒಟ್ಟಿಗೆ ಸೇರುವ ಸಂಕಲ್ಪ ಮಾಡೋಣ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಿ.ವೈ.ಎಫ್.ಐ ಜಿಲ್ಲಾಧ್ಯಕ್ಷ ಧರ್ಮೇಶ್ ವಹಿಸಿದ್ದರು. ಕಾರ್ಯದರ್ಶಿ ರಾಜ್‌ಕುಮಾರ್ ಕಾರ್ಯಕ್ರಮ ನಿರೂಪಿಸಿದರು. ಎಸ್.ಎಫ್.ಐ ಕಾರ್ಯದರ್ಶಿ ನವೀನ್ ಕುಮಾರ್ ಸ್ವಾಗತಿಸಿದರೆ ಡಿ.ವೈ.ಎಫ್.ಐ ಜಿಲ್ಲಾ ಖಜಾಂಚಿ ಗಿರೀಶ್ ವಂದಿಸಿದರು.

ಪೋಸ್ಟರ್ ಚಳುವಳಿ

ರಾಷ್ಟ್ರೀಯ ಸ್ವಯಂ ಸೇವಕ ಸಂಘ ಹಾಸನದಲ್ಲಿ ನಡೆಸಿದ ದಕ್ಷಿಣ ಪ್ರಾಂತೀಯ ಶಿಬಿರದ ಅಂಗವಾಗಿ ನಗರದಲ್ಲಿ ಎಲ್ಲಾ ಕಡೆ ಕೋಮುದ್ವೇಷ ಸಾರುವ ಬ್ಯಾನರ್‌ಗಳನ್ನು ಕಟ್ಟಲಾಗಿತ್ತು. ಮಸೀದಿ ಎದುರು ಭಯೋತ್ಪಾದನೆ ಬಗ್ಗೆ ಚರ್ಚ್ ಎದುರು ಮತಾಂತರದ ಬಗ್ಗೆ ಗೋಮಾಂಸದ ಬಗ್ಗೆ ಇನ್ನೂ ಹಲವಾರು ಪ್ರಚೋದನಾಕಾರಿ ಬ್ಯಾನರ್‌ಗಳನ್ನು ಕಟ್ಟಲಾಗಿತ್ತು. ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ಅವರು ಯಾರನ್ನು ಗುರಿ ಇಟ್ಟುಕೊಂಡಿದ್ದಾರೆ ಎಂದು ನಗರದಾದ್ಯಂತ ಒಂದು ರೀತಿಯ ಅಘೋಷಿತ ಬಿಗುವಿನ ವಾತಾವರಣ ಮನೆ ಮಾಡಿತ್ತು. ಅಲ್ಪಸಂಖ್ಯಾತರಲ್ಲಿ ಭಯ ಮನೆ ಮಾಡಿ ಯಾವ ರೀತಿ ಪ್ರತಿಕ್ರಿಯಿಸಬೇಕೆಂದು ಗೊಂದಲಕ್ಕೀಡಾಗಿದ್ದರು.

ಇಂತಹ ಸಂದರ್ಭದಲ್ಲಿ ಜಿಲ್ಲಾ ಡಿ.ವೈ.ಎಫ.ಐ ಗಾಂಧಿ ಹುತಾತ್ಮ ದಿನಾಚರಣೆಯ ಭಾಗವಾಗಿ ನಗರದಲ್ಲಿ ಕೈಬರಹದ ಸುಮಾರು 30 ವಿಧಧ ಘೋಷಣೆಗಳುಳ್ಳ 400 ಪೋಸ್ಟರ್ಸ್‌ಗಳೂ ನಗರದ ಮೂಲೆ ಮೂಲೆಗಳಲ್ಲಿ ಅಂಟಿಸಲಾಯಿತು. "ಎದೆ ತಟ್ಟಿ ಹೇಳು ನಾಮ ಹಿಂದು" ಇದು ಆರ್‌ಎಸ್.ಎಸ್ ಘೋಷಣೆಯಾದರೆ " ಎದೆ ತಟ್ಟಿ ಹೇಳಿ ನಾನು ಭಾರತೀಯರು" ಮನುಷ್ಯರು ಎಂದು ಡಿವೈಎಫ್‌ಐ ಘೋಷಣೆ ಕೂಗುತ್ತಿತ್ತು. "ಕೋಮುವಾದಿಗಳು ಇರುವ ಊರು ವಿಷ ಸರ್ಪ ಹೊಕ್ಕ ಮನೆಯಂತೆ", "ಕರ್ನಾಟಕವನ್ನು ಗುಜರಾತ್ ಮಾಡಲು ಬಿಡುವುದಿಲ್ಲ" ಹೀಗೆ ಇನ್ನು ಹಲವಾರು ತರಹದ ಬಿತ್ತಿ ಪತ್ರಗಳು ಬ್ಯಾನರ್‌ಗಳು ಸಂಘಪರಿವಾರದ ಕಾರ್ಯಕ್ರಮದ ಮರುದಿನವೇ ನಗರದಲ್ಲಿ ರಾರಾಜಿಸಿದ್ದು ಜನರಲ್ಲಿ ಮೂಡಿದ್ದ ಭಯದ ವಾತಾವರಣ ದೂರಮಾಡಿತು.

ಎಂಟಿವಿ ಮ್ಯಾಕ್ಸಿಮ, ಸುದರ್ಶನ್, ರವಿ ಬೆಳಗೆರೆ ಮತ್ತು ಗೋಡ್ಸೆ

ಇವರೆಲ್ಲರನ್ನು ಯಾಕೆ ಒಟ್ಟಿಗೆ ಹಾಕಿದ್ದೀರಾ? ಇವರಲ್ಲಿ ಏನೂ ಸಾಮಾನ್ಯ ಅಂಶಗಳಿಲ್ಲ ಎಂದಿರಾ? ನಾನೂ ಹಾಗೆ ಅಂದುಕೊಂಡಿದ್ದೆ- ಇತ್ತೀಚೆಗಿನವರೆಗೆ ಗಾಂಧೀಜಿ ಬಗ್ಗೆ ಇವರೆಲ್ಲರೂ ಇತ್ತೀಚೆಗೆ ತಳೆಯುತ್ತಿರುವ ಧೋರಣೆ ಇವರೆಲ್ಲರನ್ನು ಒಟ್ಟಿಗೆ ತಂದಿದೆ. ಅದೂ ಗಾಂಧೀಜಿಯವರ ಪುಣ್ಯತಿಥಿ ಹತ್ತಿರವಾಗುತ್ತಿದ್ದಂತೆ ಇವರೆಲ್ಲರ ಈ ಧೋರಣೆ ಪ್ರಕಟವಾಗುತ್ತಿರುವುದೂ ಇದಕ್ಕೆ ಕಾರಣ. ಇವೆಲ್ಲವೂ ಆಕಸ್ಮಿಕ ಅಲ್ಲ ಎನ್ನುತ್ತದೆ ಈ ಲೇಖನ.

ಶರತ್ ಚಂದ್ರ

ಎಂಟಿವಿ ಎಲ್ಲರಿಗೂ ಗೊತ್ತಿರುವ ಹಾಗೆ ಯುವ ಜನರಿಗೆ ಮತ್ತು ಸಂಗೀತಕ್ಕೆ ಮೀಸಲಾದ ಉಪಗ್ರಹ ಟಿವಿ ಚಾನೆಲ್. ಹಲವು ದೇಶಗಳ ಯುವಜನರಲ್ಲಿ ಜನಪ್ರಿಯವಾಗಿದೆ. ಯುವಜನರ ನಡುವೆ ಆಕರ್ಷಿಸಲು, ಅವರ ಮೇಲೆ ಮೋಡಿ ಮಾಡಲು ಅಗ್ಗದ ಪ್ರಚಾರ ಗಿಟ್ಟಿಸಲು ಹಲವು ಕಸರತ್ತುಗಳನ್ನು ಮಾಡುತ್ತಿರುತ್ತದೆ. ಇತ್ತೀಚಿನ ಇಂತಹ ಕಸರತ್ತು ಗಾಂಧೀಜಿ ಮೇಲೆ ಮಾಡಿದ ಲೇವಡಿ. 'ಕ್ಲೋನ್ ಹೈ ಯುಎಸ್ಎ' ಎಂಬ ವ್ಯಂಗ್ಯ ಟಿವಿ ಧಾರಾವಾಹಿಯ ಒಂದು ಅಧ್ಯಾಯದಲ್ಲಿ ಇದನ್ನು ಮಾಡಲಾಗಿದೆ. 16 ವರ್ಷದ ಹಿಂದೆ ವಿಜ್ಞಾನಿಗಳ ಗುಂಪು ಹಲವು ಪ್ರಸಿದ್ಧ ವ್ಯಕ್ತಿಗಳ ಜೀನ್‌ಗಳನ್ನು ಪಡೆದು, ಅವರ ಅವಳಿಗಳನ್ನು ಸೃಷ್ಟಿಸಿತಂತೆ. ಈ ಅವಳಿಗಳು ಈಗ 16 ವರ್ಷದವರಾಗಿದ್ದು ಈಗ ಒಂದೇ ಹೈಸ್ಕೂಲಿನಲ್ಲಿ (ಕ್ಲೋನ್ ಹೈಸ್ಕೂಲ್ ಯುಎಸ್ಎ) ಇದ್ದಾರೆ. ಇವರಲ್ಲಿ ಗಾಂಧಿ ಅಲ್ಲದೆ ಲಿಂಕನ್ ಕೆನಡಿ, ಬುದ್ಧ, ಕ್ರಿಸ್ತ, ಕ್ಲಿಯೋಪಾತ್ರಾ, ಜ್ಯೂಲಿಯಸ್, ಸೀಸರ್ ಅವರುಗಳು ಇದ್ದಾರೆ. ಪ್ರತಿ ಅಧ್ಯಾಯದಲ್ಲಿ ಈ ಅವಳಿಗಳ ತರಲೆ-ಕೀಟಲೆ ಬಗ್ಗೆ ವಿವರಗಳಿವೆ. ಇದು ಟಿವಿ ಧಾರಾವಾಹಿಯ 'ಕಥೆ' ಗಾಂಧಿ 'ಅವಳಿ'ಯನ್ನು ಇಲ್ಲಿ ಪೆದ್ದು ಹುಡುಗ ಎಂದು ಚಿತ್ರಿಸಲಾಗಿದೆ.

ಮ್ಯಾಕ್ಸಿಮ ಗಾಂಧೀಜಿಯನ್ನು 'ಥಳಿಸಿದ್ದು'

ಮ್ಯಾಕ್ಸಿಮ ಎಂಬುದು ಅಮೇರಿಕನ್ 'ಲೈಫ್‌ಸ್ಟೈಲ್'ಮ್ಯಾಗಝೀನ್, ಇದು ತನ್ನ ಫೆಬ್ರುವರಿ ಸಂಚಿಕೆಯಲ್ಲಿ ಗಾಂಧೀಜಿಯನ್ನು ಮಸಲ್ ಟಿ-ಕಟ್ ಹಾಕಿಕೊಂಡ ಧಾಂಡಿಗ ಬಡಿಯುವ 21 ಕಾರ್ಟೂನುಗಳನ್ನು ಪ್ರಕಟಿಸಿದೆ. ಇದು ಪುರುಷರು 'ಫಿಟ್‌ನೆಸ್'ಗೆ ಮಹತ್ವ ಕೊಡಬೇಕೆಂಬುದನ್ನು ಒತ್ತಿ ಹೇಳಲು ವ್ಯಂಗ್ಯದ ಬಳಕೆ ಅಷ್ಟೆ! ಎಂದು ಪತ್ರಿಕೆ ಹೇಳಿದೆ.


ಗಾಂಧಿಜಿ ಶಾಂತಿಯ ಪ್ರತಿಪಾದಕರಾಗಿದ್ದು, ಅವರನ್ನು ಥಳಿಸುವುದು ಯಾರೂ ಉಳಿಸಲು ಸಾಧ್ಯವಿಲ್ಲ. ಮ್ಯಾಕ್ಸಿಮ ಯಾವಾಗಲೂ ಒಂದು ವಿಲಕ್ಷಣ ವ್ಯಂಗ್ಯ ಬಳಸಿದ ಪತ್ರಿಕೆ. ಗಾಂಧಿಜಿಯನ್ನು ಥಳಿಸುವ ಕಾರ್ಟೂನ್‌ಗಳು ಈ ವಿಲಕ್ಷಣ ವ್ಯಂಗ್ಯದ ಒಂದು ಮಾದರಿ ಅಷ್ಟೆ ಎಂದಿದೆ ಪತ್ರಿಕೆ.

ಗಾಂಧೀಜಿ ವಿಭಜನೆ ಕಾರಣ- ಸುದರ್ಶನ್

ಸುಮಾರು ಇದೇ ಸಮಯಕ್ಕೆ ಆರೆಸ್ಸೆಸ್ 'ಬಿಗ್‌ಬಾಸ್' (ಸರಸಂಘ ಸಂಚಾಲಕ) ಸುದರ್ಶನ್ ಗಾಂಧೀಜಿಯೇ ಭಾರತದ ವಿಭಜನೆಗೆ ಕಾರಣ. ಗಾಂಧೀಜಿ ಖಿಲಾಫತ್ ಚಳುವಳಿಗೆ ಬೆಂಬಲ ನೀಡುವ ಮತ್ತು ಜವಾಹರಲಾಲ್ ನೆಹರೂ ಅವರನ್ನು ಪ್ರಧಾನಿ ಮಾಡಿದ- ಎರಡು ಪ್ರಮಾದಗಳನ್ನು ಎಸಗಿದ್ದಾರೆ. ಅವರ ಗಂಭೀರ ಪರಿಣಾಮಗಳನ್ನು ದೇಶ ಇನ್ನೂ ಎದುರಿಸುತ್ತಿದೆ ಎಂದರು.

ರವಿ ಬೆಳಗೆರೆಯ 'ಹಾಯ್ ಗಾಂಧಿ'

'ಹಾಯ್ ಬೆಂಗಳೂರು' (ಕ್ಯಾ!) ಖ್ಯಾತಿಯ ರವಿ ಬೆಳಗೆರೆ ಇವರೆಲ್ಲರಿಗಿಂತ ಮುಂದೆ ಹೋಗಿದ್ದಾರೆ. ಗಾಂಧಿಯ ಹತ್ಯೆಗೈದ ನಾಥೂರಾಮ್ ಗೋಡ್ಸೆ. 'ಪರಮದೇಶಭಕ್ತ' ಎಂದು ಕರೆದು ಆತನ ಕೃತ್ಯಕ್ಕೆ ಸಮಜಾಯಿಸಿ ಕೊಡುವ (ಅಥವಾ ಸಮರ್ಥಿಸುವ ಎನ್ನಬಹುದೇನೋ) ಒಂದು ಧಾರಾವಾಹಿಯನ್ನೇ ಆರಂಭಿಸಿದ್ದಾರೆ. "ಗಾಂಧೀಜಿಯನ್ನು ಕೊಂದು ನಾಥೂರಾಮ್ ಗೋಡ್ಸೆ ಒಬ್ಬ ಶ್ರದ್ಧಾವಂತ ದೇಶಭಕ್ತ ಎಂಬುದರಲ್ಲಿ ಗಾಂಧೀಜಿಯ ಅನುಯಾಯಿಗಳಿಗೂ ಸೇರಿದಂತೆ ಯಾರಿಗೂ ಅನುಮಾನ, ತಕರಾರು ಯಾವತ್ತಿಗೂ ಇಲ್ಲ. ಆದರೆ ಗಮನಾರ್ಹ ಸಂಗತಿಯೆಂದರೆ, ದೇಶಭಕ್ತಿಗೂ - ಮತಾಂಧತೆಗೂ ಅಂತಹ ಹೇಳಿಕೊಳ್ಳುವಂತಹ ವ್ಯತ್ಯಾಸವಿರುವುದಿಲ್ಲ ಎಂಬುದು! "ಮತಾಂಧತೆ ತುಂಬಿಕೊಂಡ ಮನುಷ್ಯ destructive ಆಗುತ್ತಾನೆ. ದೇಶಭಕ್ತಿ ತುಂಬಿಕೊಂಡ ಮನುಷ್ಯ ಕ್ರಿಯಾಶೀಲನಾಗುತ್ತಾನೆ". ಇಂತಹ ಅಸಂಬದ್ಧ ನುಡಿಮುತ್ತುಗಳು ಈ ಧಾರಾವಾಹಿಯ ತುಂಬಾ ತುಂಬಿಕೊಂಡಿದೆ. ಇದೊಂದು ಸ್ಯಾಂಪಲ್ಲು ಅಷ್ಟೆ. "ಹಿಂದೂ ದೇಶದಲ್ಲಿ ಹಿಂದೂ ಬಾಂಧವರನ್ನು ಮುಸ್ಲಿಮರ ಅತ್ಯಾಚಾರದಿಂದ ಬಿಡುಗಡೆಗೊಳಿಸಬೇಕೆಂದರೆ ನಮಗೆ ಉಳಿದಿರುವುದು ಒಂದೇ ದಾರಿ. ಮಹಾತ್ಮಾ ಗಾಂಧಿಯವರನ್ನು ಈ ಪ್ರಪಂಚದಿಂದ ಬಿಡುಗಡೆಗೊಳಿಸುವುದು" - ಹಾಗಂತ -- ತನ್ನ ಸಂಗಾತಿಗಳಿಂದ ದೂರಿಗೆ ಸಾರಿಯೇಬಿಟ್ಟ ನಾಥೂರಾಮ ವಿನಾಯಕ ಗೋಡ್ಸೆ" - ಇನ್ನೊಂದು ಸ್ಯಾಂಪಲ್ಲು.



ಇನ್ನೂ ನಿಮಗೆ ಗೋಡ್ಸೆಯ ಬಗ್ಗೆ ಗೊತ್ತೇ ಇದೆ. ಈತ ಗಾಂಧೀಜಿ ಹತ್ಯೆ ಎಸಗಿದವ. ಆರೆಸ್ಸೆಸ್ ಸದಸ್ಯನಾಗಿದ್ದ. ಗಾಂಧೀಜಿಯ ಹತ್ಯೆ ಆತ ಒಬ್ಬನೇ ಯೋಜಿಸಿ ಎಸಗಿದ್ದಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆತ ಭಾರತದ ಸ್ವಾತಂತ್ರ್ಯ ಚಳುವಳಿಯ ಮುಖ್ಯ ಧಾರೆಯ ವಿರುದ್ಧವಾಗಿದ್ದ. 'ಹಿಂದುತ್ವ'ದ ಪ್ರತಿನಿಧಿಯಾಗಿದ್ದ. ಆದರೆ ಎಂದೂ ಗಾಂಧೀಜಿಯ ಹತ್ಯೆ ಸಮರ್ಥಿಸಿಕೊಳ್ಳುವ (ಹಿಂದುತ್ವದ ಬೆಂಬಲಿಗರಿಗಾಗಲಿ, ಇತರರಿಗಾಗಲಿ) ಧೈರ್ಯ ಬಂದಿರಲಿಲ್ಲ. ಹತ್ಯೆ ಸಮರ್ಥಿಸಿಕೊಳ್ಳುವುದು ಯಾಕೆ? ಗಾಂಧೀಜಿಗೆ ಲೇವಡಿ ಮಾಡುವುದಾಗಲಿ, ಅವಗಣನೆ ಮಾಡುವುದಾಗಲಿ ಸಾಧ್ಯವಾಗಿರಲಿಲ್ಲ. ದೇಶದೊಳಗೆ ಮಾತ್ರವಲ್ಲ. ಅಂತರಾಷ್ಟ್ರೀಯವಾಗಿಯೂ ಕೂಡ.



ಗೋಡ್ಸೆಯ ವಾರಸುದಾರರು

ಎಂ ಟಿವಿ ಮ್ಯಾಕ್ಸಿಮ, ಆರ್.ಎಸ್.ಎಸ್.ನ ಸುದರ್ಶನ್, ರವಿ ಬೆಳಗೆರೆಯವರೆಲ್ಲಾ ಇದನ್ನು ಆರಂಬಿಸಿದ್ದಾರೆ. ಒಟ್ಟಾಗಿ ಆರಂಭಿಸಿದ್ದಾರೆ. (ಅದೂ ಗಾಂಧಿ ಹುತಾತ್ಮ ದಿನ ಬರುವ ತಿಂಗಳಲ್ಲೇ) ಇವರೆಲ್ಲಾ *ಗಾಂಧೀಜಿ* ***ಪ್ರತಿಪಾದಿಸಿದ ಪ್ರಮುಖ ಧೋರಣೆಗಳ ಮೇಲೆ ದಾಳಿ ಮಾಡುತ್ತಿರುವುದು (ಬೇರೆ ಬೇರೆ ರೀತಿಯಲ್ಲಿ) ಆಕಸ್ಮಿಕವೇನಲ್ಲ. ಕಾಕತಾಳೀಯವೂ ಅಲ್ಲ. ಇವರೆಲ್ಲರೂ ಸೇರಿ ಗಾಂಧೀಜಿ ಪ್ರತಿನಿಧಿಸಿದ ಕೆಲವು ಉದಾತ್ತ ತತ್ವಗಳ ಕೊಲೆ ಮಾಡಹೊರಟಿದ್ದಾರೆ.*** ಗಾಂಧೀಜಿಯ ಹತ್ಯೆ ಮಾಡಿದರೂ, ಗಾಂಧೀಜಿ ಪ್ರತಿನಿಧಿಸಿದ ಮೌಲ್ಯಗಳನ್ನು ನಾಶಮಾಡಲು ಸಾಧ್ಯವಾಗಿರಲಿಲ್ಲ. ಈಗ ಅದನ್ನು ಮಾಡಹೊರಟಿದ್ದಾರೆ. ಗೋಡ್ಸೆಯ ಕೆಲಸವನ್ನು ಮುಂದಕ್ಕೊಯ್ಯುತ್ತಿದ್ದಾರೆ.

ಎಂಟಿವಿ, ಮ್ಯಾಕ್ಸಿಮ ಗಾಂಧೀಜಿಗೆ ಮಾಡಿದ ಅವಹೇಳನದ ವಿರುದ್ಧ ಅಮೇರಿಕದಲ್ಲೂ, ಭಾರತದಲ್ಲೂ, ಪ್ರತಿಭಟನೆ ವ್ಯಕ್ತವಾಯಿತು. ಆದರೆ ಸುದರ್ಶನ್, ರವಿ ಬೆಳಗೆರೆಯವರು ಮಾಡಿದ ಅವಹೇಳನಗಳಿಗೆ ಯಾವುದೇ ಪ್ರತಿಕ್ರಿಯೆ ಕಂಡುಬರಲಿಲ್ಲ. ಅಲ್ಲದೆ ಪ್ರತಿಭಟನೆಗಳ ನಂತರವಾದರೂ ಎಂಟಿವಿ , ಮ್ಯಾಕ್ಸಿಮ್ ಕ್ಷಮಾಯಾಚನೆ ಮಾಡಿದರು. ತಮ್ಮ ಲೇವಡಿ ಅಸಭ್ಯ, ಅಸಂಬದ್ಧವಾಗಿತ್ತು ಎಂದು ಒಪ್ಪಿಕೊಂಡರು. ಆದರೆ 'ಭಾರತ ವರ್ಷದ' ಲ್ಲೆ ಗಾಂಧೀಜಿಯವರನ್ನು ಬಡಿಯುವ ಧಾಂಡಿಗರನ್ನು ಯಾರೂ ತರಾಟೆಗೆ ತೆಗೆದುಕೊಳ್ಳಲಿಲ್ಲ. ಆದ್ದರಿಂದ ಅವರಿಗೆ 'ಸ್ಸಾರಿ' ಹೇಳುವ ಅಗತ್ಯವೂ ಬರಲಿಲ್ಲ. ಬಂಡವಾಳಶಾಹಿ ಜಾಗತೀಕರಣದ 'ಜೀವನಶೈಲಿ'ಯ ತುತ್ತೂರಿಗಳಾದ ಎಂಟಿವಿ, ಮ್ಯಾಕ್ಸಿಮಗಳಿಗೆ ಅವರ 'ಬಕಾಸುರ ಗ್ರಾಹಕ ಸಂಸ್ಕೃತಿ'ಯನ್ನು ವಿಜೃಂಭಿಸಲು ಗಾಂಧೀಜಿಯನ್ನು ಮತ್ತೆ ಮತ್ತೆ ಕೊಲೆ ಮಾಡುವುದು ಅಗತ್ಯ. ಅದೇ ರೀತಿ ಸುದರ್ಶನ್, ರವಿ ಬೆಳಗೆರೆಯವರಿಗೆ 'ಹಿಂದುತ್ವ' ಪ್ರಚಾರ ಮಾಡಲು ಗಾಂಧೀಜಿಯನ್ನು ಮತ್ತೆ ಮತ್ತೆ ಕೊಲೆ ಮಾಡುವುದು ದೇಶದ ಎಲ್ಲಾ ಸಮಸ್ಯೆಗಳಿಗೆ ಗಾಂಧೀಜಿಯನ್ನು ಹೊಣೆಗಾರನನ್ನಾಗಿ ಮಾಡುವ ಅಗತ್ಯ. ಜಾಗತೀಕರಣ ಮತ್ತು ಕೋಮುವಾದ ಅಣ್ಣ-ತಮ್ಮಂದಿರು ಎಂಬುದೂ ಇಲ್ಲ ಸ್ಪಷ್ಟವಾಗಿ ಕಂಡುಬರುತ್ತದೆ. ಗಾಂಧೀಜಿ ಪ್ರತಿನಿಧಿಸಿದ ಸಾಮ್ರಾಜ್ಯಶಾಹಿ ವಿರೋಧಿ, ಸ್ವಾವಲಂಬನ ಜೀವನಶೈಲಿ ಇವರಿಬ್ಬರಿಗೂ ಕಸಿವಿಸಿ ತರುವಂಥದ್ದು. ಇವರ ಈ 'ಗಾಂಧಿಜಿ ಹತ್ಯೆ' ಯ ರಿಪೀಟ್ ಶೋ ತಡೆಯಬೇಕಾದ್ದು, ಆ ಬಗ್ಗೆ ಗದ್ದಲ ಮಾಡಬೇಕಾದ್ದು ಅಗತ್ಯ. ●

9ನೇ ಪುಟದಿಂದ

ಚಿಂತನೆ ಆರ್.ಎಸ್.ಎಸ್. ಮತ್ತು ಜಿನ್ನಾನದೆ ಹೊರತು ಗಾಂಧೀಯದಲ್ಲ ಎಂದರು. ಮುಖ್ಯ ಅತಿಥಿಗಳಾಗಿ ಅಂದೋಲನ ಪತ್ರಿಕೆಯ ಸಂಪಾದಕರಾದ ರಾಜಶೇಖರ ಕೋಟಿಯವರು ಯಾವ ಉದ್ದೇಶ ಗುರಿಯೊಂದಿಗೆ ಸ್ವಾತಂತ್ರ್ಯವನ್ನು ಪಡೆದವೂ ಅದನ್ನು ಮರೆತಿದ್ದರ ಫಲವಾಗಿ ಕೋಮುವಾದ ಬೃಹದಾಕಾರವಾಗಿ ಬೆಳೆದಿದೆ ನಮ್ಮ ದೇಶದ ಸಂವಿಧಾನಕ್ಕೆ ಸವಾಲು ಹಾಕುವ ಮಟ್ಟದಲ್ಲಿರುವ ಕೋಮುವಾದವನ್ನು ಬಗ್ಗು ಬಡಿಯಬೇಕೆಂದು ಯುವಜನತೆಗೆ ಕರೆ ನೀಡಿದರು.

ಡಿ.ವೈ.ಎಫ್.ಐ.ನ ರಾಜ್ಯಾಧ್ಯಕ್ಷ ಕೆ.ಎಸ್.ಉಮೇಶ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ವಿ.ಸಿದ್ದೇಗೌಡ, ಡಿ.ವೈ.ಎಫ್.ಐನ ರಾಜ್ಯ ಸಹಕಾರ್ಯದರ್ಶಿ ಎನ್.ಎಲ್.ಭರತ್‌ರಾಜ್ ಮಾತನಾಡಿದರು ವೇದಿಕೆಯಲ್ಲಿ ಸಿ.ಐ.ಟಿ.ಯು ಮುಖಂಡ ಜಿ.ರಾಮಕೃಷ್ಣ, ಜನವಾದಿ ಮಹಿಳಾ ಸಂಘಟನೆಯ ತಾಲ್ಲೂಕು ಅಧ್ಯಕ್ಷೆ ದೇವಿ, ಸ್ವಾತಂತ್ರ್ಯ ಹೋರಾಟಗಾರ ಲಿಂಗೇಗೌಡರು ಉಪಸ್ಥಿತರಿದ್ದರು ಮಂಡ್ಯದ ವಾರ್ತ ಭವವನದಲ್ಲಿ ಏರ್ಪಡಿಸಿದ್ದ 'ಕೋಮುಸೌಹಾರ್ದತೆಯಲ್ಲಿ ನಾಗರಿಕರ ಪಾತ್ರ' ಎಂಬ ವಿಚಾರಸಂಕಿರ್ಣಕ್ಕೆ ಅಡ್ಡಿಪಡಿಸಿದ ಭಜರಂಗದಳ ಹಾಗೂ ಎ.ಬಿ.ವಿ.ಪಿಯ ಗೂಂಡಾವರ್ತನೆ ಖಂಡಿಸಲಾಯಿತು ಅಲ್ಲದೆ ಜಿಲ್ಲಾ ಆಡಳಿತ ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಿ ಮತ್ತೊಮ್ಮೆ ಇಂತಹ ಗೂಂಡವರ್ತನೆಯನ್ನು ನಡೆಯದ ಹಾಗೆ ತಡೆಗಟ್ಟಬೇಕೆಂದು ಒತ್ತಾಯಿಸಲಾಯಿತು. ಡಿ.ವೈ.ಎಫ್.ಐ ಮುಖಂಡರಾದ ಮಂಜು ಕೊನನಪುರ ಸ್ವಾಗತಿಸಿ, ಟಿ.ಎಂ.ಪ್ರಕಾಶ್ ವಂದಿಸಿದರು. ನಿರೂಪಣೆಯನ್ನು ಜೆ.ಎಂ.ಎಸ್‌ನ ತಾಲೂಕು ಕಾರ್ಯದರ್ಶಿ ಮಹದೇವಮ್ಮ ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಡಿ.ವೈ.ಎಫ್.ಐನ ತಾಲೂಕು ಕಾರ್ಯದರ್ಶಿ ಆರ್.ಕೃಷ್ಣ ವಹಿಸಿದ್ದರು.

ತುಮಕೂರಿನಲ್ಲಿ 'ಪ್ರೀತಿ ಹಂಚಿದವರು

ತುಮಕೂರು ನಗರದಲ್ಲಿಯೂ ಜನವರಿ 30ನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು. ಅಂದು ಎಸ್.ಎಫ್.ಐ, ಡಿವೈ.ಎಫ್.ಐ, ಬಿ.ಜಿ.ವಿ.ಎಸ್, ಎ.ಐ.ಟಿ.ಯು.ಸಿ, ಸಿ.ಐ.ಟಿ.ಯು, ಸಮತಾ ಮುಂತಾದ ಸಂಘಟನೆಯ ಕಾರ್ಯಕರ್ತರು, 'ಪ್ರೀತಿ ಹಂಚೋಣ ಬನ್ನಿ' ಎಂಬ ಅತ್ಯಂತ ಆಕರ್ಷಿತವಾದ, ಮನ ಮಿಡಿದ ಸಂದೇಶದ ಕರಪತ್ರ ಹಿಡಿದು ಜನತೆಯನ್ನು ತಲುಪಿದರು. ಸುಮಾರು 5000 ಕರಪತ್ರಗಳನ್ನು ಬೀದಿಗಳಲ್ಲಿ ಮನೆ ಮನೆಗೆ, ಹಾಗೂ ವಿಶೇಷವಾಗಿ ರೈಲು ಪ್ರಯಾಣಿಕರಿಗೆ ಹಂಚಿದರು. ●

ಕಪ್ಪು ಖಂಡದಲ್ಲಿ ಕ್ರಿಕೆಟ್‌ನ 8ನೇ ವಿಶ್ವಕಪ್

ಆರ್. ಡಿ. ಮಲ್ಕಿಯೋರ್

ಇದೀಗ 8ನೇ ವಿಶ್ವಕಪ್ ಸಮರ ಕಪ್ಪು ಖಂಡದ ದಕ್ಷಿಣ ಆಫ್ರಿಕಾದ ಆತಿಥ್ಯದಲ್ಲಿ ಫೆಬ್ರವರಿ 9ರಿಂದ ಆರಂಭಗೊಂಡಿದೆ. ದಕ್ಷಿಣ ಆಫ್ರಿಕಾದ ಜೊತೆ ಜಿಂಬಾಬ್ವೆ ಹಾಗೂ ಕಿನ್ಯಾ ದೇಶಗಳು ಆರಂಭ ಸುತ್ತಿನ ಪಂದ್ಯಗಳಿಗೆ ಆತಿಥ್ಯವಹಿಸಿರುವುದು ಇದೀಗ ಹುಟ್ಟು ಆಳರಸರಾದ ಇಂಗ್ಲೆಂಡ್ ಜೊತೆಗೆ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ದೇಶಗಳು ವಿವಾದಕ್ಕೆ ಈಡು ಮಾಡಿದೆ. ಬ್ರಿಟೀಷ್ ಸಾಮ್ರಾಜ್ಯಶಾಹಿಗಳಿಂದ ಆರಂಭವಾಗಿ ಯುರೋಪಿನ ವಸಹಾತುಶಾಹಿ ರಾಷ್ಟ್ರಗಳು ಶತಮಾನಗಳಿಂದ ಕರಿಯರನ್ನು ಹಿಂಡಿ ಹಿಪ್ಪೆ ಮಾಡಿದ ಹಾಗೂ ಇಡೀ ಕಪ್ಪು ಖಂಡವನ್ನು ಕೊಳ್ಳೆ ಹೊಡೆದ ಆಫ್ರಿಕಾ ಖಂಡದಲ್ಲಿ ಬ್ರಿಟೀಷರು ಹುಟ್ಟು ಹಾಕಿದ ಕ್ರಿಕೆಟ್‌ನ ವಿಶ್ವಕಪ್ ಪಂದ್ಯಗಳು ನಡೆಯುತ್ತಿರುವುದು ಒಂದು ವಿಪರ್ಯಾಸ.

ಕ್ರಿಕೆಟ್ ಎಂದಿಗೂ ವಿಶ್ವದ ಜನಪ್ರಿಯ ಆಟವಲ್ಲ. (ಭಾರತ ಸೇರಿದಂತೆ ಕೆಲವೇ ರಾಷ್ಟ್ರ ಹೊರತು ಪಡಿಸಿ) ಈ ಕ್ರಿಕೆಟ್ ಬ್ರಿಟೀಷರ ಆಟ. ಕ್ರಿಕೆಟ್ ಆಡುವ ದೇಶಗಳು ಯಾವತ್ತಿಗೂ ಇತರೆ ಕ್ರೀಡೆಗಳಲ್ಲಿ ಹಿಂದೆ ಉಳಿದಿವೆ. ತಾವು ಆಳಿದ ದೇಶಗಳಿಗೆ ಬ್ರಿಟೀಷರು ಕ್ರಿಕೆಟ್ ಬಳುವಳಿಯಾಗಿ ನೀಡಿದ್ದರೂ ವಿಚಿತ್ರವೆಂದರೆ ಬ್ರಿಟನ್‌ನ ರಾಷ್ಟ್ರೀಯ ಕ್ರೀಡೆ ಪುಟ್ಬಾಲ್. ಅದು ಆ ರಾಷ್ಟ್ರದ ಜನಪ್ರೀಯ ಕ್ರೀಡೆ ಕೂಡ. ಬುದ್ಧಿವಂತ ಬ್ರಿಟನ್ನರು ತಮಗೆ ಬೇಡವಾದದನ್ನು ಇತರರಿಗೆ ಬಳುವಳಿಯಾಗಿ ನೀಡುವ ಸದಾ ಅನುಸರಿಸುತ್ತಾರೆ ಎಂಬ ಮಾತಿದೆ. ಯಾವುದೇ ಕ್ರೀಡೆ ಜನಪ್ರಿಯ ವಾಗಬೇಕಾದರೆ ಆ ಕ್ರೀಡೆ ಅಂತರರಾಷ್ಟ್ರೀಯ ಒಲಂಪಿಕ್ಸ್ ಸಮಿತಿ ಅಂಗೀಕರಿಸಿ ಕ್ರೀಡೆ ಆಗಿರಬೇಕು ಹಾಗೂ ಇದಕ್ಕಾಗಿ ಈ ಕ್ರೀಡೆ ಕನಿಷ್ಠ 20 ರಾಷ್ಟ್ರಗಳಲ್ಲಾದರೂ ಜನಪ್ರಿಯವಾಗಿರಬೇಕು. ಒಂದು ಶತಮಾನದಿಂದ ಕ್ರಿಕೆಟ್‌ಗೆ ಈ ಮಾನದಂಡ ದೊರೆತಿಲ್ಲ. ಅಧಿಕೃತ ಕ್ರಿಕೆಟ್ ಆಡುವ ರಾಷ್ಟ್ರಗಳು ಕೇವಲ 9. ಕ್ರಿಕೆಟ್‌ಗೆ ಒಂದು ನಿಶ್ಚಿತ ಸ್ವರೂಪವಿಲ್ಲ. 5 ದಿನದ ಟೆಸ್ಟ್, 4 ದಿನದ ನಮ್ಮ ದೇಶದ ರಣಜಿ ಪಂದ್ಯಾವಳಿ, ಇದೀಗ ಒಂದು ದಿನದ ಕ್ರಿಕೆಟ್ ಹೀಗೆ ವಿವಿಧ ನಿಶ್ಚಿತವಲ್ಲದ ಸ್ವರೂಪಗಳಲ್ಲಿ ಈ ಆಟ ನಡೆಯುತ್ತಿದೆ. ಅದರಲ್ಲೂ ಕೇವಲ ಆಂಗ್ಲರು ಆಳಿದ ರಾಷ್ಟ್ರಗಳು ಮಾತ್ರ ಕ್ರಿಕೆಟ್ ಆಡುತ್ತವೆ! ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ ಯಾವುದೇ ಸಮಾಜವಾದಿ ರಾಷ್ಟ್ರಗಳಲ್ಲಿ ಕ್ರಿಕೆಟ್ ಇಲ್ಲ. ಆದರೆ ಸಮಾಜವಾದಿ ರಾಷ್ಟ್ರಗಳು ಇತರೆ ಕ್ರೀಡೆಗಳಲ್ಲಿ ದೈತ್ಯರು.



8ನೇ ವಿಶ್ವಕಪ್ ಕ್ರಿಕೆಟ್ ಆರಂಭಕ್ಕೆ ಮೊದಲೇ ವಿವಾದಗಳು ಹುಟ್ಟಿಕೊಂಡವು. ಆಟಗಾರರು ಪ್ರಾಯೋಜಕರಿಂದ ಬರುವ ಹಣದಲ್ಲಿ ತಮಗೆ ಬರಬೇಕಾದ ಪಾಲಿನ ಬಗ್ಗೆ ವಿವಾದವೆತ್ತಿ ಕೋರ್ಟ್ ಮೆಟ್ಟಲು ಕೂಡ ಹತ್ತಿದರು. ಎಲೆಕ್ಟ್ರಾನಿಕ್ ಗೃಹ ಬಳಕೆ ಉತ್ಪನ್ನಗಳ ದೈತ್ಯರಾದ 'ಎಲ್‌ಜಿ' ಕಂಪನಿಯವರು 8ನೇ ವಿಶ್ವಕಪ್ ಕ್ರಿಕೆಟ್‌ನ ಮುಖ್ಯ ಪ್ರಾಯೋಜಕರು. ದಕ್ಷಿಣ ಆಫ್ರಿಕಾ ಜೊತೆಗೆ ಜಿಂಬಾಬ್ವೆ ಹಾಗೂ ಕೆನ್ಯಾ ದೇಶಗಳು 8ನೇ ವಿಶ್ವಕಪ್ ಕ್ರಿಕೆಟ್‌ನ ಆರಂಭಿಕ ಪಂದ್ಯಗಳ ಆಥಿತೀಯ ರಾಷ್ಟ್ರಗಳು. ಜಿಂಬಾಬ್ವೆಯಲ್ಲಿ ಭದ್ರತಾ ಪ್ರಶ್ನೆಯನ್ನು ಮುಂದಿಟ್ಟು ತಾನು ಪಂದ್ಯ ಆಡುವುದಿಲ್ಲವೆಂದು ಇಂಗ್ಲೆಂಡ್ ತಕರಾರು ಆರಂಭಿಸಿತು. ಇದೇ ಕಾರಣಕ್ಕಾಗಿ ತಾನು ಕೀನ್ಯಾದಲ್ಲಿ ಆಡಲು ಸಿದ್ಧವಿಲ್ಲವೆಂದು ನ್ಯೂಜಿಲೆಂಡ್ ಪಟ್ಟು ಹಿಡಿದಿದೆ. ಜಿಂಬಾಬ್ವೆ, ಕೀನ್ಯಾ ಬ್ರಿಟೀಷರ ವಸಾಹತುಗಳಾಗಿದ್ದವು. ಭದ್ರತೆ ಕಾರಣ ಕೇವಲ ನೆಪ ಮಾತ್ರ.

ವಿವಾದದ ಸುಳಿಯಲ್ಲಿ.

8ನೇ ವಿಶ್ವಕಪ್ ಸ್ಪರ್ಧೆ ಆರಂಭವಾಗುವ ಮೊದಲೇ ವಿವಾದಗಳು ರೂಪತಾಳಿವೆ. ಪಂದ್ಯನಡೆಯಬೇಕಾದ ಸ್ಥಳದಿಂದ ಪ್ರಾಯೋಜಕತ್ವ ಮತ್ತಿತರ ವಿಷಯಗಳವರೆಗೆ ಸಾಕಷ್ಟು ಗೊಂದಲಗಳು ಎದ್ದಿವೆ. ಜಿಂಬಾಬ್ವೆಯಲ್ಲಿ ಅಲ್ಲಿನ ಮೂಲ ನಿವಾಸಿಗಳು ಬಿಳಿಯ ಭೂಮಾಲಿಕರ ಶೋಷಣೆ ವಿರುದ್ಧ ಸಾರಿರುವ ಸಂಘರ್ಷ ಮತ್ತು ಅಲ್ಲಿನ ಸರ್ಕಾರ ಭೂ ಮಾಲೀಕರ ಪರ ಕೈಜೋಡಿಸದಿರುವುದೇ ಇಂಗ್ಲೇಡ್ ನ್ಯೂಜಿಲೆಂಡ್ ಹಾಗೂ ಆಸ್ಟ್ರೇಲಿಯ ತಂಡಗಳಿಗೆ ಅದಕ್ಕಿಂತ ಅಲ್ಲಿನ ಸರ್ಕಾರಗಳಿಗೆ ನುಂಗಲಾರದ ತುತ್ತಾಗಿದೆ. ಆದ್ದರಿಂದ ಭದ್ರತೆಯ ಕುಂಟು ನೆಪವೊಡ್ಡಿ ಜಿಂಬಾಬ್ವೆ ಮತ್ತು ಕೀನ್ಯಾಗಳಲ್ಲಿ ಪಂದ್ಯ ಆಡದಿರುವಂತೆ ತನ್ನ ತಂಡಗಳಿಗೆ ಆಗ್ರಹಿಸುತ್ತಿದೆ ಅಂತರ ರಾಷ್ಟ್ರೀಯ ಕ್ರಿಕೆಟ್ ಸಂಸ್ಥೆ ಮೇಲೂ ಒತ್ತಡ ಹೇರಿವೆ. ಆದರೆ ಇಂಗ್ಲೆಂಡ್ ಕ್ರಿಕೆಟ್ ಮಂಡಳಿ ಈ ಒತ್ತಡ ಲೆಕ್ಕಿಸದೆ ಪೂರ್ವ ನಿಗದಿಯಂತೆ ಪಂದ್ಯಗಳನ್ನಾಡಲು ತನ್ನ ತಂಡಕ್ಕೆ ಆದೇಶ ನೀಡಿದೆ. ಇದು ತನಗೆ ಐಸಿಸಿಯಿಂದ ಬರಬೇಕಾದ ಪಾಲಿನಲ್ಲಿ ಕಡಿತ ಉಂಟಾಗಬಹುದೆಂಬ ಭೀತಿಯೇ ಕಾರಣವಿರಬಹುದು. ಆದರೆ ಆಸ್ಟ್ರೇಲಿಯ ಸರ್ಕಾರ ಅಲ್ಲಿನ ಕ್ರಿಕೆಟ್ ಮಂಡಳಿಗೆ ಆಗುವ ನಷ್ಟ ತುಂಬಿಕೊಡುವ ಆಶ್ವಾಸನೆ ಸಹ ನೀಡಿದೆ. ಆಸ್ಟ್ರೇಲಿಯಾ ಮತ್ತು ಇಂಗ್ಲೇಂಡಿನ ಈ ಒತ್ತಡ ತನ್ನ ಶೋಷಣೆ ಪರ ನೀತಿಯನ್ನು ಮತ್ತಷ್ಟು ಗಟ್ಟಿಗೊಳಿಸಿದೆ.

ತಾತ್ಕಾಲಿಕ ಉಪಶಮನ.

8 ವಿಶ್ವಕಪ್ ಮೇಲೆ ದಟ್ಟ ಪರಿಣಾಮ ಬೀರಬಹುದಾಗಿದ್ದ ವಿವಾದವೊಂದು ತಾತ್ಕಾಲಿಕ ಉಪಶಮನ ಕಂಡಿದೆ. ಪ್ರಾಯೋಜಕತ್ವಗುತ್ತಿಗೆ ಸಂಬಂಧ ಭಾರತೀಯ ಕ್ರಿಕೆಟ್ ಆಟಗಾರರು ಮತ್ತು ಐ.ಸಿ.ಸಿ. ನಡುವೆ ಉದ್ಭವಿಸಿದ ವಿವಾದ ಪರಕಾಷ್ಠೆ ತಲುಪುವ ಹಂತದಲ್ಲಿ ಶಮನಗೊಂಡಿದೆ. ಇದಕ್ಕೆ ಭಾರತೀಯ ನ್ಯಾಯಾಲಯದ ತೀರ್ಪು ಕೊಡುಗೆ ನೀಡಿದೆ. ದಿಲ್ಲಿ ಹೈಕೋರ್ಟ್ ಇದಕ್ಕೆ ಸಂಬಂಧಿಸಿ ತೀರ್ಪೊಂದನ್ನು ನೀಡಿ ಭಾರತೀಯ ಆಟಗಾರರಿಗೆ ತೊಂದರೆಯುಂಟಾದರೆ ಪಂದ್ಯಾವಳಿಗೆ ಇಲ್ಲಿಂದ ಹೋಗುವ ವಿದೇಶಿ ವಿನಿಮಯಕ್ಕೆ ಅವಕಾಶ ನೀಡದಂತೆ ಸರ್ಕಾರಕ್ಕೆ ಆದೇಶ ನೀಡಿತು. ಇದರಿಂದ ಐ.ಸಿ.ಸಿ. ತನ್ನ ನಿಲುವನ್ನು ಸಡಿಲಗೊಳಿಸಿದೆ. ಪಂದ್ಯಾವಳಿ ಮುಗಿದ ಮೇಲೆ ಹಣಕಾಸಿನ ಲೆಕ್ಕಚಾರ ಬಗೆಹರಿಸಿಕೊಳ್ಳಲು ಐಸಿ.ಸಿ. ಮತ್ತು ಬಿಸಿಸಿ ಪರಸ್ಪರ ಒಪ್ಪಂದಕ್ಕೆ ಬಂದು ಸದ್ಯಕ್ಕೆ ಎದುರಿಗಿದ್ದ ದೊಡ್ಡ ಬಂಡೆ ಸ್ವಲ್ಪ ಪಕ್ಕಕ್ಕೆ ಸಂದಿದಾಗಿದೆ. ಮತ್ತು ಈ ಬಿಕ್ಕಟ್ಟು ದೊಡ್ಡದಾಗಬಹುದು.

ಬಾಜಿ ವ್ಯಾವಹಾರ.

ಕಳೆದ ದಶಕದಿಂದ ಕ್ರಿಕೆಟ್‌ಗೆ ಸಾಕಷ್ಟು ಕಳಂಕ ತಂದಿರುವುದು ಬಾಜಿ ವ್ಯವಹಾರ. ಈ ವಿಶ್ವಕಪ್ ಮೇಲೆ ಅದು ಎಷ್ಟರ ಪರಿಣಾಮ ಬೀರಬಹುದೆಂಬುದು ಇನ್ನು ನಿಗೂಢವಾಗಿದೆ. ಆದರೆ. ಬಾಜಿ ನಿರ್ಮೂಲನೆ ಮಾಡುವುದಾಗಿ ಅಂತರ ರಾಷ್ಟ್ರೀಯ ಕ್ರಿಕೆಟ್ ಸಮಿತಿ ಆಟಗಾರರ ಮೇಲೆ ತೀವ್ರ ನಿಗಾ ಇರಿಸಲಾಗಿದೆ ಎಂದು ಘೋಷಿಸಿದೆ. ಬಾಜಿಗಾರರ ಜೊತೆ ಸಂಬಂಧ ಇಟ್ಟುಕೊಳ್ಳುವ ಆಟಗಾರರನ್ನು ಜೀವನ ಪರ್ಯಾಂತ ನಿಷೇದಿಸುವ ಬೆದರಿಕೆಯನ್ನು ಹಾಕಿದೆ. ಇದು ಎಷ್ಟರ ಮಟ್ಟಿಗೆ ಪರಿಣಾಮ ಬೀರಿತು ಎಂಬುದನ್ನು ಕಾಲವೇ ನಿರ್ಣಯಿಸಲಿದೆ. ಈ ಬಾರಿಯ ವಿಶ್ವಕಪ್‌ನಲ್ಲಿ ಐಸಿ.ಸಿ. ಮತ್ತೊಂದು ಪ್ರಯೋಗಕ್ಕೆ ಮುಂತಾಗಿದ್ದು ವಿಶ್ವಕಪ್‌ನಲ್ಲಿ ಭಾಗವಹಿಸುವ ಎಲ್ಲಾ ತಂಡಗಳ ಆಟಗಾರರನ್ನು ಮಾರಕವನ್ನು ಪತ್ತೆ ಪರಿಕ್ಷೆಗೆ ಕಡ್ಡಾಯವಾಗಿ ಒಳಪಡಿಸಿದೆ.

ಆಫ್ರಿಕಾದ ಬಗ್ಗೆ ಒಂದು ಕಿರುನೋಟ

ಆಫ್ರಿಕಾ ಖಂಡದ ಚರಿತ್ರೆ ಬಗ್ಗೆ ಹಾಗೂ ಈ ಖಂಡದ ಮೇಲೆ ಅಮೇರಿಕಾ ಹಾಗೂ ಯುರೋಪಿನ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಹಿಡಿತದ ಬಗ್ಗೆ ಒಂದು ಹಿನ್ನೋಟ ಹರಿಸುವುದು ಈ ಸಂದರ್ಭದಲ್ಲಿ ಸೂಕ್ತ.

ಆಫ್ರಿಕಾ ಖಂಡವನ್ನು ಸಂಶೋಧಕರು, ಇತಿಹಾಸಕಾರರು ಮನುಕುಲದ ತೊಟ್ಟಿಲು ಎಂದು ಕರೆದಿದ್ದಾರೆ. ಮನುಷ್ಯನ ಪೂರ್ವಜರ ಮೊದಲಿಗರು ಆಫ್ರಿಕಾದವರು ಎಂದು ಖ್ಯಾತ ಪುರಾತತಜ್ಞರು ಅಭಿಪ್ರಾಯ ಪಟ್ಟಿರುತ್ತಾರೆ. ಅನಾಗರೀಕ ಜನರ ಖಂಡ ಎಂದು ಬಿಳಿಯರು ಅಪಹಾಸ್ಯ ಮಾಡುವ ಆಫ್ರಿಕಾ ಖಂಡದಲ್ಲಿ ಈಜಿಪ್ಟ್ ನಾಗರೀಕತೆ ಅರಳಿತ್ತು. ಕೃಷಿಯಿಂದ ಹಿಡಿದು ವಿಶ್ವದ ಅಚ್ಚರಿಗಳಲ್ಲಿ ಒಂದಾದ ಪಿರಿಮಿಡ್‌ಗಳ ರಚನೆವರೆಗೆ ಈ ನಾಗರೀಕತೆ ಹೆಸರು ಪಡೆಯಿತು. ಈ ಖಂಡದ ಮುಗ್ಧ ಜನತೆಯನ್ನು ಅಮಾನವೀಯವಾಗಿ ಶೋಷಿಸಲು ವಸಹಾತುಶಾಹಿ ರಾಷ್ಟ್ರಗಳು ಆಫ್ರಿಕಾದ ಜನತೆ ಅನಾಗರೀಕರು ಎಂದು ಪಟ್ಟಕಟ್ಟಿದರು. ಆಫ್ರಿಕಾ ಖಂಡ ಎಲ್ಲಾ ರೀತಿಯಲ್ಲೂ ಫಲವತ್ತಾದ ಖಂಡ. ಕೃಷಿಗೆ ಉತ್ತಮ ಮಣ್ಣು ಸಾವಿರಾರು ವರ್ಷಗಳ ಆಯಸ್ಸು ಹೊಂದಿದ ಬೃಹತ್ ವೃಕ್ಷಗಳ ಕಾಡುಗಳು, ಖನಿಜ ಸಂಪತ್ತು ವನ್ಯಜೀವಿ ಸಂಪತ್ತು ಎಲ್ಲವೂ ಹೇರಳ. ವಿಶ್ವದ ವಜ್ರಗಣಿಗಳ ಶೇಕಡ ತೊಂಭತ್ತು ಪಾಲು, ಬಂಗಾರದ ಶೇಕಡಾ 50 ಪಾಲು ಆಫ್ರಿಕಾ ಖಂಡದಲ್ಲಿದ್ದಾವೆ. ದುಡಿಮೆಗೆ ಗಿರಿಕಣಿವೆಗಳಲ್ಲಿ ಸಂತುಷ್ಟರಾಗಿ ಬದುಕುತ್ತಿದ್ದ ದೃಡಕಾಯ ಕಪ್ಪು ಜನರು. ಇದೇ ಸಾಮ್ರಾಜ್ಯಶಾಹಿಗಳಿಗೆ ಮೃಷ್ಟಾನ್ನ ಬೋಜನವಾಯಿತು. ಬೇಟೆಗೆ ಬಂದ ಬಿಳಿಯರ ಕಣ್ಣಿಗೆ ವಜ್ರ, ಬಂಗಾರ ಕಂಡಿತು. ಬೃಹತ್ ವೃಕ್ಷಗಳ ಸಂಪತ್ತು, ಪ್ರಾಣಿ ಸಂಪತ್ತು ಮುಗ್ಧ ಜನರು ಎಲ್ಲವನ್ನೂ ವ್ಯಾಪಾರಕ್ಕೆ ಉಪಯೋಗಿಸಿ ಹಣಗಳಿಸಿದರು. ಹಡಗುಗಳಲ್ಲಿ ಕೇವಲ ಬಂದೂಕು, ಸರಪಣಿ ಮಾತ್ರ ಹಿಡಿದು ಹಣವಿಲ್ಲದೆ ಬಂದ ವರ್ತಕರು ಕಪ್ಪು ಖಂಡದ ದೃಡಕಾಯ ನೀಗ್ರೋಗಳನ್ನು ಪ್ರಾಣಿಗಳಿಗಿಂತ ಕೇವಲವಾಗಿ ಬಂಧಿಸಿ ಅಮೇರಿಕಾ ಯೂರೋಪ್ ಖಂಡಗಳಿಗೊಯ್ದು ಮಾರಾಟ ಮಾಡಿ ಶ್ರೀಮಂತರಾದರು. ಈ ನೀಗ್ರೋಗಳು ಯೂರೋಪ್, ಅಮೇರಿಕಾದ ಭೂ ಮಾಲೀಕರ ಹೊಲಗಳಲ್ಲಿ ಗುಲಾಮರಾಗಿ ಹಲವಾರು ಶತಮಾನಗಳ ಕಾಲ ದುಡಿದು ಸಂಪತ್ತನ್ನು ಹುಟ್ಟು ಹಾಕಿದರು. ಈ ಸಂಪತ್ತಿನಿಂದ ಇನ್ನೂ ಹೆಚ್ಚು ಪ್ರಭಾವಶಾಲಿಗಳಾಗಿ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಇಡೀ ಆಫ್ರಿಕಾ ಖಂಡವನ್ನೇ ತಮ್ಮ ವಸಾಹತನ್ನಾಗಿ ಮಾಡಿಕೊಂಡರು. ಆಫ್ರಿಕಾದ ಒಂದು ಹೇಳಿಕೆ ಈ ರೀತಿ ಇದೆ. "ಬಿಳಿಯರು ಆಫ್ರಿಕಾ ಖಂಡಕ್ಕೆ ಬರುವಾಗ ಅವರ ಕೈಯಲ್ಲಿ ಬೈಬಲ್ ಇತ್ತು. ಆಫ್ರಿಕಾದ ಜನತೆ ಕೈಯಲ್ಲಿ ಭೂಮಿ, ಸಂಪತ್ತು ಇತ್ತು. ಇದೀಗ ಆಫ್ರಿಕಾದ ಜನತೆ ಕೈಯಲ್ಲಿ ಬೈಬಲ್ ಇದೆ ಹಾಗೂ ಭೂಮಿ, ಸಂಪತ್ತು ಬಿಳಿಯರ ಕೈಯಲ್ಲಿದೆ" ವ್ಯಾಪರಕ್ಕಾಗಿ ಆಫ್ರಿಕಾ ಖಂಡ ಬಳಸಿ ಹೋಗುತ್ತಿದ ಹಡಗುಗಳು ಆಹಾರ, ನೀರು ಸಂಗ್ರಹಣೆಗೆ ಆಫ್ರಿಕಾದಲ್ಲಿ ತಂಗುತ್ತಿದ್ದರು. ಈ ತಂಗುವಿಕೆಯಿಂದಾಗಿ 1652 ರಲ್ಲಿ ಬೇರು ಬಿಟ್ಟ (ಕೇವಲ 9 ಮಂದಿ) ಬ್ರಿಟೀಷರು ಮುಂದೆ ಹುಟ್ಟುಹಾಕಿದ ರಾಷ್ಟವೇ ಇಂದಿನ ದಕ್ಷಿಣ ಆಫ್ರಿಕಾ. ಇದಲ್ಲದೆ, ಆಂಗ್ಲರು, ಪೋರ್ಚುಗೀಸರು, ಫ್ರೆಂಚರು, ಸ್ಪೇನ್, ಡಚ್ಚರು, ಬೆಲ್ಜಿಯಂ, ಇಟಲಿ ಎಲ್ಲರೂ ಕಪ್ಪು ಖಂಡ ಮೇಲೆ ಶತಮಾನಗಳ ಕಾಲ ಪ್ರಭುತ್ವ ಸಾಧಿಸಿದರು. ಮೂರು ಶತಮಾನಗಳಲ್ಲಿ ಆಫ್ರಿಕಾ ಖಂಡದಿಂದ ಗುಲಾಮರಾಗಿ ಮಾರಾಟವಾದ ನೀಗ್ರೋಗಳ ಸಂಖ್ಯೆ ಒಂದು ಕೋಟಿ. ಈ ಬಗ್ಗೆ ಚಕಾರವೆತ್ತಲು ಇಂಗ್ಲೆಂಡ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ಗಳು ತಯಾರಿಲ್ಲ. ಮೊದಲ ವಿಶ್ವ ಯುದ್ಧದಲ್ಲಿ ಐರೋಪ್ಯ ರಾಷ್ಟ್ರಗಳ ಪರವಾಗಿ ಯುದ್ಧ ಮಾಡಿಮಡಿದ ಸೈನಿಕರಲ್ಲಿ ಲಕ್ಷಾಂತರ ಮಂದಿ ನಿಗ್ರೋಗಳೇ.

ಜಗತ್ತಿನ ಮೊದಲ ಶೋಷಣೆರಹಿತ ಸಮಾಜ ಸ್ಥಾಪನೆ 1917 ರಲ್ಲಿ ರಷ್ಯಾದಲ್ಲಿ ನಡೆದ ನಂತರ ಆಫ್ರಿಕಾ ಖಂಡದಾದ್ಯಂತ ವಸಾಹತುಶಾಹಿ ಸಾಮ್ರಾಜ್ಯವಾದಿ ರಾಷ್ಟ್ರಗಳ ವಿರುದ್ಧ ವಿಮೋಚನಾ ಹೋರಾಟ ಆರಂಭವಾಗಿ ಸರದಿಯ ಸಾಲಿನಂತೆ ಕಳೆದ ಶತಮಾನದ ಮಧ್ಯಭಾಗದಿಂದ ಅಂತ್ಯದವರೆಗೆ ಎಲ್ಲಾ ಆಫ್ರಿಕಾ ಖಂಡದ ರಾಷ್ಟ್ರಗಳು ಸ್ವತಂತ್ರವಾದವು. ಲಿಬಿಯಾ, ಈಜಿಪ್ಟ್, ಅಲ್ಜಿರಿಯಾ, ಟ್ಯೂನಿಸಿಯಾ, ಮೊರಾಕ್ಕೊ, ಘಾನ, ನೈಜಿರಿಯಾ, ಸುಡಾನ್ ಸಿಯಾರ್, ಲಿಯೋನ್, ಮಡಗಾಸ್ಕರ್, ಟಾನ್ ಜಾನಿಯ, ಕೀನ್ಯ, ಜಾಂಬಿಯ, ಮೊಜಾಂಬಿಕ್, ಅಂಗೋಲಾ, ಜಿಂಬಾಬ್ವೆ, ನಮೀಬಿಯಾ, ದಕ್ಷಿಣ ಆಫ್ರಿಕಾ (80 ರ ದಶಕದಲ್ಲಿ) ಸ್ವತಂತ್ರಗೊಂಡವು. ಆದರೆ ಕಪ್ಪು ಖಂಡದ ಆರ್ಥಿಕ ಸ್ವಾತಂತ್ರ್ಯ ಬಿಳಿಯರ ಕೈಯಲ್ಲಿ, ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉಳಿಯಿತು. ದಕ್ಷಿಣ ಆಫ್ರಿಕಾದ ವಜ್ರಗಳ ಬಂಗಾರದ ಗಣಿಗಳಲ್ಲಿ ಶತಮಾನಗಳಿಂದ ದುಡಿದ ಕರಿಯರ ಇಂದಿಗೂ ಬಡತನ, ಅನಾರೋಗ್ಯಕ್ಕೆ ತುತ್ತಾಗಿದ್ದಾರೆ. ಸ್ವಾತಂತ್ರ್ಯ ಕೇಳಿದ ನೇಲ್ಸನ್ ಮಂಡೇಲಾರನ್ನು 27 ವರ್ಷ ಸೆರೆಯಲ್ಲಿಡಲಾಯಿತು. ಸಂವಿಧಾನದ ಅಡಿಯಲ್ಲಿ ವರ್ಣಬೇಧ ನೀತಿಯನ್ನು ಬ್ರಿಟೀಷ್ ಕೈಗೊಂಬೆ ಸರ್ಕಾರ ದಕ್ಷಿಣ ಆಫ್ರಿಕಾದಲ್ಲಿ ಜಾರಿಗೆ ತಂದಿತು. ವರ್ಣಬೇಧ ನೀತಿಯಿಂದಾಗಿ ದಕ್ಷಿಣ ಆಫ್ರಿಕಾ ವರ್ಣಬೇಧ ನೀತಿ ಕೊನೆಗೊಂಡ ನಂತರ ತನ್ನ ಮೊದಲ ಅಂತರಾಷ್ಟ್ರೀಯ ಪಂದ್ಯವನ್ನು ಭಾರತದ ವಿರುದ್ಧ ಕಲ್ಕತ್ತಾದಲ್ಲಿ ಆಡಿದ್ದು ವಿಶೇಷ. ಮುಂದೆ ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರ ಆಡಳಿತ ಕೊನೆಗೊಂಡು ಮಂಡೇಲಾ ರಾಷ್ಟ್ರಾಧ್ಯಕ್ಷರಾದರು. ಇದೀಗ ಈ ಶತಮಾನ ಮೊದಲ ಕ್ರಿಕೆಟ್ ವಿಶ್ವಕಪ್‌ಗೆ ದಕ್ಷಿಣ ಆಫ್ರಿಕಾ ಆಥಿತ್ಯ ನೀಡಿದೆ. ತಾನು ಶತಮಾನಗಳಿಂದ ಉಂಡ ನೋವು ಮರೆಯಲು ಆಫ್ರಿಕಾ ಖಂಡ ಬಿಳಿಯರ ಬಳುವಳಿಯಾದ ಕ್ರಿಕೆಟ್‌ನ ವಿಶ್ವಕಪ್‌ಗೆ ಆತಿಥ್ಯ ನೀಡಿದಂತೆ ಕಂಡುಬರುತ್ತದೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಜನ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH